


ಭವಿಷ್ಯ ವಿಜ್ಞಾನ

ಲೇಖಕ ಜಿ.ಟಿ. ನಾರಾಯಣ ರಾವ್

(1993 ಅತ್ರಿ ಬುಕ್ ಸೆಂಟರ್ ಪ್ರಕಟಣೆ, 1981. ಪುಟ 90. ಬೆಲೆ ರೂ 12)

ಇದರಿಂದ ತೊಡಗಿದಂತೆ ನಾನು ಜಿ.ಟಿ. ನಾರಾಯಣ ರಾಯರ (ನನ್ನ ತಂದೆ,) ಮುದ್ರಣದಲ್ಲಿ ಅಲಭ್ಯ ಕೃತಿಗಳನ್ನೆಲ್ಲಾ ನನ್ನ ಅನುಕೂಲದ ಕಂತುಗಳಲ್ಲಿ ಅಂತರ್ಜಾಲಕ್ಕೇರಿಸಿ, ಸಾರ್ವಜನಿಕಕ್ಕೆ ಮುಕ್ತವಾಗಿಸುತ್ತಿದ್ದೇನೆ. ಇವುಗಳನ್ನು ಮೂಲಕ್ಕೆ ನಿಷ್ಠವಾಗಿ ಅಕ್ಷರಕ್ಷರ ಬೆರಳಚ್ಚಿಸುವ ಕೆಲಸವನ್ನು ನಾನು ಮಾಡುವ ಜೊತೆಗೆ ನನ್ನ ಮಿತಿ ಮತ್ತು ಸೌಕರ್ಯಕ್ಕೆ ನಿಲುಕಿದಂತೆ ಚಿತ್ರಗಳನ್ನೂ ಸೇರಿಸಲಿದ್ದೇನೆ. ಕಾಲಿಕವಾಗಿ ನನ್ನ ಅರಿವಿಗೆ ಬಂದ ತಿದ್ದುಪಡಿಗಳೇನಾದರೂ ಇದ್ದರೆ ನಾನೇ ಅಥವಾ ತಂದೆಯ ವಿಜ್ಞಾನ ಮತ್ತು ಅದರ ಕನ್ನಡ ಪ್ರಸರಣ ಗರಡಿಯಲ್ಲಿ ಪಟ್ಟ ಶಿಷ್ಯನಂತೇ ಪಳಗಿದ ಎ.ಪಿ. ರಾಧಾಕೃಷ್ಣನ (ನನ್ನ ಸೋದರಮಾವ ಗೋವಿಂದಯ್ಯನವರ ಮಗ, ಪುತ್ತೂರಿನ ಸಂತ ಫಿಲೊಮಿನಾ ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕ) ವಿವೇಚನೆ ಬಳಸುತ್ತೇನೆ. ವಿದ್ಯುನ್ಮಾನ ಮಾಧ್ಯಮದ ಅನುಕೂಲದಲ್ಲಿ ಏನಾದರೂ ಸೇತುಗಳನ್ನು ಕಲ್ಪಿಸುವುದಿದ್ದರೆ ಎಂದಿನಂತೆ ನನ್ನ ಜಾಲತಾಣದ ಪೂರ್ಣ ನಿರ್ವಾಹಕ ಅಭಯಸಿಂಹನ (ನನ್ನ ಮಗ) ಪರಿಣತಿಯೂ ತೊಡಗುತ್ತದೆ. ಪ್ರಸ್ತುತ ಪುಸ್ತಕ 'ಭವಿಷ್ಯ ವಿಜ್ಞಾನ' 11 ಡಿಸೆಂಬರ್ 2012 ರಿಂದ 22 ಜನವರಿ 2013ವರೆಗೆ ಏಳು ಮಂಗಳವಾರಗಳ ಕಂತಿನಲ್ಲಿ ಪ್ರಕಟವಾಗಿತ್ತು. www.athreebook.comನಲ್ಲಿ ಈಗಲೂ ಇದನ್ನು ಕೆಲವು ಸಕಾಲಿಕ ಪ್ರತಿಕ್ರಿಯೆಗಳೊಡನೆ ಅಥವಾ ಇಲ್ಲಿ PDF ಆಗಿ ಉಚಿತವಾಗಿ ನಿಮ್ಮ ಸಂಪರ್ಕ ಸಾಧನಕ್ಕೆ ಇಳಿಸಿಕೊಂಡು ಓದಬಹುದು. ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತ

ಅಶೋಕವರ್ಧನ.

ಅರಿಕೆ

ಭವಿಷ್ಯ ವಿಜ್ಞಾನಕ್ಕೂ (futurology) ಫಲಜ್ಯೋತಿಷ್ಯಕ್ಕೂ ಸಾಮ್ಯ ವೈಷಮ್ಯಗಳೇನು? ಎರಡೂ ಮಾನವಕೃತ ಅಧ್ಯಯನಪ್ರಕಾರಗಳು. ಅವು ಭವಿಷ್ಯ ಕುರಿತಂತೆ ಎಣಿಕೆಗಳನ್ನು ಇಲ್ಲವೇ ಊಹೆಗಳನ್ನು ಮಂಡಿಸುತ್ತವೆ. ಮತ್ತು ತಿದ್ದುಪಡಿಗಳನ್ನು ಇಲ್ಲವೇ ಪರಿಹಾರಗಳನ್ನು ಸೂಚಿಸುತವೆ. ಇಲ್ಲಿಗೆ ಸಾಮ್ಯ ಮುಗಿಯುತ್ತದೆ. ವೈಷಮ್ಯ? ಪರಿಪೂರ್ಣ ವಿರೋಧಿಗಳಿವು. ಮೊದಲನೆಯದು ಶುದ್ಧ ವಿಜ್ಞಾನ, ಎರಡನೆಯದು ಅನಿರ್ಬಂಧಿತ ಅವಿದ್ಯೆ. ವಾಸ್ತವವಾಗಿ ಬೌದ್ಧಿಕ ವಂಚನೆಯ ಇನ್ನೊಂದೇ ಹೆಸರು ಫಲಜ್ಯೋತಿಷ್ಯ.

ಫಲಜ್ಯೋತಿಷ್ಯವೂ ಒಂದು ವಿಜ್ಞಾನ (science) ಎಂದು ಈ 'ಪ್ರಾಚೀನ ವಿದ್ಯೆ'ಯ ಆರಾಧಕರು ಘೋಷಿಸುತ್ತಾರೆ. ಖಗೋಳ, ಜೀವ, ಭೌತ, ರಸಾಯನ ಮುಂತಾದ ವಿಜ್ಞಾನ ಪ್ರಕಾರಗಳಲ್ಲಿ ಅನುಸರಿಸುವ ವೈಜ್ಞಾನಿಕ ವಿಧಾನವನ್ನೆ ಫಲಜ್ಯೋತಿಷ್ಯದಲ್ಲಿಯೂ ಅನುಸರಿಸುವುದಾಗಿದೆ. ಅಂದ ಮೇಲೆ ಅವು ಎಷ್ಟರ ಮಟ್ಟಿಗೆ ವಿಜ್ಞಾನಗಳೋ ಇದು (ಫಲಜ್ಯೋತಿಷ್ಯ) ಅಷ್ಟೇ ವಿಜ್ಞಾನ ಎಂದು ಇವರು ವಾದಿಸುತ್ತಾರೆ. ಅಂತಿಮವಾಗಿ ವಾದವೈಖರಿ ಅಲ್ಲ, ಶಬ್ದ ಜಾಲರಿ ಅಲ್ಲ, ಅವರಿವರ ಮಾತೂ ಅಲ್ಲ ಯಾವುದು ವಿಜ್ಞಾನ ಯಾವುದು ಅವಿಜ್ಞಾನ ಎಂದು ನಿರ್ಣಯಿಸುವುದು. ಸಾಕ್ಷಾತ್ ನಿಸರ್ಗವೇ ಇಲ್ಲಿ ನಿರ್ಣಾಯಕ. ಯಾವುದನ್ನು ಅಥವಾ ಏನನ್ನು ನಾವು ವಿಜ್ಞಾನವೆಂದು ಗುರುತಿಸುತ್ತೇವೆ? ನಿಸರ್ಗದ ಯಾವುದೇ ವಿದ್ಯಮಾನ ಕುರಿತಂತೆ ಕಾರ್ಯ ಕಾರಣ ಸಂಬಂಧ ಅನ್ವೇಷಿಸುವ ಪ್ರತಿಯೊಂದು ಪ್ರಯತ್ನವೂ ವಿಜ್ಞಾನವನ್ನು ಬೆಳೆಸಿ ಪೋಷಿಸುತ್ತದೆ. ನೈಸರ್ಗಿಕ 'ಕಾರ್ಯ'ಗಳನ್ನು ಮಾನವಮತಿ ಗಮನಿಸಿ, ಅರ್ಥವಿಸಿ, ವಿಶ್ಲೇಷಿಸಿ, ಪ್ರಯೋಗಿಸಿ, ಅರಿತು ಅವುಗಳ ಹಿನ್ನೆಲೆಯ 'ಕಾರಣ'ಗಳನ್ನು ಮಂಡಿಸಿದಾಗ ವಿಜ್ಞಾನ ಮೈದಳೆಯುತ್ತದೆ. ನಿಸರ್ಗದ ಬಗ್ಗೆ ಮಾನವಮತಿ ಬರೆದ ಭಾಷ್ಯವಿದು, ಮಾಡಿದ ವ್ಯಾಖ್ಯಾನವಿದು. ಇದು ಸರಿಯೇ ತಪ್ಪೇ ಎಂದು ನಿರ್ಣಯಿಸುವವರು ಯಾರು? ನಿಸರ್ಗವೇ ಕಾರಣಕರ್ತ, ಕಾರ್ಯಕರ್ತೃ, ನಿರ್ಣಾಯಕ ದಾತೃ ಎಲ್ಲವೂ ಅದೇ.

ನಿಸರ್ಗಕ್ಕೆ ಯಾವುದೇ ಬಗೆಯ ಮಾನವೀಯ ಗುಣವಿಲ್ಲ. ತನ್ನ ರಹಸ್ಯಗಳನ್ನು (ಸ್ವತಃ ತನ್ನ ಸೃಷ್ಟಿಯಾದ) ಮಾನವನಿಗೆ ತಿಳಿಯಪಡಿಸಬೇಕು ಎನ್ನುವ 'ಸದ್ಬುದ್ಧಿ' ಇದಕ್ಕಿಲ್ಲ, ತಿಳಿಯಪಡಿಸಬಾರದೆಂಬ 'ದುರ್ಬುದ್ಧಿ'ಯೂ ಇಲ್ಲ. ಆದರೆ ಒಂದು ಸಂಗತಿ: ನಿಸರ್ಗ ಸದಾ ತಾರ್ಕಿಕವಾಗಿರುವುದು, ಸಂಗತವಾಗಿರುವುದು, ಕಾರ್ಯಕಾರಣ ಸಂಬಂಧ ಬಂಧಿತವಾಗಿರುವುದು. ಮಾನವ ಇದ್ದರೂ ಇಲ್ಲದಿದ್ದರೂ ಇದು ಇರುವುದು ಹೀಗೆಯೇ, ಸ್ವಯಂಸೃಷ್ಟ ವಿಧಿನಿಯಮ ನಿಯಂತ್ರಿತವಾಗಿಯೇ. ಈ ವಿಧಿನಿಯಮಗಳ ಅನ್ವೇಷಣೆಯೇ ವಿಜ್ಞಾನದ ಪಥ. ಇಲ್ಲಿ ಗಮನವೊಂದೇ ಸಾಧು. ಗಮ್ಯ? ನಾಗರಿಕತೆ ಎಂದೂ ಅದನ್ನು ಐದದು.

ಈ ತತ್ತ್ವಗಳನ್ನೂ ತಥ್ಯಗಳನ್ನೂ ಫಲಜ್ಯೋತಿಷ್ಯಕ್ಕೆ ಅನ್ವಯಿಸಿದರೆ ತಿಳಿಯುವುದೇನು? ಇದು ವಿಜ್ಞಾನವಲ್ಲ, ಜ್ಞಾನವಲ್ಲ, ವಿದ್ಯೆಯಲ್ಲ – ಬದಲು ಅವಿಜ್ಞಾನ, ಅಜ್ಞಾನ, ಅವಿದ್ಯೆ. ಅಸ್ತಿತ್ವರಹಿತ ಊಹೆಗಳ ಗಾಳಿಗೋಪುರವಾಸಿ, ಕುರುಡರೊಡೆಯ ಬಡಬಡಿಸುವ ಅಬದ್ಧ ನುಡಿಗಳ ಅತಾರ್ಕಿಕ ಸರಣಿಯೇ ಫಲಜ್ಯೋತಿಷ್ಯ. ಈ ಕುರಿತು ಆಸಕ್ತ ವಾಚಕರು ನಾನು ಬರೆದಿರುವ ವೈಜ್ಞಾನಿಕ ಮನೋಧರ್ಮ, ಜಾತಕ ಮತ್ತು ಭವಿಷ್ಯ, ಭವಿಷ್ಯ ವಾಚನ, ನೋಡೋಣು ಬಾರಾ ನಕ್ಷತ್ರ, ಸೂಪರ್ನೋವಾ ಮೊದಲಾದ ಪುಸ್ತಕಗಳನ್ನು ಓದಬಹುದು.

ಪ್ರಸಕ್ತ ಪುಸ್ತಕ ಭವಿಷ್ಯವಿಜ್ಞಾನ ಎಂಬ ಪ್ರಕಾರವನ್ನು ವಿವಿಧ ಕೋನಗಳಿಂದ ಪರಾಂಬರಿಸಿರುವ ಒಂದು ಅಧ್ಯಯನ. ನಾಗರಿಕತೆ ನಡೆದುಬಂದ ದಾರಿಯನ್ನು ವೈಜ್ಞಾನಿಕವಾಗಿ ವಿಮರ್ಶಿಸಿ, ವರ್ತಮಾನ ಸ್ಥಿತಿಗಳನ್ನು ಪರಿಶೀಲಿಸಿ, ಮುಂಬರಲಿರುವ ದಿನಗಳ ಬಗ್ಗೆ ಮಾಡಿರುವ ಊಹೆ ಇದರ ಹೂರಣ – ಸರ್ಕಾರದ ವಾರ್ಷಿಕ ಹಣಕಾಸು ಮುಂಗಡ ಪತ್ರದಂತೆ, ಹವೆ ಕುರಿತ ಮುನ್ನೋಟದಂತೆ, ಜನಸಂಖ್ಯೆ ಏರಿಳಿತ ಕುರಿತ ಅಂದಾಜಿನಂತೆ.

ನಾಗರಿಕತೆಯ ಪ್ರಗತಿಗೆ ಪ್ರೇರಕಗಳಾದ ಮೂರು ವಿವಿಕ್ತ ತರಂಗಗಳನ್ನು ಅಲ್ವಿನ್ ಟಾಫ್ಲರ್ The Third Wave ಎನ್ನುವ ಗ್ರಂಥದಲ್ಲಿ ವಿವೇಚಿಸಿದ್ದಾರೆ. ಕೃಷಿತರಂಗ, ಕೈಗಾರಿಕಾತರಂಗ, ಆಧುನಿಕ (ಎಲೆಕ್ಟ್ರಾನಿಕ್) ತರಂಗ, ನೂತನ ಸಂಶ್ಲೇಷಣೆಯ (new synthesis) ಯುಗದಂಚಿನಲ್ಲಿ ಇಂದು ನಾವು ನಿಂತಿದ್ದೇವೆ. ಮೂರನೆಯ ತರಂಗ ಇದರ ಕಾರಣ ಎನ್ನುತ್ತಾರೆ ಟಾಫ್ಲರ್. ಈ ಅಲೆಯ ಹೊಡೆತಕ್ಕೆ ಸಿಕ್ಕಿಹಾಕಿಕೊಂಡಿರುವ ನಾವು ಇದರ ಶಕ್ತಿವಿಶೇಷಗಳನ್ನು ಮಾನವ ಕಲ್ಯಾಣಕ್ಕಾಗಿ ಸಂಶ್ಲೇಷಿಸಿ ಬದುಕನ್ನು ಉಲ್ಲಾಸಮಯ ಮಾಡಿಕೊಳ್ಳುತ್ತೇವೋ ಇಲ್ಲ, ಇದಕ್ಕೆ ಬಲಿಪಶುಗಳಾಗಿ ಸರ್ವನಾಶ ಮಾರ್ಗದಲ್ಲಿ ತಳ್ಳಲ್ಪಡುತ್ತೇವೋ?

ಜಿ.ಟಿ. ನಾರಾಯಣರಾವ್

ಮುನಿದು ಪೊಡವಿ ನುಂಗುವಡೆ

ಶೀರ್ಷಿಕೆಯ ಪೂರ್ಣಪಾಠ ಹೀಗಿದೆ – "ಮುನಿದು ಪೊಡವಿ ನುಂಗುವಡೆ ಮನೆ ತಾಗುವುದೇ? ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವೆಡೆ ಮೆಳೆಗಳಡ್ಡ ಬಹವೇ?" ಉತ್ತರ ತೀರಾ ಸರಳ. ಈ ನೈಸರ್ಗಿಕ ಪ್ರಕೋಪಗಳಿಗೆ ಎದುರಾಗಿ ಮನೆಯಾಗಲಿ ಮೆಳೆಯಾಗಲಿ ನಮಗೆ ಗುರಾಣಿಕಾಪನ್ನು ಒದಗಿಸಲಾರವು. ಇಂಥ ಭೀಕರ ಪರಿಸ್ಥಿತಿ ಮಾನವನಿಗೆ 1970ರ ದಶಕದಲ್ಲಿಯೇ ಎದುರಾಗಿತ್ತು. ಆಗಲೇ ಪರಿಸರ ವಿಜ್ಞಾನಿಗಳು ಎಚ್ಚರಿಕೆಯ ಗಂಟೆ ಬಾರಿಸಿದ್ದರು.

ಯಾವುದೇ ಜೀವಿ (ಸಸ್ಯ ಮತ್ತು ಪ್ರಾಣಿ) ಬದುಕಿ ಬಾಳುವ ಪ್ರದೇಶಕ್ಕೆ ಆ ಜೀವಿಯ ಪರಿಸರವೆಂದು ಹೆಸರು. ನಿರ್ದಿಷ್ಟವಾಗಿ ಹೇಳುವುದಾದರೆ ಜೀವಿಯ ಮೇಲೆ ಪ್ರಭಾವ ಬೀರುವ ಸಕಲ ಬಾಹ್ಯಬಲಗಳ ಮೊತ್ತವೂ ಅದರ ಪರಿಸರವಾಗುತ್ತದೆ. ಉದಾಹರಣೆಗೆ ಮಾನವನನ್ನು ಪರಿಶೀಲಿಸೋಣ. ಇವನಿಗೆ ಉಸಿರಾಡಲು ವಾಯು ಬೇಕು, ನಿಲ್ಲಲು ನೆಲ ಬೇಕು, ತಿನ್ನಲು ಆಹಾರ ಬೇಕು, ಇವನ್ನೆಲ್ಲ ಈತ ಪಡೆಯುವುದು ಪರಿಸರದಿಂದ. ಮಾನವನನ್ನು ಅವನ ಪರಿಸರದಿಂದ ಬೇರ್ಪಡಿಸಿದರೆ ತತ್‌ಕ್ಷಣ ಆತ ಮರಣವಪ್ಪುವುದು ಖಂಡಿತ. ನಮ್ಮ ಎಂದಿನ ಉಡುಪಿನಲ್ಲೇ ನಾವು ಚಂದ್ರನಲ್ಲಿ ಇಳಿದದ್ದಾದರೆ ರಕ್ತನಾಳಗಳು ಒಡೆದು ಆಕ್ಷಣವೇ ಸತ್ತುಹೋದೇವು. (ಭೂ ಪರಿಸರದಲ್ಲಿಯ ವಾಯುಮಂಡಲದ ಸಂಮರ್ದ ಅಲ್ಲಿ ಇಲ್ಲದಿರುವುದರಿಂದ ಹೀಗಾಗುತ್ತದೆ; ಅಂದರೆ ಧಮನಿಗಳಲ್ಲಿ ಹರಿಯುತ್ತಿರುವ ನೆತ್ತರಿನ ನೂಕು ಅಥವಾ ಹೊರಮುಖ ಒತ್ತಡವನ್ನು ಸಂತುಲಿಸಲು ವಾಯುಮಂಡಲದ ಅದುಮಿಕೆ ಅಥವಾ ಒಳಮುಖ ಒತ್ತಡ ಅಗತ್ಯ.)

ಯಾವುದೇ ಜೀವಿಯ ದೃಷ್ಟಿಯಿಂದ ಅದರ ಪರಿಸರದಲ್ಲಿ ಎರಡು ಮುಖ ವಿಭಾಗಗಳನ್ನು ಗುರುತಿಸಬಹುದು: ಇತರ ಜೀವಿಗಳ ಸಮುದಾಯ, ಅಜೈವಿಕ ವಸ್ತುಗಳ ಸಮುದಾಯ. ಮಾನವನನ್ನು ಕುರಿತಂತೆ ಪ್ರಾಣಿ ಹಾಗೂ ಸಸ್ಯ ಪ್ರಪಂಚ ಇತರ ಜೀವಿಗಳ ಸಮುದಾಯವಾಗುತ್ತದೆ; ಗಾಳಿ ನೀರು, ಮಣ್ಣು ಮುಂತಾದವು ಅಜೈವಿಕ ವಸ್ತುಗಳ ಸಮುದಾಯವಾಗುತ್ತದೆ.

ಪರಿಸರದ (ನಿಸರ್ಗದ ಅನ್ನಿ ಬೇಕಾದರೆ) ಸುದೀರ್ಘ ಪ್ರಯೋಗದ ಫಲ ಜೀವಿ. ಇದರ ಉಳಿವಿಗೆ ಬಾಳ್ವೆಗೆ ಪರಿಸರ ಅತ್ಯಗತ್ಯ. ಆದ್ದರಿಂದ ಪರಿಸರವಿಲ್ಲದೇ ಜೀವಿ ಇಲ್ಲ. ಆದರೆ ಜೀವಿ ಇಲ್ಲದಿದ್ದರೂ ಪರಿಸರ ಉಳಿದೀತು. (ಇದನ್ನು ಆಗ ಪರಿಸರವೆಂದು ಕರೆಯುವುದಿಲ್ಲ ಮಾತ್ರ.) ಉದಾಹರಣೆಗೆ ಚಂದ್ರ, ಶುಕ್ರ, ಸೂರ್ಯ ಮುಂತಾದ ಆಕಾಶಕಾಯಗಳಲ್ಲಿ ಪರಿಸರವಿದ್ದರೂ ಜೀವಿ ಇಲ್ಲ. ನಮ್ಮ ಭೂಮಿಯಲ್ಲೇ ಜೀವಿರಹಿತ ಪ್ರದೇಶಗಳು ಸಾಕಷ್ಟು ಇವೆ.

ಜೀವಿಯನ್ನು ಸೃಷ್ಟಿಸಿದ್ದು ಪರಿಸರ ನಿಜ. ಆದರೆ ಮುಂದೆ ಜೀವಿಯೂ ಪರಿಸರವನ್ನು ಸೃಷ್ಟಿಸದೆ (ಅಥವಾ ಪ್ರಭಾವಿಸದೆ) ಇಲ್ಲ. ಹವಳದ ದಿಬ್ಬಗಳು, ನಿಬಿಡ ಕಾನನಗಳು, ವಿಶಾಲ ಹುಲ್ಲುಗಾವಲುಗಳು, ಮಾನವಕೃತ ಭೂಕೃಷಿ ಇವೆಲ್ಲವೂ ಪರಿಸರದ ಮೇಲೆ ಜೀವಿ ಬೀರಿರುವ ಪ್ರಭಾವಕ್ಕೆ ನಿದರ್ಶನಗಳು. ಈ ಅಂತರಕ್ರಿಯೆಗಳು ಲಕ್ಷಾಂತರ ವರ್ಷಗಳಿಂದ ಎಡೆಬಿಡದೆ ಮಂದಗತಿಯಲ್ಲಿ ನಡೆದುಕೊಂಡು ಬಂದಿರುವುದರಿಂದ ನಿಸರ್ಗದ ಸಮತೋಲ ಎಂದೂ ವಿಶೇಷವಾಗಿ ಕದಲಲಿಲ್ಲ.

ಸ್ಪರ್ಧಾತ್ಮಕವಾದ ಈ ಪ್ರಪಂಚದಲ್ಲಿಯ ಹೋರಾಟದ ಬದುಕಿನಲ್ಲಿ ಸಾಹಸ ಪ್ರವೃತ್ತಿಯ ಜೀವಿಗಳ ಸಂಖ್ಯೆಯಲ್ಲಿ ಇರುವ ಒಂದು ಹದವೇ ನಿಸರ್ಗದ ಸಮತೋಲ. ಲಭ್ಯ ಆಹಾರ ಹಾಗೂ ಇತರ ಆವಶ್ಯಕ ವಸ್ತುಗಳನ್ನು ಇದು ಅವಲಂಬಿಸಿದೆ. ಇಲಿಗಳು ಮಿತಿ ಮೀರುವಂತಿಲ್ಲ – ಹಾವುಗಳಿವೆ. ಹಾವುಗಳು ಮಿತಿ ಮೀರುವಂತಿಲ್ಲ – ಮುಂಗುಸಿಗಳಿವೆ, ಇತ್ಯಾದಿ. ಅರ್ಥಾತ್ ನಿಸರ್ಗ (ಅಥವಾ ಪರಿಸರ) ಅವ್ಯಕ್ತವಾದ ಒಂದು ವಿಧಾನದಿಂದ ಜೀವಿಗಳ ಸಮಗ್ರತೆಯಲ್ಲಿ ಸಮತೋಲನವನ್ನು ಕಾದಿರಿಸಲು ಪ್ರಯತ್ನಿಸುತ್ತಿದೆಯೋ ಎಂಬಂತೆ. ಇದೊಂದು ಸರಪಳಿ ಕ್ರಿಯೆ. ಸರಪಳಿಯ ಕೊಂಡಿಗಳೂ ಶಾಖೋಪಶಾಖೆಗಳೂ ಅಸಂಖ್ಯಾತ. ಹೀಗೆ ನಿಸರ್ಗದ ಸಮತೋಲ ಒಂದು ವಿಧವಾದ ಆಂತರಿಕ ಗತ್ಯಾತ್ಮಕ ಹೊಂದಾಣಿಕೆ.

ಇಂಥ ನೈಸರ್ಗಿಕ ಕಾರಕಗಳ ಪ್ರಭಾವವನ್ನು ಹಠಾತ್ತಾಗಿ ತಡೆಗಟ್ಟಿದುದಾದರೆ ಅಥವಾ ನಿಶ್ಚಿತ ರಂಗಗಳಲ್ಲಿ ವೇಗೋತ್ಕರ್ಷಿಸಿದುದಾದರೆ ಅದರಿಂದ ನಿಸರ್ಗದ ಸಮತೋಲಕ್ಕೆ ಭಂಗ ತಟ್ಟುತ್ತದೆ. ಒಂದು ವಲಯದಲ್ಲಿ

ಕಂಡುಬಂದ ಕೊರತೆ ಸಾರ್ವತ್ರಿಕವಾಗಿ ಹಬ್ಬುವುದು ಅನಿವಾರ್ಯ. ಹುಲಿಗಳ ನಿರ್ಮೂಲನ ಜಿಂಕೆಗಳ ಅತಿವೃದ್ಧಿಗೂ ಜಿಂಕೆಗಳ ಅತಿವೃದ್ಧಿ ಪೈರಿನ ನಾಶಕ್ಕೂ ಪೈರಿನ ನಾಶ ಮಾನವನ ಆರ್ಥಿಕತೆಯ ಏರುಪೇರಿಗೂ ಕಾರಣವಾಗುವುದು ಒಂದು ಉದಾಹರಣೆ. ಕಾಡಿಗೆ ಹೊಡೆದ ಕೊಡಲಿ ಪೆಟ್ಟು ನಾಡಿಗೆ ದಾಳಿ ಇಡುವ ಸಲಗದಲ್ಲಿ ಕೊನೆಗಾಣುವುದು ಅಪರೂಪವೇನಲ್ಲ.



ಬದುಕನ್ನು ಹಸನುಗೊಳಿಸಲು ಯಂತ್ರ ಸ್ಥಾವರಗಳನ್ನು ಸ್ಥಾಪಿಸಲಾಯಿತು. ಇದಕ್ಕಾಗಿ ವಿಶಾಲ ಪ್ರದೇಶಗಳಲ್ಲಿ ನಿಸರ್ಗವನ್ನು ಬೋಳಿಸಿ ಭಾರೀ ಕಟ್ಟಡಗಳನ್ನೂ ಕಾರ್ಖಾನೆಗಳನ್ನೂ ಕಟ್ಟಲಾಯಿತು. ಈ ಕಾರ್ಖಾನೆಗಳ ಉತ್ಪಾಟನೆಗಳು (ಅಂದರೆ ಕಲುಷಿತ ರಾಸಾಯನಿಕ ಮಿಶ್ರಿತ ದ್ರವ, ಹೊಗೆ, ದೂಳು, ಹರಟೆ, ಕಟ್ಟಡದ ಪೇರಿಕೆ ಇತ್ಯಾದಿ) ಅದೇ ಮಾನವನ ಬದುಕನ್ನು ಅಸಹನೀಯವಾಗಿ ಮಾಡುವುದನ್ನು ಕಾಣುವಾಗ ನಮ್ಮ ಒಟ್ಟು ಗಣನೆಗಳಲ್ಲಿ ಏನೋ ತಪ್ಪು ನುಸುಳಿದೆ ಎಂಬುದು ಸ್ಪಷ್ಟ.

ಪರಿಸರದ ಬಲಗಳೊಡನೆ ಪ್ರಗತಿಯ ಹೆಸರಿನಲ್ಲಿ ಸೆಣಸುತ್ತಿರುವ ತಂತ್ರವಿದ್ಯಾವಿಶಾರದ ಮಾನವ ಮಾಡಿರುವುದಾದರೂ ಏನು? ನಿಸರ್ಗದ ಸಮತೋಲಕ್ಕೆ ಬತ್ತಿ ಇಟ್ಟಿರುವುದು. ಇದರ ವಿಷಫಲವೇ ಪರಿಸರ ಮಾಲಿನ್ಯ, ಮಾನವ ಜೀವನದ ಪೂರ್ಣಾಹುತಿಯನ್ನು ತೆಗೆದುಕೊಳ್ಳಲು ಎದ್ದಿರುವ ಹೊಸ ಹಾಲಾಹಲ. ಇದರಿಂದ ವಿಮೋಚನೆ ಪಡೆದು ಬಾಳುವುದು ಖಂಡಿತ ಸಾಧ್ಯವುಂಟೆಂದು ಪರಿಸರ ವಿಜ್ಞಾನಿಗಳು ಪದೇ ಪದೇ ಹೇಳುತ್ತ ಬಂದಿದ್ದಾರೆ. ಪರಿಸರಮಾಲಿನ್ಯ ಉಲ್ಬಣಾವಸ್ಥೆಗೆ ಹೋಗಿರುವ ಈಚಿನ ದಿನಗಳಲ್ಲಿ ಇವರ ಮಾತಿಗೆ ಅಧಿಕಾರವಲಯಗಳಲ್ಲಿ ಹೆಚ್ಚಿನ ತೂಕ ಬಂದಿದೆ.

ಜೀವಿಗಳು ಮತ್ತು ಅವುಗಳ ಪರಿಸರವನ್ನು ಶಾಸ್ತ್ರೀಯವಾಗಿ ಅಭ್ಯಸಿಸುವ ವಿಜ್ಞಾನ ವಿಭಾಗವೇ ಪರಿಸರ ವಿಜ್ಞಾನ. ನಿಸರ್ಗದ ಸಮತೋಲನವನ್ನು ಕುರಿತ ಅಧ್ಯಯನವಿದು. ಜೀವಿಗಳ ಅಂತರಸಂಬಂಧಗಳನ್ನೂ ಅಂತರಕ್ರಿಯೆಗಳನ್ನೂ ಪರಿಸರ ವಿಜ್ಞಾನದಲ್ಲಿ ಪರಿಶೀಲಿಸಲಾಗುವುದು. ಜೀವವಿಜ್ಞಾನದ ಶಾಖೆಯಾದ ಇದಕ್ಕೆ 1960ರಿಂದ ಈಚೆಗೆ ಸ್ವತಂತ್ರವಾದ ಮತ್ತು ಮುಖ್ಯವಾದ ಒಂದು ವಿಜ್ಞಾನ ವಿಭಾಗ ಎಂಬ ಅಂತಸ್ತು ಪ್ರಾಪ್ತವಾಗಿದೆ.

ಶುಕ್ರಾವತರಣ

ಭೂಮಿಯಿಂದ ಕಾಣುವ ಪ್ರಕಾರ, ಮತ್ತು ಮಾನವ ನಿಯೋಗಿಗಳಾದ ಉಪಗ್ರಹಗಳು ಶುಕ್ರನನ್ನು ಸಮೀಪದಿಂದ ವೀಕ್ಷಿಸಿ ಭೂಮಿಗೆ ವರದಿ ಸಲ್ಲಿಸಿರುವ ಪ್ರಕಾರ ಅದೊಂದು ಅನಿಲಾವರಣಾಚ್ಛಾದಿತ ವಿಸ್ಮಯಕಾಯ. ಸರಳ ಭಾಷೆಯಲ್ಲಿ ಮುಸುಕು ತೆಗೆಯದ ಮಾಯಾಂಗನೆ. ಮುಸುಕಿನೊಳಗೆ ಧಗಧಗಿಸುವ ಕುಂಭೀಪಾಕ ಇರಬಹುದೆಂದು ಊಹೆ. ಇಡೀ ಭೂಮಿಯನ್ನು ದಟ್ಟ ಮೋಡ ಸುತ್ತುವರಿದುಕೊಂಡಿದ್ದರೆ ಅನ್ಯ ಗ್ರಹದಿಂದ ಭೂಮಿ ದರ್ಶನಾರ್ಥ ಬರುವ ಜೀವಿಗೆ ಏನು ದೃಶ್ಯ ಕಾಣಬಹುದೋ ನಮ್ಮ ಗಗನ ನೇತ್ರಕ್ಕೆ ಕಾಣುವ ಶುಕ್ರನ 'ಪೋಸ್' ಅದು. ಇಂಥ ಒಂದು ಅನುಭವ ಕೆಲವು ವರ್ಷಗಳ ಹಿಂದೆ ಖುದ್ದು ನನಗೆ ಇದೇ ಸುಂದರ ವಸುಂಧರೆಯಲ್ಲಿ ಒದಗಿತ್ತು.

ನಾನು ಮೈಸೂರಿನ ಒಂದು ಬಡಾವಣೆಯ ನಿವಾಸಿ. ಇಲ್ಲಿ ವಾತಾವರಣ ಸಾಕಷ್ಟು ಶಾಂತವಾಗಿ ಇಂದಿಗೂ (1993) ಇದೆ! ನನ್ನ ಮನೆಯ ಕಕ್ಕಟ್ಟಿನ ಒಳಗೆ ಮತ್ತು ಅಕ್ಕಪಕ್ಕದ ಮನೆಗಳ ಒಳಗೆ ಕೂಡ ತಕ್ಕಮಟ್ಟಿಗಾದರೂ ಹಸುರು ಕಂಗೊಳಿಸುತ್ತಿದೆ. ಎಳೆ ಮುಂಜಾನೆಯ ತಾಸುಗಳಲ್ಲಿ ಇದು ಥೇಟ್ ಹಳ್ಳಿಯಂತೆಯೇ ಇರುವುದು – ಶಬ್ದರಾಹಿತ್ಯದಲ್ಲಿ. ಆದರೆ ಹಕ್ಕಿಗಳ ಇಂಚರ ಇಲ್ಲಿಲ್ಲ. ನೇಸರು ಏರಿದಂತೆ ರಸ್ತೆಯಲ್ಲಿಯ ಆಟೋ ಆರ್ಭಟ, ಬಸ್ಸು ಲಾರಿಗಳ ಹರಟೆಯ ಜೊತೆಗೆ ಅವು ಉರುಚುವ ದಟ್ಟ ಕಪ್ಪಿನ ಹೊಗೆ ಇವುಗಳಿಂದ ಈ ಪ್ರದೇಶ ಕೂಡ ಬದುಕಲು ಅಸಹನೀಯವಾಗುತ್ತಿದೆ. ಆದರೆ ದಿಲ್ಲಿ, ಮುಂಬಯಿ, ಕೊಲ್ಕತ್ತಾಗಳಿಂದ ಬರುವ ನನ್ನ ಮಿತ್ರರು ಮಾತ್ರ "ಎಂಥಾ ಋಷ್ಯಾಶ್ರಮ ಕಟ್ಟಿಕೊಂಡು ಹಾಯಾಗಿದ್ದೀರಲ್ಲ" ಎಂದು ನನಗೆ ಅಭಿನಂದನೆ ಸಲ್ಲಿಸುತ್ತಾರೆ.

ಅಪರೂಪಕ್ಕೆ ನಾನು ಬೆಂಗಳೂರಿಗೆ ಹೋಗುವುದುಂಟು. ಎಷ್ಟು ಬೇಗನೆ ಅಲ್ಲಿಂದ ತೊಲಗಿ ಹೋದೇನೆಂಬುದು ಅಲ್ಲಿ ಮೊದಲು ಮೂಡುವ ಭಾವನೆ. ಇಡೀ ನಗರಕ್ಕೆ ದುರ್ವಾಸನೆ ಸಿಂಪಡಿಸಿರುವಂತೆ ಅನ್ನಿಸುತ್ತದೆ. ಕಟ್ಟಡಗಳ, ವಾಹನಗಳ ಮತ್ತು ಜನರ ನೀರಸ ಯಾಂತ್ರಿಕತೆ, ಹುಚ್ಚು ಅಲೆತ ಮೊರೆತ ಮತ್ತು ಗಬ್ಬು "ಎನ್ನನ್ನು ಕುರುಡನನ್ನಾಗಿ ಮಾಡಯ್ಯ, ಕಿವುಡನನ್ನಾಗಿ ಮಾಡಯ್ಯ, ಮೂಗಿಲ್ಲದವನನ್ನಾಗಿ ಮಾಡಯ್ಯ" ಎಂದು ಮೊರೆಯಿಡುವಂತೆ ಮಾಡುತ್ತವೆ.

ಕೆಲವು ವರ್ಷಗಳ ಹಿಂದೆ ಸಾಕ್ಷಾತ್ ಮುಂಬಯಿಗೆ ವಿಮಾನದಲ್ಲಿ ಹಾರಿ ಹೋಗಿ ಇಳಿದು ಅಲ್ಲಿ ಒಂದಿಷ್ಟು ದಿವಸ ಇರುವ ಸುಯೋಗ (?) ಲಭಿಸಿತ್ತು. ವಿಮಾನ ನೆಲಕ್ಕೆ ಇಳಿಯುವ ಮುನ್ನ ಮಡಿಕೇರಿಯ ಮಂಜನ್ನು ಬೇಸಗೆಯ ಆ ಸಂಜೆ ಅಲ್ಲಿ ಕಂಡು ನನ್ನ ಭೂಗೋಳದ ಪಾಠಗಳನ್ನು ಮರುಜಪಿಸಿದೆ. ನನ್ನ ನೆನಪು ತಪ್ಪಿರಲಿಲ್ಲ. ಅನುಭವ ಮಾತ್ರ ಆ ಸೀಮೆಗೆ ತಲಪಿರಲಿಲ್ಲ. ಅದು ಮಂಜಲ್ಲ, ನಗರದ ಪಾಪಾವಶೇಷದ ಮುಸುಕು. ದೈತ್ಯ ಯಂತ್ರ ಸ್ಥಾವರಗಳ ರಾಕ್ಷಸಾಕಾರದ ಚಿಮಣಿಗಳು ನಿರಂತರವಾಗಿ ಕಾರುತ್ತಿದ್ದ ರಾಸಾಯನಿಕ ಧೂಮದ ಕವಚ. ಇಡೀ ಮುಂಬಯಿ ಒಂದು ಬೃಹತ್ ಅನಿಲಕೋಷ್ಠ. ಅಲ್ಲಿ ನಾನಿದ್ದ ಹತ್ತು ದಿವಸಗಳ ಕಾಲ ಉಸಿರಾಟಕ್ಕಾಗಿ ಚಡಪಡಿಸಿದ್ದುಂಟು. ನನ್ನ ಬಿಳಿ ಬಟ್ಟೆ ಎಲ್ಲವೂ ಮಸಿಲೇಪಿತವಾಗಿ ಮಡಿಕೆಗಳಿರುವಲ್ಲಿ ಕರಿಪಟ್ಟಿಗಳಿಂದ ಅಲಂಕೃತವಾಗಿ ಹೊಸ 'ಮೆರುಗ'ನ್ನು ಪಡೆದುವು. ಖಂಡಿತ ಮಾನವ ಈ ಕುಂಭೀಪಾಕದಲ್ಲಿ ತೊಳಲಲೆಂದು ಹುಟ್ಟಿದವನಲ್ಲ.

ನಾನು ಮಡಿಕೇರಿಯವ. ಕೊಡಗಿನ ಒಂದೊಂದು ಗಿರಿಶಿಖರವೂ ಕಾಡು ಕಂದರಗಳ ಆಳವೂ ಹೊಳೆ ತೊರೆಗಳ ಹರಿವೂ ನನಗೆ ವಿಶೇಷ ಸಂದೇಶ ಮತ್ತು ಶಿಕ್ಷಣ ನೀಡಿ ನನ್ನನ್ನು ಬೆಳೆಸಿವೆ. ಹಸುರು ಹುಚ್ಚೆದ್ದು ಹರಿಯುತ್ತಿದ್ದ ಈ ನೆಲದಲ್ಲಿ "ನೀಂ ನಡೆದು ನೋಡು ಕೊಡಗಿನ ಬೆಡಗಂ" ಎಂಬ ಕವಿ ಉದ್ಗಾರವನ್ನು ಸಹಜವಾಗಿ ಗಳಿಸಿದ್ದ ಈ ಕಾವೇರಿ ಮಂಡಲದಲ್ಲಿ, ಈಗ (1993) ಬೋಳು ಬೆಟ್ಟಗಳು, ಹಾಳು ಹಾದಿಗಳು, ಬರಡು ಹೊಳೆಗಳು ಗೋಗರೆಯುತ್ತಾ ಮೂಕ ವೇದನೆಯನ್ನು ಪ್ರದರ್ಶಿಸುತ್ತಿವೆ.

ಯಾವುದೇ ದಿನ ನೀವು ಮೈಸೂರಿನಿಂದ ಮಡಿಕೇರಿ ಹಾದಿಯಾಗಿ ಮಂಗಳೂರಿಗೆ ಪಯಣಿಸಿ ನೋಡಿ, ಎಷ್ಟೊಂದು ಭರ್ತಿ ಸೌದೆ ಲಾರಿಗಳು ನಿಮ್ಮನ್ನು ಅಡ್ಡಹಾಯುತ್ತವೆ. ಎಂಟು ಗಂಟೆಗಳ ಪಯಣದ ವೇಳೆ ಏನಿಲ್ಲ ಎಂದರೂ ಹತ್ತು ಲಾರಿಗಳನ್ನು ನಾನು ಎಣಿಸಿದ್ದುಂಟು. ನಾಗರಿಕ ಮಾನವ 'ಝೀರೋ ಮಶೀನ್' ಹೊಡೆದು ಪ್ರಕೃತಿಯ ಹರವನ್ನು ಬೋಳಿಸಿದ್ದಕ್ಕೆ ಅವು ಕೆಲವೇ ಜಂಗಮ ನಿದರ್ಶನಗಳು ಮಾತ್ರ. ಕೊಡಗಿನ ಅನೇಕ ಕಡೆಗಳಲ್ಲಿ ಈಗ ಬೇಸಗೆಯಲ್ಲಿ ಕುಡಿವ ನೀರಿಗೆ ಬರ ಎಂಬ ಹೊಸ ಸಮಸ್ಯೆ ಉದ್ಭವಿಸಿದೆ. ಋತುಗಳ ಪುನರಾವರ್ತನೆಯಲ್ಲಿ ಏರುಪೇರು, ಅತಿವೃಷ್ಟಿ ಅನಾವೃಷ್ಟಿಗಳ ಭೀಕರ ಪ್ರಹಾರ, ತತ್ಪರಿಣಾಮವಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ತಲೆದೋರಿರುವ ಕ್ಷೋಭೆ ಇವೆಲ್ಲವುಗಳಿಗೂ ಕಾರಣವನ್ನು ನಿಸರ್ಗದ ಅವ್ಯಾಹತ ಸೂರೆಯಲ್ಲಿ ಕಾಣುವುದು ಕಷ್ಟವಲ್ಲ.



ನಾನು ಕಟ್ಟಾ ಸಸ್ಯಾಹಾರಿ. ಒಂದು ಜಿರಲೆಯನ್ನು ಕೊಲ್ಲುವುದೂ ನನ್ನಿಂದಾಗದು. ಹೇಡಿ ಅನ್ನಿ ಬೇಕಾದರೆ. ಆದರೆ ನಮ್ಮೂರಿನ ಮಹಾಪರಾಕ್ರಮಿಗಳು ಬೇಟೆ ಆಡುವ ವೈಖರಿ ನೋಡಿ. ಹುಲಿ, ಚಿರತೆ ಇಲ್ಲವೇ ಕಾಡುಹಂದಿ ಇವರ ಲಕ್ಷ್ಯ. (ಈಗೀಗ ಇವನ್ನು ಮೃಗಶಾಲೆಗಳಲ್ಲಿಯ ತೀರಾ ಅಸ್ವಾಭಾವಿಕ ಪರಿಸರದಲ್ಲಿ ಮಾತ್ರ ನೋಡಬಹುದಷ್ಟೆ.) ಅದರ ಹತ್ತಿರ ಯಾವ ಶಸ್ತ್ರವೂ ಇಲ್ಲ. ಅದಕ್ಕೆ ಬೇಟೆಯ ಯಾವ ಹಿಕ್ಮತ್ತೂ ತಿಳಿದಿಲ್ಲ. ಅದರ ವಿರುದ್ಧ ನಮ್ಮ ಬುದ್ಧಿವಂತರ ಹೊಂಚೇನು, ಸಂಚೇನು, ಶಸ್ತ್ರಾಸ್ತ್ರಗಳ ಅಟ್ಟಹಾಸವೇನು? ಆ ನಿರಪರಾಧಿಯನ್ನು ಇರುಕಿನಲ್ಲಿ ಸಿಲುಕಿಸಿ, ಅದು ಆತ್ಮರಕ್ಷಣೆಗಾಗಿ ಏನಾದರೂ ಮಾಡಿದಾಗ ಅದನ್ನು ಕ್ರೌರ್ಯ ಎಂದು ಸಾರಿ ಸಾರ್ವಜನಿಕವಾಗಿ ಕೊಲೆಗೈದು ಮೆರೆಯುವ ಅತಿರಥಮಹಾರಥರ ಮರ್ಜಿ ನನಗೆ ಅರ್ಥವಾಗುವುದಿಲ್ಲ.

'ಕವಿಶಿಷ್ಯ' ಪಂಜೆ ಮಂಗೇಶರಾಯರು (1874–1937) ತಾವು ಕಂಡು ನಲಿದ ಕೊಡಗನ್ನು ಕುರಿತು ಬರೆದರು "ಇದು ಅಗಸ್ತ್ಯನ ತಪದ ಮಣೆ ಕಾವೇರಿತಾಯ ತವರ್ಮನೆ." ಅದೇ ಪಂಜೆಯವರು ಇಂದಿನ ಕೊಡಗನ್ನು (ಅಷ್ಟೇಕೆ ಭಾರತದ ಯಾವುದೇ ಅರಣ್ಯವಲಯವನ್ನು – ಹಾಗೆಂದರೇನು? – ಇಲ್ಲವೇ ನಿಸರ್ಗರಮ್ಯ ಪ್ರದೇಶವನ್ನು) ನೋಡಿದ್ದರೆ, ಪ್ರಾಯಶಃ ಹೀಗೆ ಬರೆದಿರುತ್ತಿದ್ದರು: "ಇದು ಕಿರಾತರ ಬೇಟೆಕಳ ಮರಕಟುಕರಾಡುಂಬೊಲವಲ!"

ನಿಸರ್ಗದ ನಿರಂತರ ಕಬಳಿಕೆ, ಸೂರೆ, ದರೋಡೆಗಳು ತೊಡಗಿದ್ದು ಇಂದು ನಿನ್ನೆ ಅಲ್ಲ. ಆದರೆ ಕಳೆದ ಸಮಸ್ತ ಶತಮಾನಗಳಲ್ಲಿಯೂ ನಡೆಯದಿದ್ದಷ್ಟು ಹಾನಿ ಈ ಶತಮಾನದಲ್ಲಿ ನಡೆದುಹೋಗಿದೆ. ಪರಿಸರದ ಶಿಶುವಾದ ಮಾನವ ನಡೆಸುತ್ತಿರುವ ಈ ಘೋರ ಹತ್ಯಾಕಾಂಡದ ಪರಿಣಾಮವಾಗಿ ಭೂಗೋಳದಲ್ಲಿ ಸಾಕಷ್ಟು ಅಸ್ತವ್ಯಸ್ತಗಳು ತಲೆದೋರಿವೆ. ಇವು ಅಂತಿಮವಾಗಿ ಸ್ವತಃ ಮಾನವನಿಗೆ ಮುಳುವನ್ನು ತಂದೊಡ್ಡದಿರವು (ಈಗಾಗಲೇ ತಂದೊಡ್ಡಿವೆ) ಎಂಬುದಾಗಿ ಪರಿಸರ ವಿಜ್ಞಾನಿಗಳು ಪದೇ ಪದೇ ಎಚ್ಚರಿಸುತ್ತಿದ್ದಾರೆ. ಭೂಮಂಡಲದ ಯಾವ ಭಾಗವೂ ಇಂದು ಪರಿಸರ ಮಾಲಿನ್ಯದಿಂದ ವಿಮೋಚಿತವಾಗಿಲ್ಲ ಎಂಬುದಾಗಿ ಸಾಕ್ಷ್ಯಾಧಾರಗಳಿಂದ ರುಜುವಾತಿಸುತ್ತಿದ್ದಾರೆ.

ಮಂಗಳೂರು, ಅಮ್ಮಸಂದ್ರ, ದಾಂಡೇಲಿ, ಭದ್ರಾವತಿ, ಹರಿಹರ, ಕಾರವಾರ, ಈಗ ಮೈಸೂರು ಕೂಡ ಮುಂತಾದ ಪ್ರದೇಶಗಳಲ್ಲಿ ವಾಸಿಸುವವರಿಗೆ ಪರಿಸರ ಮಾಲಿನ್ಯದ ಪ್ರತ್ಯಕ್ಷ ಅನುಭವ ಸಾಕಷ್ಟು ಆಗಿದೆ, ಆಗುತ್ತಿದೆ.

ಪರಿಸರದರ್ಶನ

ಕವಿ ಖಲೀಲ್ ಗಿಬ್ರಾನ್ ಬರೆದಿರುವ Vision ಭಾವಾನುವಾದ:

ಸ್ಫಟಿಕ ನಿರ್ಮಲ ಸಲಿಲದ ತೊರೆ, ಬಳಿಯಲ್ಲೇ ಹುಲುಸಾದ ಹೊಲ. ನಡುವಿನಲ್ಲೊಂದು ಹಕ್ಕಿಪಂಜರ – ಒಬ್ಬ ಯಂತ್ರಪರಿಣತ ರಚಿಸಿದ ಕಲಾಕೃತಿಯೋ ಎಂಬಂತಿತ್ತು ಅದರ ಸರಳುಗಳ ಜೋಡಣೆ ಮತ್ತು ಬಿಜಾಗರದ ಅಳವಡಿಕೆ. ಪಂಜರದ ಮೂಲೆಯಲ್ಲೊಂದು ಮೃತಪಕ್ಷಿ. ಎದುರು ಮೂಲೆಯಲ್ಲಿ ಎರಡು ಬೋಗುಣಿಗಳು: ಒಂದರಲ್ಲಿ ನೀರು ಖಾಲಿ, ಇನ್ನೊಂದರಲ್ಲಿ ಕಾಳು ನಾಸ್ತಿ. ಅಲ್ಲೇ ನಿಂತೆ ನಿವೇದಿತನಾಗಿ – ಆ ಜೀವರಹಿತ ಪಕ್ಷಿ ಮತ್ತು ನೀರಿನ ಕಲರವ ಎರಡೂ ಗಂಭೀರ ಮೌನ ಮತ್ತು ಪರಮಗೌರವ ಭಾಜನವಾಗಿದ್ದುವೋ ಹೃದಯ ಮತ್ತು ಮನಸ್ಸಾಕ್ಷಿಗಳ ಪರಿಗಣನೆಗೆ ಅರ್ಹವಾದ ವಿಶೇಷಗಳೋ ಎಂಬಂತೆ.

ನೋಡುತ್ತ ಬಗೆಯುತ್ತ ತನ್ಮಯತೆ ತಳೆಯುತ್ತ ನಿಂತಿದ್ದಂತೆ ಗೊತ್ತಾಯಿತು: ಬಾಳ ತೊಟ್ಟಿಲಾದ ನೀರ ಸೆಲೆಯ ಬಳಿಯಲ್ಲೇ ಆ ಮುಗ್ಧ ಜಂತು ತೃಷೆಯಿಂದ, ಅಂತೆಯೇ ಸಮೃದ್ಧ ಪೈರು ಪಚ್ಚೆಯ ಕಡಲ ನಡುವಲ್ಲೇ ಹಸಿವಿನಿಂದ ಅಸುನೀಗಿತ್ತು – ಕಬ್ಬಿಣದ ಪೆಠಾರಿಯೊಳಗೆ ಬಂಧಿತನಾದ ಶ್ರೀಮಂತ, ಹೊನ್ನ ಹೆಗ್ಗಗಳ ನಡುವೆಯೇ ಅಶನವಿಲ್ಲದೆ ಮಡಿದಂತೆ.

ನನ್ನ ಕಣ್ಣೆದುರೇ ಹಠಾತ್ತನೆ ಆ ಪಂಜರ ಮಾನವ ಕಂಕಾಲವಾಗಿಯೂ ಮೃತಪಕ್ಷಿ ಮಾನವ ಹೃದಯವಾಗಿಯೂ ರೂಪ ಪರಿವರ್ತನೆಗೊಂಡುದನ್ನು ಕಂಡೆ. ದುಃಖತಪ್ತ ಸ್ತ್ರೀಯ ತುಟಿಗಳಿಂದ ರಕ್ತ ಒಸರುವಂತೆ ಆ ಹೃದಯದಿಂದ ಜೀವರಸ ಜಿನುಗುತ್ತಿತ್ತು. ಗಾಯಕ್ಕೆ ಬಂತು ಬಾಯಿ "ನಾನು ಮಾನವ ಹೃದಯ – ವಿಧಿಜಾಲಗಳ ಕೈದಿ, ನೆಲದ ನಿಯಮಗಳ ಬಂಧಿ.

"ಭಗವಂತನ ಔದಾರ್ಯಸಾಗರದ ವಿಸ್ತಾರದಲ್ಲಿ, ಈ ಜೀವನದಿಯ ಅಂಚಿನಲ್ಲಿ, ನಾನು ಮನುಷ್ಯಕೃತ ಬೋನಿನಲ್ಲಿ ಸೆರೆಹಿಡಿಯಲ್ಪಟ್ಟೆ.

"ಭಗವಂತ ಅನುಗ್ರಹಿಸಿದ ಸಮೃದ್ಧಿಯನ್ನು ಸವಿಯುವ ಮುಕ್ತಾವಕಾಶ ವಂಚಿತನಾಗಿ ಸುಂದರಸೃಷ್ಟಿಯ ನಡುವಿನಲ್ಲೇ ಮರಣವಪ್ಪಿದೆ.

"ನನ್ನೊಳಗೆ ಅನುರಾಗ ಮತ್ತು ಹಂಬಲ ಪ್ರೇರಿಸುವ ಸೌಂದರ್ಯದ ಪ್ರತಿಯೊಂದು ಛಾಯೆಯೂ ಮನುಷ್ಯನ ದೃಷ್ಟಿಯಲ್ಲಿ ಅಸಹ್ಯ. ಒಳ್ಳೆಯದೆಲ್ಲಕ್ಕೂ ನಾನು ಹಾತೊರೆಯುತ್ತೇನೆ. ಆದರೆ ಆತನ ತೀರ್ಮಾನದಲ್ಲಿ ಅದಕ್ಕೆ ದುಗ್ಗಾಣಿ ಬೆಲೆಯೂ ಇಲ್ಲ.

"ನಾನಾರು ಗೊತ್ತೇ? ವಿನಷ್ಟಗೊಂಡ ಮಾನವ ಹೃದಯ. ಮನುಷ್ಯನ ಕ್ರೂರ ಆಣತಿಗಳ ಹೊಲಸು ನೆಲಮಾಳಿಗೆಯಲ್ಲಿ ಕೈದಿ. ಈ ಪಾಶವೀ ನೆಲದ ಅಧಿಕಾರ ಸರಪಳಿಗಳು ನನ್ನ ಕೈಕಾಲು ಕಟ್ಟಿ ಹಾಕಿವೆ. ನಾನು ಸತ್ತು ಹೋಗಿದ್ದೇನೆ. ಕೆಲೆತ ಉಲಿತಗಳಲ್ಲಿ ಉನ್ಮತ್ತರಾಗಿರುವ ಜನಮಂದಿ ನನ್ನನ್ನು ಮರೆತಿದ್ದಾರೆ. ಅವರ ನಾಲಗೆಗಳು ಸೀದು ಹೋಗಿವೆ, ಕಣ್ಣುಗಳು ಅಶ್ರು ಶೂನ್ಯವಾಗಿವೆ."

ಶಬ್ದಗಳು – ಹೃದಯವಿದ್ರಾವಕ ಮಾರ್ದನಿಗಳು – ಕೇಳಿದೆ ನಾನವನ್ನು. ಗಾಸಿಗೊಂಡಿದ್ದ ಆ ಹೃದಯದಿಂದ ಕ್ರಮೇಣ ಕೃಶವಾಗುತ್ತ ಒಸರುತ್ತಿದ್ದ ಜೀವದ ಮರ್ಮರವನ್ನು ಕೇಳಿದೆ.
ಅದು ಇನ್ನೂ ಏನನ್ನೋ ಉಸುರುತ್ತಿತ್ತು. ಆದರೆ ಮಂಜು ಕವಿದಿದ್ದ ದೃಷ್ಟಿ ಮತ್ತು ರೋದಿಸುತ್ತಿದ್ದ ಹೃದಯ ಇನ್ನಷ್ಟು ಕಾಣುವುದನ್ನಾಗಲೀ ಕೇಳುವುದನ್ನಾಗಲೀ ಆಗಗೊಡಲಿಲ್ಲ.

ಪ್ರಾಣವಾಯು ಆಘಾತ

ಪ್ರಾಣಿ ವಿಜ್ಞಾನ ಪ್ರಾಧ್ಯಾಪಕ ಹಾ. ಬ. ದೇವರಾಜ ಸರ್ಕಾರರು ಹೇಳಿದ ಕತೆ.

ಈ ಶತಮಾನದ ಆದಿಯ ಸುಂದರ ಸುಕುಮಾರ ಕಲ್ಕತ್ತಾ ನಗರದಲ್ಲಿ ಬಸು ಮತ್ತು ಯಾದವ ಎಂಬ ಇಬ್ಬರು ವಿದ್ಯಾರ್ಥಿಗಳು ಸಹಪಾಠಿ ಮಿತ್ರರಾಗಿದ್ದರು. ಬಸು ಆ ನಗರದವನೇ. ಯಾದವನಾದರೋ ಅತಿ ದೂರದ ಯಾವುದೋ ದುರ್ಗಮಾಭೇದ್ಯ ಕುಗ್ರಾಮದಿಂದ ವಿದ್ಯಾರ್ಜನೆಗೆಂದೇ ನಗರಕ್ಕೆ ಬಂದಿದ್ದ.

ಇಬ್ಬರ ನಡುವೆ ಗಾಢಸ್ನೇಹ ವರ್ಧಿಸಿತು. ಲವಕುಶರಂತೆ ಕಲಿತರು, ಬೆಳೆದರು, ಅರಳಿದರು, ಪದವೀಧರರೂ ಆದರು. ಇಪ್ಪತ್ತರ ಏರು ಹರೆಯದಲ್ಲಿ ಅವರ ಹಾದಿ ಕವಲೊಡೆಯಿತು. ಬಸು ಕಲ್ಕತ್ತಾದಲ್ಲಿ ವಕೀಲಿಕೆ ಕಸಬು ಹಿಡಿದ, ಯಾದವ ತನ್ನ ಹಳ್ಳಿಯಲ್ಲಿ ರೈತನಾಗಿ ನೆಲಸಿದ.

ಪತ್ರ ಸ್ನೇಹ ಎಡೆಬಿಡದೆ ಮುಂದುವರಿಯಿತು. ಯಾದವ ಹಲವು ವರ್ಷಗಳಿಗೆ ಒಮ್ಮೆಯಾದರೂ ಕಲ್ಕತ್ತಾಕ್ಕೆ ಸುದೀರ್ಘ ಪ್ರಯಾಣ ಮಾಡಿ ಬಂದು ಸ್ನೇಹಿತನ ಜೊತೆ ನಾಲ್ಕು ದಿನ ತಂಗಿದ್ದು ಹಳೆಯ ನೆನಹುಗಳನ್ನು ಮರುಸವಿದು ಮತ್ತು ಹೊಸ ಅನುಭವಗಳನ್ನು ಹಂಚಿಕೊಂಡು ಜಮೀನಿಗೆ ಮರಳುತ್ತಿದ್ದ.

ಬಸು ಎಷ್ಟು ಪ್ರಯತ್ನಿಸಿದರೂ ಒಮ್ಮೆ ಕೂಡ ಗೆಳೆಯನ ನೆಲೆಗೆ – ನಿಸರ್ಗದ ಮಡಿಲಿಗೆ ಹಸುರಿನ ಒಡಲಿಗೆ ಪ್ರಾಣವಾಯುವಿನ ಕಡಲಿಗೆ – ಹೋಗಲು ಸಾಧ್ಯವಾಗಲಿಲ್ಲ. ವೃತ್ತಿ ಒತ್ತಡದ ನಡುವೆ ಅಷ್ಟು ದೀರ್ಘ ವಿರಾಮ ಹೊಂದಿಸಿಕೊಳ್ಳುವುದು ಹೇಗೆ!

ವಯಸ್ಸು ಪಡುವಲಿಗೆ ಹೊರಳಿತು. ಎಂಬತ್ತರ ಇಳಿಹರೆಯದಲ್ಲಿ ಬಸುವಿಗೆ ಎಲ್ಲವೂ ಇದ್ದುವು: ಶ್ರೀಮಂತಿಕೆ, ಆರೋಗ್ಯ, ಕೌಟುಂಬಿಕ ಸ್ವಾಸ್ಥ್ಯ, ಆಧುನಿಕ ಜೀವನ ಸೌಕರ್ಯಗಳು ಮತ್ತು ಪೂರ್ತಿ ವಿಶ್ರಾಂತಿ. ಆದರೆ ತೃಪ್ತಿ? ಸಾಯುವ ಮೊದಲು ಒಮ್ಮೆಯಾದರೂ ಮಿತ್ರನ ಜೊತೆ ಹಾಯಾಗಿ ಇರಬೇಕು, ಹರಟಬೇಕು, ಕೆಲೆಯಬೇಕು ಎಂಬ ಹಿಂಗದ ಬಯಕೆ ದಿನೇ ದಿನೇ ಅಧಿಕಾಧಿಕವಾಗಿ ಬಾಧಿಸತೊಡಗಿತು. ತಾನು ಅಷ್ಟು ದೂರ ದೈಹಿಕ ದಂಡಯಾತ್ರೆ ನಿರ್ವಹಿಸಲಾರೆ. ಇನ್ನು ಆ ಕುಗ್ರಾಮದಲ್ಲಿ ಕನಿಷ್ಠ ನಾಗರಿಕ ಸೌಕರ್ಯಗಳಾದರೂ ಇವೆಯೋ ಇಲ್ಲವೋ ತಿಳಿಯದು. ಅಲ್ಲದೇ ತನ್ನ ಸ್ನೇಹಿತನ ಆರ್ಥಿಕ ಸ್ಥಿತಿಗತಿ ಹೇಗಿದೆಯೋ ಗೊತ್ತಿಲ್ಲ.

ಬಸು ಬರೆದ: "ನಾನು ಆರೋಗ್ಯವಾಗಿದ್ದೇನೆ, ವಿರಾಮವಾಗಿಯೂ ಇದ್ದೇನೆ. ಆದರೂ ನಿನ್ನಲ್ಲಿಯವರೆಗೆ ಪಯಣಿಸಲು ಬೇಕಾಗುವ ಮಾನಸಿಕ ಧೃತಿ ನನಗಿಲ್ಲ. ಸಾವು ಹತ್ತಿರವಾಗುತ್ತಿದೆ. ನನಗೆ ಆ ಮೊದಲು ನಿನ್ನ ಜೊತೆ ಒಂದಷ್ಟು ಕಾಲ ಇರಲೇಬೇಕೆಂಬ ಕಡು ಆಸೆ ಇದೆ. ನೀನೇ ಇಲ್ಲಿಗೆ ಬಾ. ನೀನು ತಪ್ಪು ತಿಳಿಯದಿದ್ದರೆ ಒಂದು ಸಂಗತಿ ಹೇಳಬಯಸುತ್ತೇನೆ; ನಿನ್ನ ಪೂರ್ತಿ ಪಯಣ ವೆಚ್ಚವನ್ನು ನಾನು ಭರಿಸುತ್ತೇನೆ, ಬಾ ಗೆಳೆಯಾ ಬಾ! ಬರದಿರಬೇಡ."

ಯಾದವ ಮರುಬರೆದ: "ನನಗೂ ಅದೇ ಹಂಬಲ. ಆದರೆ ಇಲ್ಲಿ, ನನ್ನ ಮನೆಯಲ್ಲಿ, ನಿನ್ನೊಡನೆ ಕಾಲ ಸವಿಯಬೇಕೆಂದು. ಆರ್ಥಿಕವಾಗಿ ಚೆನ್ನಾಗಿದ್ದೇನೆ. ಅಲ್ಲದೇ ಇದು ಹಳ್ಳಿಯೆಂದು ನೀನು ಹಿಂಜರಿಯಬೇಕಾಗಿಲ್ಲ. ಆಧುನಿಕ ಸೌಕರ್ಯಗಳೆಲ್ಲವೂ ಇಲ್ಲಿವೆ. ಒಡನೆ ಹೊರಟು ಬಾ ಮಿತ್ರನೇ!"

ಬಸು ಹೊರಟ. ಮೊದಲ ಹಂತದಲ್ಲಿ 24 ಗಂಟೆ ರೈಲುಯಾನ. ಎರಡನೆಯ ಹಂತದಲ್ಲಿ ಬಸ್ ಪ್ರಯಾಣ. ಕೊನೆಯ ಹಂತದಲ್ಲಿ ಜೋಡೆತ್ತು ಗಾಡಿಯಲ್ಲಿ ಅಭಿಯಾನ. ಯಾದವನ ಸಮೃದ್ಧ ಸುಂದರ ನಂದನವನಸದೃಶ ಜಮೀನಿನ ಭವ್ಯ ಪ್ರವೇಶದ್ವಾರ. ಹಳ್ಳಿಗೆ ಹಳ್ಳಿಯೇ ಅಲ್ಲಿ ಜಮಾಯಿಸಿದೆ, ಹಬ್ಬದ ವಾತಾವರಣ. ಕಲ್ಕತ್ತಾ ನಗರದ ಸುಪ್ರಸಿದ್ಧ ವರಿಷ್ಠ ವಕೀಲನ ಆಗಮನ ಆ ವಲಯದಲ್ಲೆಲ್ಲ ಒಂದು ಅವಿಸ್ಮರಣೀಯ ಐತಿಹಾಸಿಕ ಘಟನೆ.

ಗಾಡಿ ನಿಂತಿತು. ಬಸುವನ್ನು ಆದರದಿಂದ ಕೈ ಹಿಡಿದು ಕೆಳಗಿಳಿಸಿದ ಯಾದವ. ಆನಂದಬಾಷ್ಪ ಕೋಡಿಯೊಡೆದಿದೆ, ಬಾಲ್ಯಮಿತ್ರರಿಬ್ಬರೂ ಗಾಢಾಲಿಂಗನಲೀನರಾಗಿದ್ದಾರೆ...

ಬಸು ನಿಶ್ಚೇಷ್ಟಿತನಾಗಿ ಕುಸಿದು ಬಿದ್ದ. ವೈದ್ಯರು ಧಾವಿಸಿ ಬಂದರು. ಪ್ರಥಮ ಚಿಕಿತ್ಸೆ ನೀಡಿದರು – ನಾಡಿಮಿಡಿತವಿತ್ತು, ಸ್ಮೃತಿ ಇರಲಿಲ್ಲ. ಮುಂದೇನು? ಆತನನ್ನು ಕಲ್ಕತ್ತಾಕ್ಕೆ ಸಾಗಿಸಿ ಅತ್ಯಾಧುನಿಕ ಚಿಕಿತ್ಸೆ ಒದಗಿಸುವುದೊಂದೇ ಶರಣು. ಮೂರು ದಿವಸಗಳ ಹಿಂಪಯಣ. ನಗರ ತಲಪಿದೊಡನೇ ಬಸುವನ್ನು ರುಗ್ಣಾಲಯಕ್ಕೆ ನೇರವಾಗಿ ಒಯ್ದು ದಾಖಲಿಸಿದರು. ಆಶ್ಚರ್ಯ! ಈ ವೇಳೆಗೆ ಆತನಿಗೆ ಸ್ಮೃತಿ ಮರಳಿತ್ತು.

ಒಂದು ವಾರದ ತೀವ್ರ ವೈದ್ಯಕೀಯ ತಪಾಸಣೆ, ಬಗೆಬಗೆಯ ಪರೀಕ್ಷೆಗಳು, ದಾಖಲೆಗಳು, ಯಾದಿಗಳು – ಆದರೆ ಯಾವ ತಜ್ಞನಿಗೂ ಬಸುವಿನ ಹಠಾತ್ ಮೂರ್ಛೆಯ ಕಾರಣ ಗೊತ್ತಾಗಲೇ ಇಲ್ಲ. ಉಭಯ ಪ್ರದೇಶಗಳ (ನಗರ ಮತ್ತು ಹಳ್ಳಿ) ಪರಿಚಯ ಚೆನ್ನಾಗಿದ್ದ ಒಬ್ಬ ಪರಿಸರತಜ್ಞ ಸಮರ್ಪಕ ವಿವರಣೆ ನೀಡಿದ: "ನಗರದ ಕಲುಷಿತ ವಾಯುವಿನಲ್ಲಿ ಇದ್ದವನಿಗೆ ಹಳ್ಳಿಯ ಪರಿಶುದ್ಧ ವಾಯು ಮಾರಕವಾದದ್ದು ಆಶ್ಚರ್ಯವಲ್ಲ!"

ಭುವಿಯಿದು ಬರಿ ಮಣ್ಣಲ್ಲೋ!

1855ರಷ್ಟು ಹಿಂದೆಯೇ ಅಮೆರಿಕದ ರೆಡ್ ಇಂಡಿಯನ್ ನಾಯಕನೊಬ್ಬ ಈ ದಿಶೆಯಲ್ಲಿ ಎಷ್ಟು ವೈಜ್ಞಾನಿಕವಾಗಿ ಯೋಚಿಸಿದ್ದ ಎನ್ನುವುದಕ್ಕೆ ಈಚೆಗೆ ಬೆಳಕಿಗೆ ಬಂದ ಆತನ ಒಂದು ಕಾಗದದಲ್ಲಿ ಪುರಾವೆಗಳು ದೊರೆಯುತ್ತವೆ. ಅಮೆರಿಕದ ಅಧ್ಯಕ್ಷ, ರೆಡ್ ಇಂಡಿಯನ್ ಬುಡಕಟ್ಟಿನ ನಾಯಕ ಸಿಯಾತಲ್ ಎಂಬಾತನಿಗೆ ಒಂದು ಕೋರಿಕೆ ಸಲ್ಲಿಸಿ, ರೆಡ್ ಇಂಡಿಯನ್ನರ ವಸತಿ ಪ್ರದೇಶವನ್ನು ಸರಕಾರಕ್ಕೆ ಮಾರಬೇಕೆಂದು ಕೇಳಿಕೊಂಡಿದ್ದ. ದೊರೆಯ ಕೋರಿಕೆ ಎಂದರೆ ಮಿಲಿಟರಿ ಹುಕುಂ ಎಂದು ಅರ್ಥವಷ್ಟೆ. ಆಧುನಿಕ ಯಂತ್ರ ಸ್ಥಾವರಗಳ ವಿಸ್ತರಣೆಗೆ, ನಾಗರಿಕ ಜನತೆಯ ಹೊಸ ಅಲೆಯ ವಹಿವಾಟುಗಳಿಗೆ ಮತ್ತು ಸಮಗ್ರವಾಗಿ ರಾಷ್ಟ್ರದ ಸುಧಾರಣೆಗೆ ಈ ಹೆಜ್ಜೆ ಅವಶ್ಯವಾಗಿತ್ತು. ಮುಗ್ಧ ಅನಾಗರಿಕ, ಅವಿದ್ಯಾವಂತ ಸಿಯಾತಲ್ ರಾಷ್ಟ್ರಾಧ್ಯಕ್ಷನಿಗೆ ಬರೆದ ಉತ್ತರದ ಕೆಲವು ಅಂಶಗಳನ್ನು ಇಲ್ಲಿ ಉದ್ಧರಿಸಿದೆ.

"ವಾಷಿಂಗ್ಟನ್ನಿನಲ್ಲಿರುವ ಮಹಾಪ್ರಭು ನಮ್ಮ ನೆಲವನ್ನು ಕೊಳ್ಳುವ ಆಶಯ ವ್ಯಕ್ತಪಡಿಸಿದ್ದಾರೆ. ಸ್ನೇಹ ಮತ್ತು ಸದ್ಭಾವನೆಯ ಮಾತುಗಳನ್ನು ಸಹ ಮಹಾಪ್ರಭುಗಳು ನಮಗೆ ಕಳಿಸಿರುವರು. ಇದು ಅವರ ದಯವಂತಿಕೆಯ ದ್ಯೋತಕ. ಏಕೆಂದರೆ ನಾವು ಮರುಸಲ್ಲಿಸಬಹುದಾದಂಥ ಸ್ನೇಹ ಅವರಿಗೆ ಅಗತ್ಯವಿಲ್ಲ ಎಂಬುದು ನಮಗೆ ತಿಳಿದಿದೆ. ನಾವು ನಿಮ್ಮ ಬೇಡಿಕೆಯನ್ನು ಪರಿಶೀಲಿಸುತ್ತೇವೆ. ಹಾಗೆ ಮಾಡದಿದ್ದರೆ ಬಿಳಿ ಮನುಷ್ಯ ತುಪಾಕಿಗಳ ಸಮೇತ ಬಂದು ನಮ್ಮ ನೆಲವನ್ನು ನುಂಗಬಲ್ಲ ಎಂದು ನಮಗೆ ಗೊತ್ತುಂಟು. ಆದರೆ ನೀವು ಬಾನನ್ನು ಹೇಗೆ ತಾನೇ ಕೊಳ್ಳಬಲ್ಲಿರಿ ಅಥವಾ ಮಾರಬಲ್ಲಿರಿ? ನೆಲದ ಒಲವನ್ನು? ಈ ಭಾವನೆಯೇ ನಮಗೆ ವಿಚಿತ್ರವಾಗಿದೆ. ಭೂಮಂಡಲದ ಪ್ರತಿಯೊಂದು ಅಂಶವೂ ನನ್ನ ಮಂದಿಗೆ ಪವಿತ್ರವಾದದ್ದು. ಒಂದೊಂದು ಮರದ ಕೊಂಬೆರೆಂಬೆಗಳು ಕಡಲ ಕಿನಾರೆಯಲ್ಲಿಯ ಬಿಳಿಮರಳ ಹಾಸು, ದಟ್ಟ ಕಾಡುಗಳಲ್ಲಿಯ ಮಬ್ಬು ಇಬ್ಬನಿಯ ಮುಸುಕು, ಗುಂಯಿಗುಡುವ ಕೀಟದ ಸ್ವನ ಎಲ್ಲವೂ ನಮ್ಮ ಬಳಗದವರಿಗೆ ಆತ್ಮೀಯವಾದವು. ಬಿಳಿ ಮನುಷ್ಯನಿಗೆ ನಮ್ಮ ರೀತಿಗಳು ಅರ್ಥವಾಗುವುದಿಲ್ಲ ಎಂದು ನಮಗೆ ಗೊತ್ತಿದೆ. ನೆಲದ ಯಾವುದೇ ಭಾಗ ಅವನಿಗೆ ಇನ್ನೊಂದು ಭಾಗದಂತೆ ಒಂದೇ. ಏಕೆಂದರೆ ಅವನು ರಾತ್ರಿಂಚರನಾದ ಹೊಸಬ. ತನಗೆ ಬೇಕಾದದ್ದನ್ನೆಲ್ಲ ನೆಲದಿಂದ ಕತ್ತರಿಸುವುದೊಂದೇ ಅವನಿಗೆ ತಿಳಿದಿರುವ ಕಸಬು. ಭೂಮಿ

ಅವನ ಭ್ರಾತೃ ಅಲ್ಲ, ಶತ್ರು. ಇದನ್ನು ಜಯಿಸಿದ ಬಳಿಕ ಅವನು ಮತ್ತೆ ಮುಂದೆ ಸಾಗುತ್ತಾನೆ. ಅವನ ಸುಡುವ ಹಸಿವು ಇಡೀ ಇಳೆಯನ್ನೇ ಕಬಳಿಸಿ ಬೆಂಗಾಡಾಗಿಸುತ್ತದೆ.

"ನಿಮ್ಮ ನಗರಗಳ ದೃಶ್ಯ ಕೆಂಪು ಮನುಷ್ಯನ ಕಂಗಳಲ್ಲಿ ನೋವು ಉಂಟುಮಾಡುವುದು. ಪ್ರಾಯಶಃ ಕೆಂಪು ಮನುಷ್ಯ ಒಬ್ಬ ಮೃಗ. ನಿಮ್ಮ ಸೂಕ್ಷ್ಮ ಅವನಿಗೆ ಅರ್ಥವಾಗುವುದಿಲ್ಲ. ನೀವು ನೀಡಿರುವ ಕರೆಯನ್ನು ನಾವು ಮನ್ನಿಸುವುದು ಅನಿವಾರ್ಯವಾಗಿದೆ. ಆದರೆ ಒಂದು ಷರತ್ತನ್ನು ನಿಮ್ಮ ಮುಂದಿಡ ಬಯಸುವೆನು: ಈ ನೆಲದ ಜಂತುಗಳನ್ನು ಬಿಳಿ ಮನುಷ್ಯ ತನ್ನ ಸೋದರ ಪ್ರಾಣಿಗಳೆಂಬುದಾಗಿ ಪರಿಗಣಿಸಬೇಕು. ನಾವು ಕಂಡುಕೊಂಡಿರುವ ಸತ್ಯ ಒಂದುಂಟು. ಇದನ್ನು ಬಿಳಿ ಮನುಷ್ಯ ಕೂಡ ಒಂದಲ್ಲ ಒಂದು ದಿನ ತಿಳಿದೇ ತಿಳಿಯುತ್ತಾನೆ: ನಮ್ಮೆಲ್ಲರ ದೇವರೂ ಒಬ್ಬನೇ. ನಮ್ಮ ನೆಲವನ್ನು ಹೇಗೆ ನೀವು ಸ್ವಂತಕ್ಕೆ ಪಡೆಯಬೇಕೆಂದು ಹವಣಿಸಿದ್ದೀರೋ ಹಾಗೆ ಆತನನ್ನು ಕೂಡ ಕೇವಲ ನಿಮ್ಮ ಖಾಸಾ ಸೊತ್ತಾಗಿ ಬಾಚಿಕೊಳ್ಳಲು ಬಗೆದಿರಬಹುದು. ಆದರೆ ಇದು ನಡೆಯದು. ಅವನು ಜನರ ದೇವರು. ಅವನ ಕರುಣೆ ಕೆಂಪು ಮಂದಿಗೂ ಬಿಳಿ ಮಂದಿಗೂ ಸಮವಾಗಿಯೇ ಹಂಚಿಕೊಂಡಿದೆ. ಧರಣಿಮಂಡಲ ಅವನಿಗೆ ಅಮೂಲ್ಯವಾದದ್ದು. ಇದನ್ನು ಕುಲಗೆಡಿಸುವುದು ಎಂದರೆ ಸೃಷ್ಟೀಶನ ಮೇಲೆ ಅವಹೇಳನ ಹೇರಿದಂತೆ. ಬಿಳಿಯರು ಕೂಡ, ಪ್ರಾಯಶಃ ಇತರ ಬುಡಕಟ್ಟಿನವರಿಗಿಂತ ಬಲು ಬೇಗ ತೊಲಗಿ ಹೋಗುತ್ತಾರೆ. ನಿಮ್ಮ ಹಾಸಿಗೆಯನ್ನು ಹೊಲಸುಗೊಳಿಸುವುದನ್ನು ಹೀಗೆಯೇ ಮುಂದುವರಿಸುತ್ತಿರಿ – ಒಂದು ದಿನ ಆ ರೊಚ್ಚೆಯಲ್ಲಿ ನಿಮ್ಮ ಉಸಿರೇ ಕಟ್ಟಿಹೋಗುತ್ತದೆ. ಕಾಡೆಮ್ಮೆಗಳೆಲ್ಲವನ್ನೂ ಕಡಿದೊಗೆದ ಬಳಿಕ ಕಾಡುಕುದುರೆಗಳೆಲ್ಲವನ್ನೂ ಪಳಗಿಸಿ ಮುಗಿದ ತರುವಾಯ ವನಾಂತರಗಳ ಪ್ರಶಾಂತ ಏಕಾಂತಗಳೆಲ್ಲವೂ ನರಗಬ್ಬಿನಿಂದ ನಾರುತ್ತಿರುವಾಗ ಮತ್ತು ಫಲಸಮೃದ್ಧ ಗಿರಿ ದೃಶ್ಯಗಳು ಚಲ್ಲಗಾತಿಯರ ಬೋಳು ಹರಟೆಯಲ್ಲಿ ಮುಳುಗಿಹೋದಾಗ ಹೊದರೆಲ್ಲಿ ಉಳಿದಿರುವುದು? ಹದ್ದನ್ನು ಎಲ್ಲರಸಲಿ? ಈ ಸೂರೆಗೆ ಈ ಹನನಕ್ಕೆ ಅಂತ್ಯವೆಂದು? ಸಾವಿನ ಮೊನೆ ತಿವಿಯುವಂದೇ ಬದುಕಿನ ಕೊನೆ.

"ಬಿಳಿ ಮನುಷ್ಯನ ಪಟ್ಟಣಗಳಲ್ಲಿ ಎಲ್ಲಿಯೂ ಶಾಂತ ಪ್ರದೇಶವೇ ಇಲ್ಲ. ವಸಂತ ಮಾರುತದಿಂದ ತೊನೆಯುವ ಎಲೆಗಳ ನಿನದ ಅಲ್ಲಿಲ್ಲ. ಜೀರುಂಡೆಗಳ ರೆಕ್ಕೆ ಅದಿರಿಕೆಯ ಸೊಲ್ಲು ಅಲ್ಲಿಲ್ಲ. ಆದರೆ ನಾನೊಬ್ಬ ಅನಾಗರಿಕ. ನನಗೆ ತಿಳಿಯಲಾರದೋ ಏನೋ ನಗರದ ಹರಟೆ ನನ್ನ ಕಿವಿಗಳನ್ನು ಕಿವಿಡಾಗಿಸುತ್ತದೆ. ಕೋಗಿಲೆಯ ಕುಹೂ ಕುಹೂರವವನ್ನಾಗಲೀ ರಾತ್ರಿ ವೇಳೆ ಕೊಳದ ಸುತ್ತ ನೆರೆದು ಅಖಂಡ ಸಂವಾದದಲ್ಲಿ ಲೀನವಗಿರುವ ಮಂಡೂಕಗಳ ಟ್ರೊಂಯ್ ಟ್ರೊಂಯ್ ನಾದವನ್ನಾಗಲೀ ಆಲಿಸಲಾಗದಿದ್ದರೆ ಬದುಕಿನಲ್ಲಿ ಉಳಿದುದೇನು? ನಡುಹಗಲ ಮಳೆಯಿಂದ ಕೊಳೆ ತೊಳೆದ ಇಲ್ಲವೇ ಸುರಹೊನ್ನೆಯ ಕಂಪನ್ನು ಧರಿಸಿದ ತಂಗಾಳಿಯ ಮೆಲು ಬೀಸು ಕೆಂಪು ಮನುಷ್ಯನಿಗೆ ಬಲು ಇಂಪು. ಈತನಿಗೆ ವಾಯು ಅತ್ಯಮೂಲ್ಯವಾದದ್ದು. ಏಕೆಂದರೆ ಇದೇ ಸರ್ವರಿಗೂ – ಪ್ರಾಣಿಗಳನ್ನೂ ಸಸ್ಯಗಳನ್ನೂ ಒಳಗೊಂಡಂತೆ – ಜೀವದಾಯಕ ಉಸಿರು. ತಾನು ಶ್ವಸನಿಸುವ ವಾಯುವನ್ನು ಬಿಳಿ ಮನುಷ್ಯ ಗಮನಿಸಿರುವಂತೆ ತೋರುವುದಿಲ್ಲ. ನವೆದು ನವೆದು ಸಾಯುತ್ತಿರುವ ರೋಗಿಯಂತೆ ಅವನು ಪರಿಮಳಕ್ಕೆ ಮರವಟ್ಟಿದ್ದಾನೆ. ಪ್ರಾಣಿಸಂಗವಿಲ್ಲದಂಥ ಮಾನವನ ಬದುಕು ಬದುಕೇ? ವನ್ಯಪ್ರಾಣಿಗಳೆಲ್ಲವೂ ನಿರ್ನಾಮವಾಗಿ ಹೋದುವೋ ಮಾನವ ಧೃತಿಗುಂದಿದವನಾಗಿ ಏಕಾಂಗಿಯಾಗಿ ಸತ್ತ್ವ ಕಳೆದುಕೊಂಡವನಾಗಿ ನಶಿಸಿಯೇ ಹೋಗುವುದು ನಿಚ್ಚಳ ಸತ್ಯ. ಏಕೆಂದರೆ ಪ್ರಾಣಿಗಳಿಗೆ ಇಂದು ಯಾವ ಗತಿ ಒದಗುವುದೋ ಅದು ಮಾನವನಿಗೆ ನಾಳೆ ಒದಗುವುದು ನಿಸರ್ಗ ನಿಯಮ.

"ಬಿಳಿ ಮನುಷ್ಯನ ಕನಸುಗಳೇನು? ಚಳಿಗಾಲದ ಸುದೀರ್ಘ ರಾತ್ರಿಗಳಲ್ಲಿ ಅವನು ತನ್ನ ಎಳೆಯರ ಕಲ್ಪನೆಗಳಿಗೆ ಕಟ್ಟುವ ರೆಕ್ಕೆಗಳೇನು? ಅವರ ಮುಂದೆ ಇಡುವ ಘನಾದರ್ಶಗಳೇನು? ಅವರು ಲೋಕವನ್ನು ಯಾವ ತೆರನಾಗಿ ಸ್ವಾಗತಿಸಬೇಕು ಎಂದು ಅವನು ಬಯಸುತ್ತಾನೆ? ಇವು ಯಾವುವೂ ನಮಗೆ ತಿಳಿದಿಲ್ಲ. ನಾವು ದಸ್ಯುಗಳು. ಬಿಳಿ ಮನುಷ್ಯನ ಕನಸುಗಳಿಗೆ ಪ್ರವೇಶ ನಮಗಿಲ್ಲ. ಅವು ಹೇಗಿದ್ದಾವು ಎಂಬುದು ನಮಗೆ ಗೊತ್ತಿಲ್ಲದಿರುವುದರಿಂದ ನಮ್ಮ ಚಿಂತನೆಯ ಧಾಟಿಯಲ್ಲಿಯೇ ಮುಂದುವರಿಯುತ್ತೇವೆ. ನಮಗೆ ನೀವು ಮೀಸಲು ಪ್ರದೇಶವೊಂದನ್ನು ಒದಗಿಸುವ ಮಾತು ಕೊಟ್ಟಿದ್ದೀರಿ. ಆ ಭರವಸೆ ಮೇರೆಗೆ ನಾವು ನಿಮಗೆ ಈ ನೆಲೆಯನ್ನು ಮಾರುತ್ತೇವೆ. ಪ್ರಾಯಶಃ ಆ ಹೊಸ ತಾಣದಲ್ಲಿ ನಮ್ಮ ಇಚ್ಛಾನುಸಾರ ನಾವು ಉಳಿದ ಎಣಿಕೆಯ ದಿನಗಳನ್ನು ತಳ್ಳಿಯೇವು. ಕೊನೆಯ ಕೆಂಪು ಮನುಷ್ಯ ಈ ಸುಂದರ ವಸುಂಧರೆಯಿಂದ ಅಂತರ್ಧಾನನಾದ ಮೇಲೆಯೂ ಅಲ್ಲದೆ, ಆತನ ಸ್ಮೃತಿ ಪ್ರೇಯರಿಗಳ ಮೇಲೆ ಸರಿಯುವ ತೆಳು ಮೋಡದ ನೆರಳಾದ ಮೇಲೆಯೂ, ಈ ಕಿನಾರೆ ಮತ್ತು ಕಾಡುಗಳು ಆತನ ಸತ್ತ್ವ ತೇಜಸ್ಸುಗಳನ್ನು ಹಿಡಿದಿಟ್ಟಿರುತ್ತವೆ. ಏಕೆಂದರೆ ಕೆಂಪು ಜನ ಭೂಮಾತೆಯನ್ನು ನವಜಾತ ಶಿಶು ತನ್ನ ತಾಯಿಯ ಗುಂಡಿಗೆ ಮಿಡಿತವನ್ನು ಮುದ್ದಿಸಿ ಅಪ್ಪುವಂತೆ ಪ್ರೀತಿಸಿ ಆಲಿಂಗಿಸಿಕೊಂಡಿದ್ದಾರೆ. ನಮ್ಮ ಈ ವಲಯವನ್ನು ನಾವು ನಿಮಗೆ ಮಾರುತ್ತೇವೆ. ಆದರೆ ನಾವು

ಇದನ್ನು ಪ್ರೀತಿಸಿದಂತೆ ನೀವೂ ಪ್ರೀತಿಸಬೇಕು, ಓಲೈಸಿದಂತೆ ನೀವೂ ಓಲೈಸಬೇಕು. ಆರಯ್ಯಿಸಿದಂತೆ ನೀವೂ ಆರಯ್ಯಿಸಬೇಕು. ಇದರ ಈಗಿನ ಚಿತ್ರವನ್ನು ನಿಮ್ಮ ಮನಃಪಟಲದ ಮೇಲೆ ಪಡಿಮೂಡಿಸಿ ಚೆನ್ನಾಗಿ ಕಾಪಾಡಿಕೊಳ್ಳಿ. ನಿಮ್ಮ ಸಮಸ್ತ ತ್ರಾಣ ಪ್ರಾಣಗಳಿಂದ ಹೃದಯಪೂರ್ವಕವಾಗಿ ಇದನ್ನು ನಿಮ್ಮ ಮಕ್ಕಳಿಗೋಸ್ಕರ ರಕ್ಷಿಸಿ. ಭಗವಂತ ಸಮಸ್ತರನ್ನೂ ಹೇಗೆ ಪ್ರೀತಿಯಿಂದ ಕಾಣುವನೋ ಹಾಗೆ ನೀವು ಇದನ್ನು ಪ್ರೀತಿಯಿಂದ ನೋಡಿಕೊಳ್ಳಿ. ಒಂದು ಸಂಗತಿ ನಮಗೆ ಚೆನ್ನಾಗಿ ಮನದಟ್ಟಾಗಿದೆ. ನಿಮ್ಮ ಮತ್ತು ನಮ್ಮ ದೇವರು ಒಬ್ಬನೇ. ಈ ನೆಲ ಆತನ ಕೃತಿ. ಇದು ಆತನಿಗೆ ಪ್ರಿಯವಾದದ್ದು, ಅಮೂಲ್ಯವಾದದ್ದು. ಮನುಕುಲದ ಸಾಮೂಹಿಕ ಅಭಿಯಾನದಲ್ಲಿ ಬಿಳಿ ಮನುಷ್ಯ ಕೂಡ ಅಪವಾದ ಆಗಲಾರ.”

ಇಪ್ಪತ್ತನೆಯ ಶತಮಾನದ ಕೊನೆಯ ಪಾದದಲ್ಲಿ ವಾಸ್ತವವಾಗಿ ತಲೆದೋರಿರುವ ಪರಿಸರಮಾಲಿನ್ಯದ ಖಚಿತ ಆಗಮನವನ್ನು ಪ್ರವಾದಿಯ ಮಾತುಗಳ ರೀತಿಯಲ್ಲಿ ಮತ್ತು ವಿಜ್ಞಾನಿಯ ಬರವಣಿಗೆಯ ಸೂತ್ರಗಳ ತೆರದಲ್ಲಿ ಈ ಮೇಲಿನ ಗುಂಡಿಗೆ ಕಲಕುವ ಕಾವ್ಯಮಯ ಪತ್ರ ವರ್ಣಿಸಿದೆ.

ನಮಗಿರುವುದು ಒಂದೇ ಪರಿಸರ

ಆಧುನಿಕ ಜೀವನದ ಸೌಕರ್ಯಗಳಿಗೆ ನಾವು ತೆರಬೇಕಾದ ಅತ್ಯಲ್ಪ ಶುಲ್ಕ ಅಥವಾ ದಂಡ ಪರಿಸರ ಮಾಲಿನ್ಯ. ಪರಿಸರ ವಿಜ್ಞಾನಿಗಳು ಕುಂಚಿಸುವಂಥ ಪ್ರಮಾಣದಲ್ಲಿ ಇದು ಪಿಡುಗಾಗಿಲ್ಲ ಎಂದು ಸಮಸ್ಯೆಯನ್ನು ಅಲಕ್ಷಿಸುವುದು ಸುಲಭ. ಆದರೆ ಮುಂಬರುವ ದಿವಸಗಳಲ್ಲಿ ನಮ್ಮ ಪೀಳಿಗೆ ಚೆನ್ನಾಗಿ ಬದುಕಿ ಬಾಳಬೇಕಾದರೆ ನಾವು ಒಂದು ಅಂಶವನ್ನು ಸ್ಪಷ್ಟವಾಗಿ ತಿಳಿದಿರುವುದು ಅವಶ್ಯ. ನಿಸರ್ಗದ ಮಹಾ ಪ್ರಯೋಗಮಂದಿರದಲ್ಲಿ ಸುದೀರ್ಘ ಕಾಲದಿಂದ ಅಸಂಖ್ಯಾತ ಪ್ರಯೋಗಗಳು ನಡೆದು ವರ್ತಮಾನಕಾಲದ ಸಮಷ್ಟಿ ಒಡಮೂಡಿದೆ. ಈ ಪ್ರಯೋಗದ ಹಿನ್ನೆಲೆಯನ್ನು ಅರಿತು ಇವುಗಳಿಗೆ (ಅಂದರೆ ನಿಸರ್ಗದ ಬಲಗಳಿಗೆ) ಅನುವರ್ತಿಯಾಗಿ ಮಾನವ ಬಾಳಲು ಕಲಿತಾಗ ಮಾತ್ರ ಈತನ ದಿನಗಳು ಹಸನಾಗುವುವು. ಈತನ ಪೀಳಿಗೆ ಸೊಗದಿಂದ ಬದುಕುವುದು. ಹಾಗಲ್ಲದೇ ನಿಸರ್ಗ ಅಥವಾ ಪರಿಸರದ ಸಾರ್ವಭೌಮ ತಾನು, ಇದನ್ನು ತನ್ನ ಇಚ್ಛಾನುಸಾರ ಪರಿವರ್ತಿಸಿ ಸೋಲಿಸಿ ಅಲ್ಲಾವುದ್ದೀನನ ವಿಚಿತ್ರ ದೀಪದಿಂದ ಹೊರಹೊಮ್ಮುವ ರಾಕ್ಷಸನ ತೆರದಲ್ಲಿ ತನಗೆ ಸೇವೆ ಸಲ್ಲಿಸಲು ವಿಧಿಸುತ್ತೇನೆ ಎಂದು ಹೊರಟನೋ ಆಗ ಇವನ ಸರ್ವನಾಶ ಖಾತ್ರಿ. ಪೊಡವಿಯೇ ಮುನಿದು ಇವನನ್ನು ಕಬಳಿಸುವುದು ಕಟ್ಟಿಟ್ಟ ಬುತ್ತಿ. ಮನುಕುಲದ ಸಾಮೂಹಿಕ ಅಭಿಯಾನ ಈ ‘ಸಹಗಮನ’ದಲ್ಲಿ ಪರ್ಯವಸಾನಗೊಳ್ಳಬೇಕೇ? ಪರಿಸರವನ್ನು ಎದುರಿಸಿ ಮನುಷ್ಯ ಸುತರಾಂ ಉಳಿಯಲಾರ.

ನಮಗಿರುವುದು ಒಂದೇ ಪರಿಸರ
ನಮ್ಮ ಬದುಕಿಗೆ ಅಮೃತವನ್ನೂಡುವ ಆಕರ
ಪರಿಸರವನ್ನು ರಕ್ಷಿಸೋಣ ಅದು ನಮ್ಮನ್ನು ಪೋಷಿಸುತ್ತದೆ
ಪರಿಸರವನ್ನು ಅಲಕ್ಷಿಸೋಣ ಅದು ನಮ್ಮನ್ನು ಶೋಷಿಸುತ್ತದೆ
ಗಿಡ ನೆಟ್ಟು ಬೆಳೆಸಿ, ಕಾಪಾಡುವಾಗ ಪರಿಸರವನ್ನು ಬೆಳೆಸುತ್ತೇವೆ
ಮರ ಕಡಿದು ಕೆಡೆಸುವಾಗ ಪರಿಸರವನ್ನು ಕೊಲ್ಲುತ್ತೇವೆ
ವನ್ಯ ಮೃಗಗಳೆಲ್ಲವೂ ಪರಿಸರದ ಅಮೂಲ್ಯ ಸಂಪತ್ತು
ನಮ್ಮದೆಷ್ಟೋ ಅಷ್ಟೇ ಅವುಗಳದು ಕೂಡ ಈ ಜಗತ್ತು.

ಮೂಕ ನಿರ್ಝರಿಣಿ



ಬಲು ಹಿಂದಿನ ಕತೆಯೇನೂ ಅಲ್ಲವಿದು. ಅದೊಂದು ದೊಡ್ಡ ದೇಶ. ಅದರ ವಕ್ಷಸ್ಥಳದಲ್ಲಿ ಪುಟ್ಟ ಒಂದು ಹಳ್ಳಿ. ಉಲ್ಲಾಸವೇ ಅದರ ಉಸಿರು. ಅಲ್ಲಿಯ ಬದುಕು ಪರಿಸರದೊಡನೆ ಸಂಗತವಾಗಿಯೂ ಸಂತತವಾಗಿಯೂ ಹೊಂದಿಕೊಂಡಿದ್ದು ಎಲ್ಲೆಲ್ಲಿಯೂ ಸಂತೋಷ ಸಂಭ್ರಮ ಹರಿಯುತ್ತಿದ್ದುವು. ಬೇಸಾಯದಿಂದ ಬಂದ ಗಳಿಕೆಯಿಂದ ನೆಮ್ಮದಿಯ ಬದುಕನ್ನು ಬಾಳುತ್ತಿದ್ದ ಆರೋಗ್ಯವಂತ ಜನ, ಶ್ರಾಯಾನುಸಾರ ಕಂಗೊಳಿಸುತ್ತಿದ್ದ ಹಲ ಬಗೆಯ ಪೈರುಪಚ್ಚೆ, ಎಲ್ಲೆಲ್ಲೂ ಗಗನ ನಿವೇದಿತವಾಗಿ ನೆಟ್ಟಗೆ ನಿಂತಿದ್ದ ವೃಕ್ಷಸಮೂಹ, ಇವುಗಳಿಗೆ ರಕ್ಷಣೆ ನೀಡಲು ಹಳ್ಳಿಯನ್ನು ಬಳಸಿ ಹರಡಿಹೋಗಿದ್ದ ಬೆಟ್ಟ ಕಣಿವೆಗಳ ಸಾಲು, ಬೆಟ್ಟಗಳ ಒಡಲಿನಿಂದ ನಿರಂತರವಾಗಿ ಸ್ರವಿಸುತ್ತಿದ್ದ ಸಲಿಲಧಾರೆ, ಹಸುರು ಹಚ್ಚಡದ ಮೇಲೆ ಹಾದಿ ಬಿಡಿಸಿ ಸಾಗುತ್ತಿದ್ದ ನೀರಿನ ಹರಿವು ನೇಯ್ದ ಬೆಳ್ಳಿ ಚಿತ್ತಾರ, ಸಮೃದ್ಧ ನೆಲ ಜಲ ಬಾನುಗಳಲ್ಲಿ ವಿಹರಿಸುತ್ತಿದ ಪ್ರಾಣಿ ಜಲಚರ ಪಕ್ಷಿ ಸಂಕುಲ – ಇವೆಲ್ಲ ಅಲ್ಲಿಯ ಜೀವಿಪರಿಸರ ಅಖಂಡತೆಯ ಅವಿಭಾಜ್ಯ ಅಂಗಗಳಾಗಿ ಎರಕಗೊಂಡಿದ್ದುವು. ನಿಸರ್ಗವಲ್ಲಿ ಹಾಡುತ್ತಿತ್ತು, ಕೊಳಲೂದುತ್ತಿತ್ತು, ಚೆಲುವು ಸೂರೆ ಹೋಗಿತ್ತು, ಪರಿಮಳ ಸರ್ವವ್ಯಾಪಿ ಆಗಿತ್ತು, ಸೌಂದರ್ಯ ಸೀಮೆಯದು.

ಇಂತಿರ್ಪೊಡೆ ಅಲ್ಲೊಂದು ವಿಚಿತ್ರ ಸನ್ನಿವೇಶ ತಲೆಹಾಕಿತು. ಆ ಹಳ್ಳಿಯ ಮೇಲೆ ದುಷ್ಟಗ್ರಹದ ವಕ್ರದೃಷ್ಟಿ ಕೆಡೆಯಿತೋ ಮಾಟಗಾರನ ಧೂಮಂತ್ರಗಾಳಿ ಮಂಕು ಎರಚಿತೋ ಪೂತನಿಸ್ತನ್ಯಪಾನದಿಂದ ವಿಷ ಸರ್ವತ್ರ ವ್ಯಾಪಿಸಿತೋ ಎಂಬಂತೆ ಆ ತನಕ ಕಂಡು ಕೇಳಿ ಅರಿತಿರದಿದ್ದ 'ಭೂತ ಚೇಷ್ಟೆ'ಗಳು ಹಳ್ಳಿಗರನ್ನು ಪೀಡಿಸತೊಡಗಿದುವು. ಹಸುರು ಕಡಲಿನಲ್ಲಿ ಸಾವಿನ ನೀರ್ಗಲ್ಲಬೆಟ್ಟ ಗುಟ್ಟಾಗಿ ಆದರೆ ಖಚಿತವಾಗಿ ಮುನ್ನಡಿಯಿಡುತ್ತ ಬರುತ್ತಿರುವಂತೆ ತೋರಿತು. ಶಾಂತಿವನದಲ್ಲಿ ಅಶಾಂತಿ, ಮೂಕಶೋಕ. ಹೊಸ ಬೇನೆಯಿಂದ ಜನ ಸತ್ತರು, ಮಕ್ಕಳು ಮರಗಟ್ಟಿದುವು. ವೈದ್ಯರಿಗೆ ಸವಾಲಾಗಿ ಯಮರಾಯನ ಕೋಣ ಎದುರಾದಂಥ ಭೀಕರ ಪರಿಸ್ಥಿತಿ.

ಮುಂಜಾವಿನ ಮಬ್ಬನ್ನು ಸೀಳಿ ನೇಸರು ಬರುತ್ತಿದೆಯೆಂದು ಕಣಿ ನುಡಿವ ಶಕುನದ ಹಕ್ಕಿಯ ಸೊಲ್ಲು ಇಲ್ಲವಾಗಿತ್ತು. ಕೊಳದ ಬಳಿಯ ಟಿಸಿಲ ಮೇಲೆ ಮರಸು ಕುಳಿತು ತಿಳಿನೀರ ಮೇಲೆ ಫಕ್ಕನೆ ಎಗರಿ ಬೆಳ್ಳಿ ಮೀನನ್ನು ಗಬಕ್ಕನೆ ಕಚ್ಚಿ ಚಿಮ್ಮುವ ಮೀಂಚುಳ್ಳಿಯ ಕಾಮನಬಿಲ್ಲಿನ ಹಾರಾಟ ಕೈದಾಗಿತ್ತು. ಹೊಲತೋಟಗಳು ಕಾಡುಬೆಟ್ಟಗಳು ಒಣಗಿ ಬೆಂಗಾಡಿನ ಬಕಾಸುರಾಪೋಶನಕ್ಕೆ ಕಾಲ ಕೂಡಿಬಂದಿತ್ತು. ಹಳ್ಳಿಗರ ಉಸಿರೇ ಕಟ್ಟಿಹೋಗುವಂಥ ಈ ದುರ್ಭರ ಪರಿಸ್ಥಿತಿಯ ಕಾರಣವೇನು?
ಕಾರಣವೇನು ಗೊತ್ತೇ?

ಸರ್ವಕೀಟನಾಶಕ ಸಕಲ ಸಮೃದ್ಧಿದಾಯಕ ಆನಂದಮೃತವರ್ಷಿಣಿ ಡಿಡಿಟಿಯ ಸಾರ್ವತ್ರಿಕೋಪಯೋಗ – ನಿಸರ್ಗದ ಎದುರು ಮಾನವ ಅರಿಯದೆ (ಅರಿತು?) ಹೂಡಿದ ಕಾಳಗದ ಎದುರುಹೊಡೆತ, ಹಿಂದೊದೆತ, ಎಗರೇಟು, ಯಮಪ್ರಹಾರ.

ರ್‍ಯಾಶೆಲ್ ಕಾರ್ಸನ್ ಎಂಬ ಪ್ರಸಿದ್ಧ ಲೇಖಿಕೆ ವೈಜ್ಞಾನಿಕ ಸಾಕ್ಷ್ಯಾಧಾರ ಸಮೇತ ಬರೆದು ಪ್ರಕಟಿಸಿದ (1962) 'ಸೈಲೆಂಟ್ ಸ್ಪ್ರಿಂಗ್' ಎನ್ನುವ ಉದ್ಗ್ರಂಥದ ಮೊದಲ ಅಧ್ಯಾಯ ಪ್ರಾರಂಭವಾಗುವುದು ಈ ಮೇಲಿನಂತೆ. ಭಾರತದಲ್ಲಿ ಇಂಥ ಹಳ್ಳಿಗಳನ್ನು ಹುಡುಕುವುದು ಅತಿ ಸುಲಭ. "ಭವಿಷ್ಯವನ್ನು ದರ್ಶಿಸಬಲ್ಲ ಮತ್ತು ದುರಂತವನ್ನು ನಿಲ್ಲಿಸಬಲ್ಲ ಸಾಮರ್ಥ್ಯವನ್ನು ಮಾನವ ಕಳೆದುಕೊಂಡಿದ್ದಾನೆ. ಆತ ಭೂಮಿಯನ್ನು ನಾಶಗೊಳಿಸುವುದರ ಜೊತೆಗೆ ತಾನೂ ನಿರ್ನಾಮವಾಗಿ ಹೋಗುತ್ತಾನೆ." ಇದು ಆಲ್ಬರ್ಟ್ ಶ್ವೈಟ್ಝರರ(1875–1965, ವೈದ್ಯ, ತತ್ವಜ್ಞಾನಿ, ಸಂಗೀತವಿದ, ಎಲ್ಲಕ್ಕೂ ಮಿಗಿಲಾಗಿ ಗಾಂಧಿ ಐನ್ಸ್ಟೈನ್ ರಂತೆ ಮಾನವತಾವಾದಿ) ಪ್ರವಾದಿ ವಾಣಿ.

ಪುರುಷ ಪ್ರಕೃತಿ

"ನಮ್ಮ ಜೀವನದ ಅಧಿಕಾಂಶವನ್ನು ನಾವು ಮನುಷ್ಯರು ತೋರ್ಕೆಗೆ ಸುಪರಿಚಿತವೂ ವಿಶ್ವಾಸಾರ್ಹವೂ ಆದ ಭೌತ ಮತ್ತು ಮಾನವೀಯ ಪರಿಸರದಲ್ಲಿದ್ದೇವೆಂಬ ಮಿಥ್ಯಾ ಕಲ್ಪನೆಯಿಂದಲೂ ಸ್ವಗೃಹದಲ್ಲಿ ಸಹಜವಾಗಿ ಒದಗುವ ಸ್ವಾಸ್ಥ್ಯಭಾವದಿಂದಲೂ ಬಾಳುತ್ತಿದ್ದೇವೆ. ಆದರೆ ದೈನಂದಿನ ಜೀವನದ ನಿರೀಕ್ಷಿತ ಗತಿಗೆ ತಡೆ ಎದುರಾದಾಗ ನಮ್ಮ ಸ್ಥಿತಿ ಹಡಗೊಡೆದು ಕಡಲಿಗೊಗೆಯಲ್ಪಟ್ಟು, ವಿಶಾಲಸಾಗರದ ಅಪಾರ ವಿಸ್ತಾರದಲ್ಲಿ ಕೈಗೆಟುಕಿದ ಮರದ ಹಲಗೆಯನ್ನು ಬಿಗಿದಪ್ಪಿಕೊಂಡು, ಎಲ್ಲಿಂದ ಬಂದೆವೋ ಎಲ್ಲಿಗೆ ಕೊಚ್ಚಿಕೊಂಡು ಹೋಗುವೆವೋ ಎಂಬುದರ ಅರಿವಿಲ್ಲದೆ, ಬದುಕು–ಸಾವು ಹೋರಾಟ ನಡೆಸುತ್ತಿರುವ ಹೊನಲು ಪಾಲಾದವರ ಸ್ಥಿತಿಯಂತಾಗಿದೆ ಎಂಬುದು ಸುವೇದ್ಯವಾಗುತ್ತದೆ."

ಆಲ್ಬರ್ಟ್ ಐನ್ಸ್ಟೈನರ (1879–1955) ಈ ಮಾತಿನ ಅರ್ಥ ವರ್ತಮಾನ ದಿನಗಳಲ್ಲಿ ನಮಗೆ ಸಾಕಷ್ಟು ತೀಕ್ಷ್ಣವಾಗಿಯೇ ಕುಟುಕುತ್ತಿದೆ – ದೈನಂದಿನ ಜೀವನದ ನಿರೀಕ್ಷಿತ ಗತಿಗೆ ತಡೆ ಎದುರಾಗಿದೆ. ಇದರ ಕಾರಣ ನಾವೇ. ಮಂಕುತಿಮ್ಮನ ನುಡಿಗಳಲ್ಲಿ "ಪ್ರಕೃತಿಯನವರತ ಮನುಜನ ತಿದ್ದುತಿರುವಚಿತೆ ವಿಕೃತಿಗೊಳಿಸುವನವನುಮಾಕೆಯಂಗಗಳ ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ, ವ್ಯಾಕೃತಿಸರೇನವಳ?"

ಇದರ ಸಾರಾಂಶ: ಇಲ್ಲಿ 'ಪ್ರಕೃತಿ' ಎಂದರೆ ನಿಸರ್ಗ, ಪರಿಸರ, ಆವರಣ, ಭೂಮಿ, ಸೌರವ್ಯೂಹ, ಆಕಾಶಗಂಗೆ ಅಥವಾ ವಿಶ್ವ ಎಂಬುದಾಗಿ ಸಂದರ್ಭ ಗ್ರಹಿಸಿ ಅರ್ಥವಿಸಬೇಕು. ಇದು ನಮ್ಮ ಹೊರಗಿನ 'ಪ್ರಕೃತಿ.' ಇನ್ನು ನಮ್ಮೊಳಗಿನ 'ಪ್ರಕೃತಿ'ಯೂ ಇದೆ. ನಮ್ಮ ಮನೋದೈಹಿಕ ವ್ಯಾಪಾರದ ಫಲವಾದ ಸ್ವಭಾವ. ಎಲ್ಲ ಜೀವಿಗಳಿಗೂ ಸಾಮಾನ್ಯವಾದ ಎರಡು ಗುಣಗಳಿವೆ: ಜೀವನ ಮತ್ತು ಪ್ರಜನನ. ಮನುಷ್ಯ (ಅಂದರೆ 'ಪುರುಷ') ತನ್ನ ನಿಕಟ ಪರಿಸರದ (ಅಂದರೆ 'ಪ್ರಕೃತಿ') ಜೊತೆ ನಿರಂತರವಾಗಿ ವ್ಯವಹರಿಸುತ್ತಿರಬೇಕು: ಇದೇ ಬದುಕು. ವ್ಯಕ್ತಿ ಉದ್ದೇಶಪೂರ್ವಕವಾಗಿ 'ಪ್ರಯತ್ನ' ಪಟ್ಟ ಹೊರತು ಆತನಿಗೆ ಆಹಾರ ದೊರೆಯದು. ಈ 'ಪ್ರಯತ್ನ'ವೇ ಮನುಷ್ಯ–ಪರಿಸರ ಅಥವಾ ಪುರುಷ–ಪ್ರಕೃತಿ ಅಂತರಕ್ರಿಯೆ. ಈ 'ಪ್ರಯತ್ನ'ದ ಫಲವಾಗಿ ಬದುಕಿನಲ್ಲಿ ಸುಧಾರಣೆ ಕಂಡುಬರುತ್ತದೆ. ನಾಗರಿಕತೆ ಮುನ್ನಡೆಯುತ್ತದೆ, ಹೊಸ ಹರವುಗಳು ಎದುರಾಗುತ್ತವೆ. ನಾಗರಿಕತೆಯ ಇತಿಹಾಸ ಗಮನಿಸಿದಾಗ ಪುರುಷ–ಪ್ರಕೃತಿ 'ಸಂಘರ್ಷ'ವೇ ಅದರ (ನಾಗರಿಕತೆಯ) ಚಾಲನಬಲ ಎಂದನ್ನಿಸುತ್ತದೆ. ಈ 'ಸಂಘರ್ಷ'ದಲ್ಲಿ ಪ್ರತಿಸಲವೂ 'ಪ್ರಕೃತಿ' ಮನುಷ್ಯನನ್ನು ('ಪುರುಷ') ತಿದ್ದುತ್ತಲೇ ಇರುವುದು. ಆದರೆ ಎಲ್ಲಿಯ ತನಕ?

ಸಂಘರ್ಷವೇಕೆ? ಮಾನವ ತನ್ನ ಪರಿಸರದ ಜೊತೆ ಅನುವರ್ತಿಸಿ ಮತ್ತು ಸಹಕರಿಸಿ ಸುಖಿಯಾಗಿರಬಾರದೇಕೆ? ಮಾನವ–ನಿಸರ್ಗ ಪೂರಕ ಪೋಷಕವಾಗಿರಬೇಕೇ ವಿನಾ ಮಾರಕ ಶೋಷಕವಾಗಿ ಅಲ್ಲ. ಇಲ್ಲಿ ಮೊದಲ ಹೆಜ್ಜೆ ಇಡಬೇಕಾದವ ಮಾನವ. ಇವನೇನಾದರೂ ನಿಸರ್ಗದ ಜೊತೆ ಸೆಣಸಲು ನಿಂತನಾದರೆ ಇವನ ಸರ್ವನಾಶ ಖಾತ್ರಿ. ಪ್ರಾಚೀನ ನಾಗರಿಕತೆಗಳಿಗೆ ಈ ಸೂಕ್ಷ್ಮ ಮನವರಿಕೆ ಆಗಿತ್ತು.

"ದೇವಸ್ಯಪಶ್ಯ ಕಾವ್ಯಂ ನಮಮಾರನಜೀರ್ಯತಿ" (ದೇವರ ಕಾವ್ಯ ನೋಡು ಅದಕ್ಕೆ ಮರಣವಿಲ್ಲ ಜೀರ್ಣವಿಲ್ಲ) ಎಂದು ಹಾಡಿದ, "ಅಣುರೇಣು ತೃಣಕಾಷ್ಠದಲಿ ಸಂಚರಿಸುತಿಹನು" ಎಂದು ವಿವರಿಸಿದ ಇಲ್ಲವೇ ಸಮಸ್ತಚರಾಚರ ವಸ್ತುಗಳಲ್ಲಿ ಭಗವಂತನ ಒಂದೊಂದು ಗುಣವನ್ನು ಆವಾಹಿಸಿದ ಭಾರತೀಯ ಚಿಂತನೆ ಸರ್ವವೇದ್ಯ.

ಗ್ರೀಕ್ ಸಂಸ್ಕೃತಿ ಗಗನಕಾಯಗಳಲ್ಲಿ ದೇವತೆಯರನ್ನೂ ನಿಸರ್ಗ ಬಲಗಳಲ್ಲಿ ಅವರ ಲೀಲಾವಿನೋದಗಳನ್ನೂ ಕಂಡಿತು.

ಪ್ರಕೃತಿ ಪುರುಷರ (yin & yang) ಸಮಾಗಮವೇ ಭೂಮಿ ಎಂದಿತು ಚೀನಾ ಸಂಸ್ಕೃತಿ.

ವರ್ತಮಾನ ಜೀವನ ಭಗವದನುಗ್ರಹವೆಂದು ಮಾಯಾ ಸಂಸ್ಕೃತಿ ಭಾವಿಸಿತ್ತು.
ಇಲ್ಲೆಲ್ಲ ಭಾಷೆ ಹೇಗೆಯೇ ಇರಲಿ, ಅಂತರ್ಗತ ಭಾವ ಒಂದೇ: ಮಾನವ ನಿಸರ್ಗಾವಲಂಬಿ ಮತ್ತು ನಿಸರ್ಗಾಧೀನ, ಆದ್ದರಿಂದ ಈತ ನಿಸರ್ಗಕ್ಕೆ ವಿನೀತನಾಗಿರಬೇಕು.

ಆದರೆ ನಾಗರಿಕತೆ ನಡೆದು ಬಂದ ಹಾದಿ ಬೇರೆಯೇ. ಬದುಕಿನ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ "ಸರ್ವೇಜನಾಸ್ಸುಖಿನೋ ಭವಂತು" ಎಂಬ ಆದರ್ಶವನ್ನು ಪ್ರತ್ಯಕ್ಷವಾಗಿಸುವುದು ತಂತ್ರವಿದ್ಯೆಯ (technology) ಪ್ರಕಟಿತೋದ್ದೇಶ. ವಾಸ್ತವವಾಗಿ ಕಂಡುಬರುತ್ತಿರುವುದೇನು? ನಿವ್ವಳ ಮೊತ್ತ ಪರಿಶೀಲಿಸಿದುದಾದರೆ ತದ್ವಿಪರೀತ ಸ್ಥಿತಿ. ಇದಕ್ಕೆ ಪುರಾವೆಯಾಗಿ ನಿಮ್ನ ಮತ್ತು ಮಧ್ಯಮ ವರ್ಗದವರ – ಇವರು ತಾನೇ ಬಹುಸಂಖ್ಯಾತರು – ಬವಣೆ ಗಮನಿಸಬಹುದು: ಪಾವತಿಸಿದ ಹಣಕ್ಕೆ ಅನುಗುಣವಾಗಿ ಸರಕು ಸೇವೆ ದೊರೆಯದಿರುವುದು, ಪ್ರಾಮಾಣಿಕ ಜೀವನ ಅಸಹನೀಯವಾಗಿರುವುದು, ಮಿಥ್ಯಾಮೌಲ್ಯಗಳು ಶಾಶ್ವತಮೌಲ್ಯಗಳ ಸ್ಥಾನಾತಿಕ್ರಮಣ ಮಾಡಿರುವುದು, ಶುದ್ಧ ವಾಯು, ಜಲ, ಆಹಾರ, ಅಂತೆಯೇ ನಾಗರಿಕ ವಸತಿ, ಸರಳ ವಸನ, ಯುಕ್ತ ಶಿಕ್ಷಣ, ಉಪಯುಕ್ತ ಉದ್ಯೋಗ ಅಲಭ್ಯವಾಗಿರುವುದು, ಸಮಗ್ರವಾಗಿ ಬದುಕಿನ ಮಟ್ಟ ಕುಸಿದಿರುವುದು.

ಅನುಭೋಗಾತಿರೇಕತ್ವ

ಇಂದಿನ ಪ್ರಪಂಚ consumerism ಎಂಬ ತೀವ್ರ ಜ್ವರಗ್ರಸ್ತವಾಗಿರುವಂತೆ ತೋರುತ್ತದೆ. 'ಋಣಂ ಕೃತ್ವಾ ಘೃತಂ ಪಿಬೇತ್' ಎಂಬ ಅನುಕೂಲ ಸೂತ್ರದ ಒಂದು ಮುಖವಿದು – ಅನುಭೋಗಾತಿರೇಕತ್ವ. ಎಂದರೆ ಸರಕು ಸೇವೆಗಳನ್ನು ಅವು ನಮಗೆ ಅವಶ್ಯವಿರಲಿ ಇಲ್ಲದಿರಲಿ, ಸಮೃದ್ಧವಾಗಿ ಅನುಭೋಗಿಸುವುದೇ ಉಪಯೋಗಿಸಿ ವೆಚ್ಚಿಸಿ ಮಾಲಿನ್ಯಕ್ಕೆ ಕಾರಣವಾಗುವುದೇ ಪ್ರಗತಿಯ ಮಾನಕ ಎಂಬ ಭ್ರಮೆ. ಉಪಕರಣ ಸಲಕರಣೆ ಯಂತ್ರಸಾಮಗ್ರಿಗಳ ನಿರಂತರ ದಾಸನಾಗಿರುವ ಆಧುನಿಕ ಮಾನವ, ಆತನ ಮಿದುಳ ಶಿಶುವಾದ ತಂತ್ರವಿದ್ಯೆಯನ್ನು ನಿಯಂತ್ರಿಸುವುದರ ಬದಲು ಅದಕ್ಕೆ ಸುಲಭ ಲಭ್ಯ ಪ್ರಯೋಗ ಪಶುವಾಗಿದ್ದಾನೆ – ಶ್ವಾನಲಾಂಗೂಲಚಾಲನೆ (dog wagging the tail) ಲಾಂಗೂಲಶ್ವಾನಚಾಲನೆಗೆ (tail wagging the dog) ಮಣಿದಂತೆ!

ಆತ ಹಳೆಯ ಮನೆಯೊಂದನ್ನು ಕೊಂಡು ಅದಕ್ಕೆ ಪರಿಪೂರ್ಣ ಮುಖಮಾರ್ಜನ ಅಥವಾ ಕಾಯಕಲ್ಪವಿತ್ತು ಹೊಸಮನೆಯ ಜೀವ ಕಳೆ ತಂದ. ಸಾಕಷ್ಟು ಪೀಠೋಪಕರಣಗಳಿಂದಲೂ ಮತ್ತೆ ಆಸನಗಳಿಂದಲೂ ಅಲಂಕಾರ ವಸ್ತುಗಳಿಂದಲೂ ಅದರ 'ಅಂತರಂಗ'ವನ್ನು ಸಿಂಗರಿಸಿದ. 'ಶುಭದಿನ'ದಂದು ನೂತನ ಗೃಹಪ್ರವೇಶ ಸಮಾರಂಭ ಏರ್ಪಡಿಸಿ ಬಂಧುಮಿತ್ರರನ್ನೂ ಪ್ರತಿಷ್ಠಿತ ಗಣ್ಯರನ್ನೂ ಆಹ್ವಾನಿಸಿದ. ಅವರು ಬಂದರು. ಮನೆಯ ಒಳಹೊರಗು ನೋಡಿ ಬೆರಗಾದರು. ಮನೆಯೊಡೆಯನ ವಿವರಣೆ ಆಲಿಸಿ ತಲೆದೂಗಿದರು ಮತ್ತು ಆತನಿಗೆ ಮುಕ್ತ ಅಭಿನಂದನೆ ಸಲ್ಲಿಸಿದರು.

"ಹೇಗಿದೆ ನನ್ನ ಯೋಜನೆ ಮತ್ತು ನಿರ್ವಹಣೆ?" ಹಿರಿಯರೊಬ್ಬರನ್ನು ಆತ ಉತ್ಸುಕತೆಯಿಂದ ಪ್ರಶ್ನಿಸಿದ.
ಅವರೆಂದರು "ನಾನು ಭಾವಿಸಿದ್ದೆ ಮನೆಯಿರುವುದು ವಾಸಕ್ಕೆಂದು!" ಆ ಪ್ರದರ್ಶನ ಪರಿವಾರಗಳ ಸಂತೆಯಲ್ಲಿ 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂಬುದು ಅವರ ಮಾತಿನ ಧ್ವನಿ.

ಅನುಭೋಗಾತಿರೇಕತ್ವಕ್ಕೇಕೆ ಇಷ್ಟೊಂದು ಪ್ರಾಶಸ್ತ್ಯ? ತಂತ್ರವಿದ್ಯೆ ಹಿರಿ ಬಂಡವಾಳದ ಅನುಯಾಯಿ. ಅಂದ ಮೇಲೆ ತಂತ್ರವಿದ್ಯೆಯ ಫಲಗಳು ಹಿರಿ ಸಂಖ್ಯೆಯಲ್ಲಿ ಖರ್ಚಾಗದಿದ್ದರೆ, ಅಂದರೆ ಜನರಿಂದ ಅನುಭೋಗಿಸಲ್ಪಡದಿದ್ದರೆ, ಬಂಡವಾಳ ಬೆಳೆಯಲಾರದೆಂಬುದು ಸ್ಪಷ್ಟ. ನಮ್ಮ ಜೀವನದ ಸಮಸ್ತ ಮುಖಗಳೂ – ಅನ್ನ, ಬಟ್ಟೆ, ಮನೆ, ವಿದ್ಯೆ, ವಿಹಾರ, ಉದ್ಯೋಗ, ಪ್ರಯಾಣ ಇತ್ಯಾದಿ – ಅನುಭೋಗಾತಿರೇಕತ್ವದ ಧೃತರಾಷ್ಟ್ರಾಲಿಂಗನಕ್ಕೆ ಒಳಗಾಗಿವೆ ಎಂಬುದು ಕೊಂಚ ಯೋಚಿಸಿದರೆ ಹೊಳೆಯದಿರದು. ದುರ್ದೈವವೆಂದರೆ ಆಧುನಿಕ ಯುಗದಲ್ಲಿ ಪ್ರಾಯಶಃ ಸರ್ವಸಂಗ ಪರಿತ್ಯಾಗಿ ಗೊಂಡಾರಣ್ಯವಾಸಿ ಋಷಿಯ ಹೊರತಾಗಿ, ಅನುಭೋಗಾತಿರೇಕತ್ವ ಸರ್ವವ್ಯಾಪಿ ಸರ್ವಗ್ರಾಹಿಯಾಗಿದೆ.

ಭವಿಷ್ಯ ವಿಜ್ಞಾನವೆಂದರೇನು?

"ಭವಿಷ್ಯವಿಜ್ಞಾನ" ವರ್ತಮಾನದ ಅನುಕೂಲ ಮಂಚಿಕೆಯಲ್ಲಿ ನಿಂತು ಭೂತವನ್ನು ಸಿಂಹಾವಲೋಕಿಸಿ ಭವಿಷ್ಯದತ್ತ ದೃಷ್ಟಿ ಹಾಯಿಸಲು ಮಾಡಿರುವ ಶಾಸ್ತ್ರೀಯ ಪ್ರಯತ್ನ. ವಿಜ್ಞಾನ, ತಂತ್ರವಿದ್ಯೆ ಮಾತ್ರವೇ ಇದರ ಘಟಕಗಳಲ್ಲ. ಇವು ಪ್ರಧಾನ ಘಟಕಗಳೆಂಬುದು ನಿಜ. ಮಾನವನ ಇತರ ಎಲ್ಲ ಚಟುವಟಿಕೆಗಳೂ ಆಶೋತ್ತರಗಳೂ ಭವಿಷ್ಯವಿಜ್ಞಾನವನ್ನು ರೂಪಿಸುವ ಕಾರಕಗಳು.

ಗ್ರಹಸಂಚಾರಕ್ಕೂ (ಗ್ರಹಚಾರ?) ವ್ಯಕ್ತಿ ಭವಿಷ್ಯಕ್ಕೂ ತಳಕುಹಾಕುವ ಫಲಜ್ಯೋತಿಷ್ಯವನ್ನು ಕುರಿತು ನಾನಿಲ್ಲಿ ಪ್ರಸ್ತಾವಿಸುತ್ತಿಲ್ಲ. 'ಫಲಜ್ಯೋತಿಷ್ಯ'ದ (astrology) ಬಗ್ಗೆ ತಿಳಿಯಬಯಸುವವರು ನನ್ನದೇ 'ಜಾತಕ ಮತ್ತು ಭವಿಷ್ಯ,' ಭವಿಷ್ಯವಾಚನ', 'ವೈಜ್ಞಾನಿಕ ಮನೋಧರ್ಮ' ಮೊದಲಾದ ಪುಸ್ತಕಗಳನ್ನು ಗಮನಿಸಬಹುದು.

ವರ್ತಮಾನ ಕಾಲದಲ್ಲಿ ಪ್ರಪಂಚದ ಸ್ಥಿತಿಗತಿಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಭವಿಷ್ಯಕಾಲದ ಸ್ಥಿತಿಗತಿಗಳನ್ನು ಕಣಿನುಡಿಯುವ ವಿಜ್ಞಾನವೇ ಭವಿಷ್ಯ ವಿಜ್ಞಾನ (Futurology). ಇದು ನಾವು ರೂಢಿಯಲ್ಲಿ ತಿಳಿದಿರುವಂಥ – ಉದಾಹರಣೆಗೆ ಖಗೋಳ, ಗಣಿತ, ಭೌತ ಅಥವಾ ರಸಾಯನ ವಿಜ್ಞಾನಗಳಂಥ – ಒಂದು ನಿರ್ದಿಷ್ಟ ವಿಜ್ಞಾನಪ್ರಕಾರವಲ್ಲ. ಬದಲು ಹಲವಾರು ವಿಜ್ಞಾನ ಹಾಗೂ ಮಾನವಿಕ ಪ್ರಕಾರಗಳ ಸಂಗಮದಿಂದ ತೀರಾ ಈಚೆಗೆ ಹದಿಗಟ್ಟಿ ಮೈದಳೆದಿರುವ ಒಂದು ಅಧ್ಯಯನ ವಿಭಾಗ. ಬರ್ಲಿನ್ ಸ್ವತಂತ್ರ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಅಸಿಪ್ ಕೆ. ಫ್ಲೆಕ್‌ಥೀಮ್ ಎಂಬವರು, 1950ರ ಸುಮಾರಿಗೆ, ಫ್ಯೂಚರಾಲಜಿ (ಭವಿಷ್ಯವಿಜ್ಞಾನ) ಎಂಬ ಇಂಗ್ಲಿಷ್ ಶಬ್ದವನ್ನು ಟಂಕಿಸಿ ಚಲಾವಣೆಗೆ ತಂದು ಭವಿಷ್ಯದ ಸಮಾಜ ಮತ್ತು ಸಂಸ್ಕೃತಿಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಬೇಕು ಎನ್ನುವ ಸಲಹೆ ನೀಡಿದರು. ಸ್ವತಃ ಇವರೂ ಇವರಂತೆ ಆರ್ನಾಲ್ಡ್ ಟಾಯನ್ಬೀ, ಆಲ್ಫ್ರೆಡ್ ವೆಬರ್, ರ್‍ಯಾಶೆಲ್, ಕಾರ್ಸನ್, ರುತ್ ಮೂರ್, ಬಾರ್ಬರ ವಾರ್ಡ್ ಮೊದಲಾದವರೂ ಈ ನಿಟ್ಟಿನಲ್ಲಿ ಮೂಲಭೂತ ಚಿಂತನೆಗಳನ್ನು ನಡೆಸಿ ತಮ್ಮ ಅಧ್ಯಯನ ಫಲಗಳನ್ನು ಪ್ರಕಟಿಸಿ ಪ್ರಪಂಚದ ಗಮನವನ್ನು ಭವಿಷ್ಯ ವಿಜ್ಞಾನದತ್ತ ಸೆಳೆದ ಮೊದಲಿಗರು.

ಭವಿಷ್ಯವಿಜ್ಞಾನದ ಪರಿಕಲ್ಪನೆ

ಭೂತಕಾಲದಿಂದ ಬೆಳೆದು ಅಭಿವರ್ಧಿಸಿ ಬಂದಿರುವ ಈ ಪ್ರಪಂಚ ಈಗ ವರ್ತಮಾನ ಕಾಲದ ಅಸಿಧಾರೆಯನ್ನು ಅಡ್ಡಹಾಯುತ್ತಿದೆ. ಈ ತನಕ ಪ್ರಪಂಚ ನಡೆದು, ಅಥವಾ ಇನ್ನೂ ಸ್ಪಷ್ಟವಾಗಿ, ಉರುಳಿ ಬಂದಿರುವ ಜಾಡನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಮುಂದೆ ಅದು ಯಾವ ಜಾಡಿನ ಮೇಲೆ ಉರುಳಬಹುದು ಎನ್ನುವುದನ್ನು ಭವಿಷ್ಯವಿಜ್ಞಾನ ಮುನ್ನುಡಿಯುತ್ತದೆ.

ಪ್ರಪಂಚದ ಸಂಪನ್ಮೂಲಗಳನ್ನು ಆಧರಿಸಿ ಮಾನವ ತನ್ನ ನಾಗರಿಕತೆಯನ್ನು ಅಭಿವರ್ಧಿಸಿಕೊಂಡು ಬಂದಿದ್ದಾನೆ. ಪ್ರಜ್ಞಾಪೂರ್ವಕವಾಗಿ ಹೀಗೆ ಮಾಡಿದ್ದಾನೆ ಎಂದು ಇದರ ಅರ್ಥವಲ್ಲ. ನಡೆದು ಬಂಡ ಜಾಡನ್ನು ಇಂದಿನ ಔನ್ನತ್ಯದಿಂದ ಸಿಂಹಾವಲೋಕಿಸಿದಾಗ ಮೂಡುವ ಭಾವನೆ ಇದು ಎಂದು ಅರ್ಥ. ಮುಂಬರುವ ದಶಕಗಳಲ್ಲಿ ಈ ನಾಗರಿಕತೆ ಹೇಗೆ ರೂಪುಗೊಂಡೀತು ಎನ್ನುವುದನ್ನು ಭವಿಷ್ಯ ವಿಜ್ಞಾನ ಈಗ ಕುಂಚಿಸಲು ಪ್ರಯತ್ನಿಸುತ್ತದೆ.

ಮಾನವನ ಮಿದುಳಕೂಸು ವಿಜ್ಞಾನ (ಸೈನ್ಸ್). ವಿಜ್ಞಾನದ ದೂತ ತಂತ್ರವಿದ್ಯೆ (ಟೆಕ್ನಾಲಜಿ). ಮಾನವ–ತಂತ್ರವಿದ್ಯೆ ಅಂತರಕ್ರಿಯೆಯ ಹಾಗೂ ಅಂತರಾವಲಂಬನದ ಪರಿಣಾಮವಾಗಿ ವರ್ತಮಾನ ಜೀವನ ಅತಿ ಸಂಕೀರ್ಣವಾಗಿದೆ. ಈ ಸಂಕೀರ್ಣ ಜೀವನದ ಭವಿಷ್ಯ ಏನು ಎನ್ನುವುದನ್ನು ಭವಿಷ್ಯವಿಜ್ಞಾನ ಈಗ ಚಿತ್ರಿಸಲು ಹವಣಿಸುತ್ತದೆ.

1950ಕ್ಕೆ ಪೂರ್ವದಲ್ಲಿ ಭವಿಷ್ಯವಿಜ್ಞಾನದ ಪರಿಕಲ್ಪನೆ ಹೊಳೆಯಲಿಲ್ಲವೇಕೆ? ಮುಖ್ಯವಾಗಿ ಎರಡು ಕಾರಣಗಳನ್ನು ಗುರುತಿಸಬಹುದು.

ಒಂದು, ಅಂದಿನ ಜನಸಂಖ್ಯೆ ತೀರ ಮಿತವಾಗಿತ್ತು. ಆ ದಿನದ ಮಾನವನ ಆವಶ್ಯಕತೆಗಳಾದರೂ ಅಷ್ಟೆ – ಸರಳ ಮತ್ತು ಪರಿಮಿತ. ಇತ್ತ ನಿಸರ್ಗದ ಸಂಪನ್ಮೂಲಗಳಾದರೂ ಅಪರಿಮಿತವೇ ಎನ್ನುವ ಭಾವನೆಯನ್ನು ಮೂಡಿಸುವಂತಿದ್ದುವು. ಹೀಗಾಗಿ 1950ರ ಹಿಂದಿನ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆ ಮತ್ತು ಸಂಪನ್ಮೂಲಗಳ ನಡುವೆ ಗಮನಾರ್ಹ ಕಂದರವೇನೂ ಏರ್ಪಟ್ಟಿರಲಿಲ್ಲ. ನೈಸರ್ಗಿಕ ಸಂಪನ್ಮೂಲಗಳ ಪೂರ್ಣಾನ್ವೇಷಣೆಯನ್ನೇ ಆಗಲಿ ವ್ಯವಸ್ಥಿತ ಉಪಯೋಗವನ್ನೇ ಆಗಲಿ ಮಾನವ ಇನ್ನೂ ಮಾಡಿರಲಿಲ್ಲ. ಕೋರಿದ ವರಗಳನ್ನು ಅನುಗ್ರಹಿಸುವ ಕಲ್ಪತರುವೇ ಧರಿತ್ರಿ ಎಂಬುದು ಅಂದಿನ ಮನೋಧರ್ಮವಾಗಿತ್ತು.

ಎರಡು, ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ತಂತ್ರವಿದ್ಯೆ ಅಭೂತಪೂರ್ವ ವೇಗೋತ್ಕರ್ಷ ಪಡೆದು ದೌಡಾಯಿಸತೊಡಗಿತು. ಅಭಿನವ ಬ್ರಹ್ಮನಾದ ತಂತ್ರವಿದ್ಯಾಪಾರಂಗತ ಮಾನವ ನಿಸರ್ಗದ ಅನೇಕ ನಿಗೂಢ ರಹಸ್ಯಗಳನ್ನು ಭೇದಿಸಿ ಬದುಕನ್ನು ಹಸನುಗೊಳಿಸುವ ವಿಧಾನಗಳನ್ನು ಶೋಧಿಸಿ ರೂಢಿಸಿದ. ಇವುಗಳ ಪರಿಣಾಮವಾಗಿ ತಂತ್ರವಿದ್ಯೆಯ ಶಕ್ತಿದಾಹ ತೀವ್ರವಾಯಿತು. ಇದರ ಶಮನಕ್ಕೆ ಮತ್ತೆ ನಿಸರ್ಗವನ್ನೇ ಮರೆಹೊಗುವುದು ಅನಿವಾರ್ಯವಾಯಿತು – ಅಂದರೆ ನಿಸರ್ಗದ ಸೂರೆ ಅವ್ಯಾಹತವಾಗಿ ಸಾಗಿತು. ನಿಸರ್ಗ ಇದರಿಂದ ಬರಡಾಯಿತು; ಬತ್ತಿತು. ತಂತ್ರವಿದ್ಯೆ – ಶಕ್ತಿ ಮಜಲೋಟದ ಪರಿಣಾಮವಾಗಿ ತ್ಯಾಜ್ಯವಸ್ತುಗಳ ಹಿರಿಮೊತ್ತ ಪೇರಿಕೊಂಡು ಪರಿಸರಮಾಲಿನ್ಯಕ್ಕೆ ಕಾರಣವಾಯಿತು. ವ್ಯಾಪಕ ಪರಿಸರಮಾಲಿನ್ಯ ಇಪ್ಪತ್ತನೆಯ ಶತಮಾನದ, ತತ್ರಾಪಿ ಅದರ ಉತ್ತರಾರ್ಧದ, ತಂತ್ರವಿದ್ಯೆಯ ಉಪೋತ್ಪನ್ನ.

ಇಲ್ಲಿ ಇನ್ನೂ ಒಂದು ಸಂಗತಿಯನ್ನು ಪ್ರಸ್ತಾವಿಸಬೇಕು. ತಂತ್ರವಿದ್ಯಾಭಿವರ್ಧನೆಯ ಸಮಗ್ರ ಪರಿಣಾಮವಾಗಿ, ಮರಣಕಾರಕ ರೋಗರುಜಿನಗಳು ಹಿಮ್ಮೆಟ್ಟಿ ಜನರ ಜೀವಿತ ನಿರೀಕ್ಷೆ ಏರುಮೊಗವಾಗಿದೆ. ಸಾವಿನ ಸಂಖ್ಯೆ ಕಡಿಮೆ ಆಗಿದೆ. ಇಂಥ ಪರಿಸ್ಥಿತಿಯಲ್ಲಿ ಜನನ ದರ ಹೆಚ್ಚಿದ್ದೇ ಆದರೆ ಜನಸಂಖ್ಯೆ ಜಿಗಿದೇರುತ್ತದೆ. ಹೀಗೆ ವೃದ್ಧಿಸುವ ಜನಸಂಖ್ಯೆ ಅಧಿಕಶಕ್ತಿಯನ್ನು ಬೇಡುತ್ತದೆ. ಇದರ ಪೂರೈಕೆಗಾಗಿ ತಂತ್ರವಿದ್ಯೆ ಬೆಳೆಯಬೇಕಾಗುತ್ತದೆ ಹೊಸ ನೆಲಗಳನ್ನು ಅರಸಬೇಕಾಗುತ್ತದೆ. ಹೀಗೆ ಜನಸಂಖ್ಯೆ – ತಂತ್ರವಿದ್ಯೆ – ಶಕ್ತಿವಿನಿಯೋಗ ಒಂದು ವಿಷತ್ರಿಭುಜವನ್ನೇ ರಚಿಸುವಂತೆ ತೋರುತ್ತದೆ. ಒಂದು ಇನ್ನೆರಡಕ್ಕೆ ಕೊಕ್ಕೊಡುತ್ತ ಮೂರೂ ಚಟುಲಗತಿಯಿಂದ ಹೊರಧಾವಿಸುತ್ತ ತ್ರಿಭುಜದ ಸಲೆ ವ್ಯಾಕೋಚಿಸುತ್ತದೆ.

ಎರಡು ನಿದರ್ಶನಗಳು

ಪರಿಸರಪ್ರೇಮಿಗಳ ಬೃಹತ್ಸಮಾವೇಶ. ಮಂತ್ರಿ ಮಹೋದಯರು, ಗಣ್ಯ ಆಮಂತ್ರಿತರು, ಹಿರಿಯ ಅಧಿಕಾರಿ ವರ್ಗ, ಸ್ವಯಂಸೇವಕರ ದಂಡು ಮತ್ತು ಪ್ರೇಕ್ಷಕಗಡಣ ಎಲ್ಲರೂ ಆ ಶುಭ ಪ್ರಾತಃಕಾಲ ಅಲ್ಲಿ – ನಗರದ ಅತಿ ಪ್ರತಿಷ್ಠಿತ ತಾರಾಸಭಾಂಗಣದಲ್ಲಿ – ಕಿಕ್ಕಿರಿದು ನೆರೆದಿದ್ದರು. ಮಂತ್ರಿಗಳಿಂದ ಉದ್ಘಾಟನೆ, ವರಿಷ್ಠ ಧೀಮಂತನಿಂದ ಆಶಯ ಭಾಷಣ, ಸಾಮೂಹಿಕ ಸ್ವಸ್ತಿಪಾನ ಮುಂತಾದ ಪೂರ್ವವಿಧಿಗಳು ಸಾಂಗವಾಗಿ ನೆರವೇರಿದ ಬಳಿಕ ತಜ್ಞ ಮಂಡಳಿಯ ವಿಶೇಷ ಸಭೆ ಆರಂಭವಾಯಿತು. ಸಂಶೋಧನ ಪ್ರಬಂಧಗಳ ಮಂಡನೆ, ಚರ್ಚೆ ಮೊದಲಾದ ಗೋಷ್ಠಿ ಚಟುವಟಿಕೆಗಳು ಭರದಿಂದ ಮುನ್ನಡೆದುವು – ಎಲ್ಲವೂ ಇಂಗ್ಲಿಷ್ ಭಾಷೆಯಲ್ಲಿ, ದೂರದರ್ಶನದ ಪ್ರಖರ ವಿದ್ಯುದ್ದೀಪಗಳ ಉಜ್ವಲತೆಯಲ್ಲಿ, ಪತ್ರಿಕಾಪ್ರತಿನಿಧಿಗಳ ದಿವ್ಯ ಸಮ್ಮುಖದಲ್ಲಿ, ಹಾಜರಿದ್ದ ಸ್ಥಳೀಯ 'ಪರಿಸರ' ಅಲ್ಲ ಆ ಸಂಘಟಕರ ಲಕ್ಷ್ಯ, ಹಾಜರಿರದ ಪ್ರಪಂಚ ಪರಿಸರ!

ಈ ಎಲ್ಲ 'ರಾಗ – ತಾನ – ಪಲ್ಲವಿ'ಗಳ ತಳದಲ್ಲಿ ಅನುರಣಿಸುತ್ತಿದ್ದ ಶ್ರುತಿ ಒಂದೇ "ಅಜ್ಞಾತ ಪರಿಸರವೈರಿಯ ಸರ್ವಹನನವೇ ನಮ್ಮ ಚರಮ ಧ್ಯೇಯ!" ಆತ ಎಲ್ಲಿರುವನು? ವಿದೇಶಗಳಿಂದ ಆಮದಾಗುವ ಸರಕು ಸೇವೆಗಳಲ್ಲಿ? ಹಿರಿಬಂಡವಾಳಿಗರ ಪುಂಗಿಯಾಟಕ್ಕೆ ತಲೆದೂಗುವ ಭ್ರಷ್ಟ ರಾಜಕಾರಣಿಗಳ ಗುಪ್ತ ವ್ಯವಹಾರಗಳಲ್ಲಿ? ಅರಣ್ಯ ಹಂತಕರ ಕುಠಾರಾಂತರ್ಗತ ಅಗ್ನಿಯಲ್ಲಿ? ಬೃಹಜ್ಜಲವಿದ್ಯುದ್ಯೋಜನೆಗಳ ಮಹಾಪಂಚಾಂಗಗಳ ತಳದಲ್ಲಿ? ಎಲ್ಲಿರುವನು? ಎಲ್ಲಿರುವನು? ಶೋಧ ಮುಂದುವರಿಯಿತು ತಾರಸ್ಥಾಯಿಯಲ್ಲಿ, ಇಂಗ್ಲಿಷಿನ ಸಿದ್ಧ ಪದಪುಂಜಗಳಲ್ಲಿ ಮತ್ತು ಪ್ರಸಿದ್ಧ ಸೂಕ್ತಿಗಳಲ್ಲಿ.

ಮುಂದೆ ಸಭಾಸದರ ಸರದಿ. ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ, ಆದರೆ ಸಂಕ್ಷೇಪವಾಗಿ ಮಂಡಿಸಲು ಅವಕಾಶ. ಆಗ ಅವನೆದ್ದ – ಹಿಂದಿನ ಸಾಲಿನಿಂದ. ಅಂವ ಹ್ಯಾಂಗಿದ್ದ? ಅಲ್ಲಿಯ 'ಕುಲೀನ' ಪರಿಸರಕ್ಕೆ ಅಪಸ್ವರದಂತೆ! ಬಾಣದಂತೆ ಧಾವಿಸಿ ವೇದಿಕೆ ಏರಿ ಧ್ವನಿವರ್ಧಕದ ಹಿಂದೆ ನಿಂತ – ಪರಿಸರ ಪರಿಣತರ ಕುಚೋದ್ಯ ಟೀಕೆಗಳಿಗೆ ಸುಯೋಗ್ಯ ಗ್ರಾಸವಾಗಿ. ಮೊದಲ ನಾಲ್ಕು ವಾಕ್ಯಗಳನ್ನು ಶುದ್ಧ ಇಂಗ್ಲಿಷಿನಲ್ಲಿ, ಸ್ಫುಟ ಉಚ್ಚಾರಣೆಯಲ್ಲಿ, ಅಸ್ಖಲಿತತಾಯಿಯಲ್ಲಿ ಉರುಳಿಸಿ ಸರ್ವರ ಮನಗೆದ್ದ. ಮುಂದೆ ತನ್ನ ವಾದವನ್ನು 'ಲಲಿತವಹ' ದೇಸಿಗನ್ನಡದಲ್ಲಿ ಬಿತ್ತರಿಸಿದ. ಸಾರಾಂಶ:

"ನೀವು ತೊಟ್ಟಿರುವ ಪೋಷಾಕು, ಬಳಸುತ್ತಿರುವ ಅತಿಶಯ ಸೌಕರ್ಯ, ನಡೆಸುತ್ತಿರುವ ಜೀವನಶೈಲಿ ಒಂದೊಂದೂ ಪರಿಸರದ ನೆತ್ತರನ್ನು ಅಗಾಧವಾಗಿ ಬಸಿಯುತ್ತಿದೆಯೆಂದು ನಿಮಗೆ ಗೊತ್ತಿದೆಯೇ? ನಿಸರ್ಗದ ಸೂರೆಯೇ ಧ್ಯೇಯವಾಗಿರುವ ದುರ್ಲಾಭಕೋರರ ಕಪ್ಪು ಹಣ ಇಂದಿನ ಈ ಸಭೆಯ ಪೂರ್ತಿ ವೆಚ್ಚ ಭರಿಸಿದೆ ಎಂಬುದು ನಿಮಗೆ ತಿಳಿದಿದೆಯೇ? ಪರಿಸರವೈರಿಯನ್ನು ಹೊರಗೇಕೆ ಅರಸುತ್ತೀರಿ? ನಿಮ್ಮಲ್ಲೆ ಒಬ್ಬೊಬ್ಬರಲ್ಲೂ ಆತ ಅವಿತು ಕುಳಿತಿದ್ದಾನೆ – ಬಿಡಿ ನಿಮ್ಮ ದುರಾಸೆ, ಮೈಗಳ್ಳತನ ಮತ್ತು ಅನುಭೋಗಾತಿರೇಕತ್ವ; ತೊಡಿ ಪಣ, ಸರಳ ಜೀವನ ಗಹನ ಚಿಂತನ ನಡೆಸಲು. ನೆಲದಿಂದ ಎತ್ತರ ಎತ್ತರ ಏರಿದಷ್ಟೂ ಭೌತವಾಗಿ ಮಾತ್ರ ಅಲ್ಲ ಮಾನಸಿಕವಾಗಿ ಕೂಡ ನೀವು ಜೀವನ ವಿಮುಖರಾಗುತ್ತೀರಿ, ಪರಿಸರ ವೈರಿಗಳಾಗುತ್ತೀರಿ."

ಮುಂಜಾನೆಯ ಹೂಬಿಸಿಲಿನ ಮೃದು ಶಾಖಕ್ಕೆ ಮೈಯೊಡ್ಡಿ ವೃದ್ಧ ಸರದಾರಜೀ ಜೋಕಾಲಿಯಲ್ಲಿ ಲಘುವಾಗಿ ಹಿಂದೆ ಮುಂದೆ ತೇಲುತ್ತಿದ್ದ. ಎದುರಿಗೆ ಗಾವುದ ಗಾವುದ ಹಬ್ಬಿ ನಳನಳಿಸುತ್ತಿದ್ದ ಗೋಧಿ ಪೈರಿನ ಸಮೃದ್ಧಿ ನೋಡಿ ಆನಂದಪರವಶನಾಗಿದ್ದ. ಅದು ಆತ ಮತ್ತು ಆತನ ಕುಟುಂಬಸ್ಥರ ವ್ಯವಸ್ಥಿತ ಕಾಯಕದ ಫಲ, ನೆಲತಾಯಿ ಮನತುಂಬಿ ಕೃಪೆಯಿಟ್ಟು ಹರಸಿದ ಫಸಲು. ಇನ್ನು ಕೆಲವೇ ದಿನಗಳಲ್ಲಿ ಕೊಯ್ಲಿಗಾಗಿ ಮಾಗುತ್ತಿದ್ದ ಸಂಪತ್ತಿನ ಕಣಜ: 'ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗಸೊಗವ ತರುತಿದೆ!' ಮಂದಮಾರುತದ ಬೀಸು, ಕಾಳಿನ ಭಾರದಿಂದ ಬಾಗಿದ ತೆನೆಗಳ ತೊನೆತದ ಸುಯ್ಲು, ಹಕ್ಕಿಗಳ ಕಲರವ. ಆವಿಯಾಡುತ್ತಿದ್ದ ಕುದಿ ಚಹಾ ತುಂಬಿದ ಭರ್ಜರಿ ಚಾದಾನಿಸಹಿತ ಬಂದಳು ಸರದಾರಿಣೀ. ಗಂಡನಿಗೆ ಅದನ್ನು – ಜೀವಪೋಷಕ ಪೀಯೂಷಕುಂಭವನ್ನು – ನಲ್ಮೆಯಿಂದೊಪ್ಪಿಸಿ ಮನೆಗೆಲಸಕ್ಕೆ ಮರಳಿದಳು. ನಿಸರ್ಗ ನಲಿಯಿತಲ್ಲಿ!

ಮುದುಕನ ನೆತ್ತಿಗೆ ಚಹಾದ 'ಸೊಕ್ಕು' ಅಡರಿ ಆತ ಅರ್ಧ ನಿಮೀಲಿತನಯನನಾಗಿದ್ದ. ಆಗ ಅಲ್ಲಿಗೆ ಭರದಿಂದ ಬಂದು ನಿಂತಿತೊಂದು ಜೀಪ್. ಲಗುಬಗೆಯಿಂದ ಹೊರ ಹಾರಿದರು ಸುಟಿ ತರುಣರು – ಅತ್ಯಾಧುನಿಕ ಪೋಷಾಕು ಧಾರಿಗಳು. ಸರದಾರಜಿಯ ಎದುರು ವಿನಯಪೂರ್ವಕವಾಗಿ ನಿಂತು ಆತನಿಗೆ ಗೌರವಯುಕ್ತ ಪ್ರಣಾಮವರ್ಪಿಸಿ ತಮ್ಮ ಪರಿಚಯ ನಿವೇದಿಸಿದರು. ಮುದ್ರಿತ ಪತ್ರದಾಖಲೆಗಳ ಕಂತೆಯನ್ನು ಕೊಟ್ಟರು ಮತ್ತು ಆತನ ಪ್ರತಿಕ್ರಿಯೆಯನ್ನು ಉತ್ಸುಕತೆಯಿಂದ ನಿರೀಕ್ಷಿಸಿದರು.

ದಾಖಲೆಗಳ ಮೇಲೆ ಕಣ್ಣು ಹಾಯಿಸಿದ, ಪತ್ರಗಳನ್ನು ತಿರುವಿ ಹಾಕಿದ. "ನೀವು ಟ್ರ್ಯಾಕ್ಟರ್ ಮಾರಾಟಗಾರರು. ಆದರೆ ನಮ್ಮ ಹೊಲಗಳಿಗೆ ಅವು ಅನಾವಶ್ಯಕ. ಅತಿ ದುಬಾರಿಕೂಡ. ನಾವು ಮಾನವ–ಟ್ರ್ಯಾಕ್ಟರುಗಳು ಸಾಕಷ್ಟು ಇದ್ದೇವೆ!" ಸರದಾರಜೀ ನುಡಿದ.

ಆದರೆ ಆ ತರುಣರು ಎಂಬಿಎ ಮುಂತಾದ ಆಧುನಿಕ ಸರ್ವಜ್ಞ– ಸರ್ವಶಕ್ತ –ಪದವೀಧರರು, ಸಾಕ್ಷಾತ್ ಯಮನನ್ನೂ ಒಲಿಸಬಲ್ಲ ನಚಿಕೇತರು. ಅವರೆಂದರು "ಎದುರಿಗೆ ದಿಗಂತದವರೆಗೂ ಮೈಚೆಲ್ಲಿಕೊಂಡಿರುವ ಹೊಲಗಳೆಲ್ಲವೂ ನಿಮ್ಮವೇ ಅಲ್ಲವೇ?"

"ಇನ್ನೂ ಮುಂದಕ್ಕೆ ಕೂಡ ಚಾಚಿವೆ. ಇವು ಒಟ್ಟು ನನಗೂ ನನ್ನ ಕುಟುಂಬಸ್ಥರಿಗೂ ಸೇರಿರುವ ಹಿಸೆಗಳು, ಯಾವನೇ ಒಬ್ಬನವಲ್ಲ."

ಅಮೆರಿಕದ ಬೃಹತ್ ಕೃಷಿ ಉದ್ಯಮಗಳು, ಯಾಂತ್ರೀಕರಣದ ಸೌಲಭ್ಯಗಳು, ರಾಸಾಯನಿಕ ಗೊಬ್ಬರದ ಮಹಿಮೆ, ಮಾರುಕಟ್ಟೆಯ ಭೂರಿವಹಿವಾಟುಗಳು ಮುಂತಾದವನ್ನು ಆ ತರುಣರು ಎಳೆಎಳೆಯಾಗಿ ವಿವರಿಸಿ "ಈಗ ತಮ್ಮ ಮುಂದೆ ನಾವೊಂದು ಸಲಹೆ ಮಂಡಿಸಬಹುದೇ?"

"ಧಾರಾಳವಾಗಿ!"

"ನಿಮ್ಮ ಎಲ್ಲ ಹಿಸೆಗಳನ್ನೂ ಸಂಯುಕ್ತ ಸಂಘವೊಂದರ ಹೆಸರಿನಲ್ಲಿ ನೋಂದಾಯಿಸಿ ಒಂದೇ ಆಡಳಿತಕ್ಕೆ ಒಳಪಡಿಸಬೇಕು. ಬಳಿಕ ಈ ಸಮಗ್ರ ಬಯಲಿನಲ್ಲಿ ನೀವು ಆಧುನಿಕ ಯಾಂತ್ರೀಕೃತ ಕೃಷಿಯನ್ನು ರೂಢಿಸಬೇಕು."
"ಆಗ ಏನಾಗುತ್ತದೆ?"
"ನಿಮ್ಮ ಉತ್ಪಾದನೆ ಅತಿಶಯವಾಗಿ ವರ್ಧಿಸುತ್ತದೆ, ಜೊತೆಯಲ್ಲೇ ಮನುಷ್ಯ ಮತ್ತು ಪ್ರಾಣಿ ಒಟ್ಟಾಗಿ ಪಡುವ ಶ್ರಮ ತೀರ ಕನಿಷ್ಠ ಮಿತಿಗೆ ಇಳಿಯುತ್ತದೆ. ಯಂತ್ರಗಳು ಈ ಪವಾಡ ಗೈಯುತ್ತವೆ."
"ಈಗ ನಾವೇನು ಮಾಡಬೇಕು?"
ಯುವಕರು ಉತ್ತೇಜಿತರಾದರು "ಸಂಘವನ್ನು ಕಟ್ಟಿ ಜೊತೆಯಲ್ಲೇ ಟ್ರ್ಯಾಕ್ಟರ್ ಮುಂತಾದ ಯಂತ್ರ ಸಲಕರಣೆಗಳನ್ನು ಕೊಳ್ಳಲು ನಮ್ಮ ಜೊತೆ ವ್ಯವಹರಿಸಬೇಕು."
"ಆದರೆ ಅಷ್ಟು ದೊಡ್ಡ ಮೊತ್ತದ ಹಣವನ್ನೆಲ್ಲಿಂದ ಒದಗಿಸಲಿ!"
"ಬ್ಯಾಂಕ್ ಸಾಲಕ್ಕೆ ನಾವೇ ಏರ್ಪಾಡು ಮಾಡುತ್ತೇವೆ."
"ಸರಿ, ಮುಂದೇನು?"
"ಕೇವಲ ಕೆಲವೇ ವರ್ಷಗಳಲ್ಲಿ ನಿಮ್ಮ ಸಾಲವೆಲ್ಲ ತೀರಿ ನೀವು ಘನ ಶ್ರೀಮಂತರಾಗುತ್ತೀರಿ. ನಿಮಗೆ ಅಪಾರ ವಿರಾಮ ದೊರೆಯುತ್ತದೆ. ಈ ಹರಕಲು ಮನೆಯ ಬದಲು ಅರಮನೆಯಲ್ಲಿ ಸುಖವಾಗಿರಬಹುದು – ಕಾರು, ಟೀವಿ, ವಿಮಾನಯಾನ, ಪ್ರಪಂಚಪರ್ಯಟನ. . . ."
ಮುದುಕ ನಡುವೆ ಬಾಯಿಹಾಕಿ "ಆಗ ಏನಾಗುತ್ತದೆ?"
"ನೀವು ಸಮೃದ್ಧ ಆನಂದಲೀನರಾಗಿರಬಹುದು."
"ಈಗ ಮತ್ತೆ ಹೇಗಿದ್ದೇನೆ? ದುಡ್ಡುಕೊಟ್ಟು ಕೊಳ್ಳಬೇಕಾದ ಆ ದುಬಾರಿ ಆನಂದ ನನಗೆ ಬೇಕಾಗಿಲ್ಲ. ದುಡಿಮೆಯಿಂದ ದೊರೆಯುವ ಈ ಸುಲಭಾನಂದವೇ ಸಾಕು. ಇದಕ್ಕೆ ಕಾಸು ಕೊಡಬೇಕಾಗಿಲ್ಲ. ಇದನ್ನು ಕಳ್ಳರು ಕದ್ದಾರೆಂಬ ಹೆದರಿಕೆ ಇಲ್ಲ. ಆದ್ದರಿಂದ ಮಕ್ಕಳೇ ನೀವು ಈಗ ಬಂದದಾರಿಗೆ ಸುಂಕವಿಲ್ಲವೆಂದು ಹಿಂದೆ ಹೋಗಬಹುದು."

ನೈಸರ್ಗಿಕ ಸಂಪನ್ಮೂಲಗಳು

ನಿಸರ್ಗದ ಸಂಪನ್ಮೂಲಗಳಲ್ಲಿ ವ್ಯಾಪಕವಾಗಿ ಎರಡು ವರ್ಗಗಳನ್ನು ಗುರುತಿಸಬಹುದು. ಪುನರಾವರ್ತನಶೀಲ ಸಂಪನ್ಮೂಲಗಳು, ಅಪುನರಾವರ್ತನಶೀಲ ಸಂಪನ್ಮೂಲಗಳು. ಪ್ರಾಣಿ, ಗಿಡ, ಮರ, ನೀರು, ವಾಯು ಮುಂತಾದವು ಮೊದಲನೆಯ ವರ್ಗಕ್ಕೆ ಸೇರುತ್ತವೆ. ಏಕೆಂದರೆ ಇವನ್ನು ರೂಪಿಸಲು ವಿನಿಯೋಗವಾಗುವ ವಿವಿಧ ಧಾತುಗಳು, ಆ ವಸ್ತುಗಳು ಉಪಯೋಗದಿಂದ ಇಲ್ಲವೇ ಸಾವಿನಿಂದ ಕೊನೆಗೊಂಡ ಬಳಿಕ, ಮತ್ತೆ ನಿಸರ್ಗಕ್ಕೆ ಅವೇ ಧಾತುಗಳಾಗಿ ಸೇರಿಹೋಗುತ್ತವೆ. ಉದಾಹರಣೆಗೆ ಯಾವುದೇ ಪ್ರಾಣಿಯನ್ನು ಪರಿಶೀಲಿಸಬಹುದು. ನೀರು, ಸಾರಜನಕ, ಮೇದಸ್ಸು, ಶರ್ಕರ ಮತ್ತು ಹಲವಾರು ಖನಿಜಲವಣಗಳ ಸಂಕೀರ್ಣ ಮೇಳನವದು – ಅರ್ಥಾತ್ ಹೈಡ್ರೋಜನ್, ಆಕ್ಸಿಜನ್, ನೈಟ್ರೋಜನ್ ಮತ್ತು ವಿವಿಧ ಖನಿಜಲವಣಗಳು ನಿರ್ದಿಷ್ಟ ಅಲೇಖ್ಯಾನುಸಾರ ಸಂಯೋಗಗೊಂಡು ಆ ಪ್ರಾಣಿ ಮೈದಳೆದಿರುತ್ತದೆ. ಅದರ ಮರಣಾನಂತರ ನೈಸರ್ಗಿಕ ಕಾರಕಗಳ ಸತತ ಕ್ರಿಯೆಯ ಪರಿಣಾಮವಾಗಿ ದೇಹ ವಿಘಟಿಸಲ್ಪಟ್ಟು ವಿವಿಧ ಧಾತುಗಳು ಬೇರ್ಪಟ್ಟು ನಿಸರ್ಗದಲ್ಲಿ ಲೀನವಾಗುತ್ತವೆ; ಹಾಗೂ ನಿಸರ್ಗದ ಮಹಾಪ್ರಯೋಗಮಂದಿರದಲ್ಲಿ ಉಪಯೋಗಕ್ಕೆ ಪುನಃ ಲಭಿಸುತ್ತವೆ. ಫಾಸಿಲ್ ಇಂಧನ (ಕಲ್ಲಿದ್ದಲು, ಪೆಟ್ರೋಲ್ ಇತ್ಯಾದಿ) ಹೀಗಲ್ಲ. ಅಂತೆಯೇ ಲೋಹ ಹಲವಾರು ಖನಿಜಗಳು, ಪ್ಲ್ಯಾಸ್ಟಿಕ್, ಕೃತಕನಾರು, ಸಂಶ್ಲೇಷಿತ ರಾಸಾಯನಿಕಗಳು ಮುಂತಾದವು ಕೂಡ. ಉಪಯೋಗಾನಂತರ ನಿಸರ್ಗಕ್ಕೆ ಜಮಾವಣೆ ಆಗುವ ಇವುಗಳ ಶೇಷ ಪದಾರ್ಥಗಳು ನಿಸರ್ಗದಲ್ಲಿ ಸುಲಭವಾಗಿ ಆಗಲಿ ಕ್ಷಿಪ್ರವಾಗಿ ಆಗಲಿ ಲೀನವಾಗುವುದಿಲ್ಲ.



ಸಾವಿರಾರು ವರ್ಷಗಳ ಕಾಲ ಇವು ಪ್ರತ್ಯೇಕವಾಗಿಯೇ ಉಳಿದಿರುತ್ತವೆ. ಏಕೆಂದರೆ ಇವನ್ನು ಶೀಘ್ರವಾಗಿ ವಿಘಟಿಸಬಲ್ಲ ಸಾಮರ್ಥ್ಯಯುತ ನೈಸರ್ಗಿಕ ಕಾರಕಗಳಿಲ್ಲ. ಇತ್ತ ವಿಕಿರಣಪಟು ಧಾತುಗಳ ಬಳಕೆಯಿಂದ ಪರಮಾಣು ಶಕ್ತಿಯನ್ನು ಹಿಂಡುವ ತಂತ್ರವಿದ್ಯೆಯ ಉಪೋತ್ಪನ್ನ ಪದಾರ್ಥಗಳು ಶತಮಾನಪರ್ಯಂತ ವಿಕಿರಣಪಟುಗಳಾಗಿಯೇ ಉಳಿದಿದ್ದು ಜೀವಿಗಳಿಗೆ ಮಾರಕವಾಗುತ್ತವೆ. ಒಟ್ಟಾರೆ, ನಿಸರ್ಗದಿಂದ ಒಮ್ಮೆ ಬಸಿಯಲಾದ ಫಾಸಿಲ್ ಇಂಧನ ಮೊದಲಾದ ಸಂಪನ್ಮೂಲಗಳು ಸನಿಹದ ಭವಿಷ್ಯದಲ್ಲೇನೂ ಅದರ ಮಹಾ ಪ್ರಯೋಗಮಂದಿರಕ್ಕೆ ಮರುಬಳಕೆಗೆ ಲಭಿಸುವುದಿಲ್ಲ ಎಂಬುದಂತೂ ಖರೆ. ಹೀಗಾಗಿ ಅಷ್ಟರಮಟ್ಟಿಗೆ ಪ್ರಪಂಚ ಕಚ್ಚಾ ಸಾಮಗ್ರಿಗಳ ಕೊರತೆಯಿಂದ ನರಳಬೇಕಾಗುತ್ತದೆ.

ಜನಸಂಖ್ಯೆ – ತಂತ್ರವಿದ್ಯೆ – ಶಕ್ತಿ ತ್ರಿಭುಜದ ಸಲೆ ನಿಸರ್ಗ ಭರಿಸಬಹುದಾದ ಸಂಪನ್ಮೂಲಗಳ ಪರಿಮಿತಿಯೊಳಗೆ ಇರುವಾಗ ಈ ತ್ರಿಭುಜದ ಇರವಿನ ಅರಿವು ಮಾನವನಿಗೆ ಆಗುವುದಿಲ್ಲ. ಇಂಥ ನಿರ್ಣಾಯಕ ಪರಿಮಿತಿಯನ್ನು – ದೇಹಲಿ (= ಹೊಸ್ತಿಲು) ಪರಿಮಿತಿಯನ್ನು – ಪ್ರಪಂಚ 1950ರ ಅಂದಾಜಿಗೆ ಅಡ್ಡ ಹಾಯ್ದದಂತೆ ತೋರುತ್ತದೆ. ಆಗ ಪರಿಸರಮಾಲಿನ್ಯ ಪಿಡುಗಾಗಿ ತನ್ನ ಅಸ್ತಿತ್ವವನ್ನು ಪ್ರದರ್ಶಿಸತೊಡಗಿತು. ಜೀವನ ಗುಣಮಟ್ಟದ ಮೇಲೆ, ಉಳ್ಳವರನ್ನೂ ಉಳ್ಳದವರನ್ನೂ ಸಮಾನವಾಗಿಯೇ ಒಳಗೊಂಡಂತೆ, ದುಷ್ಪರಿಣಾಮ ಬೀರತೊಡಗಿತು.

ಜನಸಂಖ್ಯೆಯ ಬೆಳೆವಣಿಗೆ

ಕ್ರಿಸ್ತಪೂರ್ವ 8000ದ ಅಂದಾಜಿಗೆ ನವಶಿಲಾಯುಗ ಪ್ರಾರಂಭವಾಯಿತು. ಆ ಮೊದಲು ಕಾಡು ಪ್ರಾಣಿಗಳಿಗಿಂತ ತೀರ ಬೇರೆಯವನೇನೂ ಆಗಿರದಿದ್ದ ಆದಿಮಾನವ (ನೈಸರ್ಗಿಕವಾಗಿ ದೊರೆತ ಪ್ರಾಣಿ ಹಾಗೂ ಸಸ್ಯಗಳಿಂದ ಹೊಟ್ಟೆ ಹೊರೆಯುವುದು ಮತ್ತು ನಿಸರ್ಗದ ಪ್ರತಿಕೂಲ ಬಲಗಳ ಎದುರು ಬದುಕಿ ಉಳಿಯುವುದು ಇವೆರಡೇ ಆದಿಮಾನವನ ಬದುಕಿನ ಘನೋದ್ದೇಶಗಳಾಗಿದ್ದುವು) ಈ ವೇಳೆಗೆ ಬೇಸಾಯಕ್ಕೆ ಕಾಲಿರಿಸಿದ್ದ, ಸಾಕುಪ್ರಾಣಿಗಳ ಸೇವೆ ಪಡೆಯತೊಡಗಿದ್ದ. ತತ್ಪರಿಣಾಮವಾಗಿ ಅಲೆಮಾರಿ ಮಾನವ ಒಂದೆಡೆ ನೆಲೆಯೂರಿದವನಾದ. ಇದು ಆತನಿಗೆ ಒಂದು ತೆರನಾದ ನೆಮ್ಮದಿಯ ಬಾಳನ್ನು ಒದಗಿಸಿತು. ಈ ಕಾರಣದಿಂದಾಗಿ ಜನಸಂಖ್ಯೆಯ ಬೆಳವಣಿಗೆಗೆ ಕೊಂಚ ಕುಮ್ಮಕ್ಕು ದೊರೆಯಿತು. ಆಗಿನ ಪ್ರಪಂಚದ ಜನಸಂಖ್ಯೆ ಸುಮಾರು ಎಂಬತ್ತು ಲಕ್ಷ.

ಆದಿಮಂತ್ರವಿದ್ಯೆಯ ಪ್ರವೇಶ

ಕ್ರಿಸ್ತಪೂರ್ವ 3000ದ ಅಂದಾಜಿಗೆ ಮಾನವ ಕಂಚುಯುಗಕ್ಕೆ ಕಾಲಿರಿಸಿದ. ಅಂದು ತಿಳಿದಿದ್ದ ಆದಿಮಂತ್ರ ವಿದ್ಯೆಯನ್ನು ನಿಸರ್ಗಕ್ಕೆ ಅನ್ವಯಿಸಿ ಚಿನ್ನ, ಬೆಳ್ಳಿ, ತಾಮ್ರ, ತವರ, ಸೀಸ ಎಂಬ ಐದು ಬೇರೆ ಬೇರೆ ಲೋಹಗಳನ್ನು ಸಂಸ್ಕರಿಸಬಲ್ಲವನಾಗಿದ್ದ. ಆತನ ಆದಿಮ ಕುಲುಮೆಗೆ ಯಥೇಚ್ಛವೆನಿಸುವಷ್ಟು ಕಟ್ಟಿಗೆ ಸ್ಥಳೀಯವಾಗಿಯೇ ದೊರೆಯುತ್ತಿತ್ತು. ತಾತ್ತ್ವಿಕವಾಗಿ ಈ ಸಿದ್ಧಿಯ ಅರ್ಥವಿಷ್ಟು: ಶಕ್ತಿಯ ಒಂದು ರೂಪವಾದ ಉಷ್ಣವನ್ನು ಅದುರಿನ ಮೇಲೆ ಹೇರಿ ಲೋಹ ಸಂಸ್ಕರಣೆ ಮಾಡಬಹುದಾಗಿತ್ತು. ಹೀಗೆ ಪಡೆದ ಲೋಹ ಮಾನವನಿಗೆ ಅಧಿಕ ತ್ರಾಣ ಕೊಡಬಲ್ಲದಾಗಿತ್ತು. ಇದರ ಪರಿಣಾಮವಾಗಿ ಆತನ ಬದುಕು ಅಷ್ಟರಮಟ್ಟಿಗೆ ಸುಗಮವಾಗುತ್ತಿತ್ತು. ಲೋಹದಿಂದ ಆಯುಧಗಳನ್ನೂ ಹತ್ಯಾರುಗಳನ್ನೂ ಮಾನವ ತಯಾರಿಸಬಲ್ಲವನಾಗಿದ್ದ.

ಕ್ರಿಸ್ತಪೂರ್ವ 8000ದಲ್ಲಿದ್ದ ಎಂಬತ್ತು ಲಕ್ಷ ಜನಸಂಖ್ಯೆ ಕ್ರಿಸ್ತಶಕಾರಂಭವಾಗುವಾಗ ಸುಮಾರು ಮೂವತ್ತು ಕೋಟಿಗೆ ಏರಿತ್ತು. ಆಧಾರವರ್ಷದ ಜನಸಂಖ್ಯೆ x ಇದ್ದು ಸರಾಸರಿ ವಾರ್ಷಿಕ ಜನಸಂಖ್ಯಾವೃದ್ಧಿದರ ಶೇಕಡ r ಇದ್ದರೆ n ವರ್ಷಾನಂತರ ಜನಸಂಖ್ಯೆ yಯನ್ನು ಈ ಮುಂದಿನ ಸಮೀಕರಣ ಕೊಡುತ್ತದೆ:

$y = x[1+ r/100]^n$ ಇದರಲ್ಲಿ x = 80 ಲಕ್ಷ, y = 30 ಕೋಟಿ, n = 8000 ಆದೇಶಿಸಿ r ನ ಬೆಲೆಯನ್ನು ಗಣಿಸಬಹುದು. r = 0.036 ದೊರೆಯುತ್ತದೆ.

ಹೀಗೆ ಇತಿಹಾಸಪೂರ್ವ ವರ್ಷಗಳಲ್ಲಿ ಸರಾಸರಿ ವಾರ್ಷಿಕ ಜನಸಂಖ್ಯಾ ವೃದ್ಧಿದರ (r) ಶೇಕಡ 0.036ರಷ್ಟು ಕಡಿಮೆ ಇತ್ತು. ಅಂದರೆ ಯಾವುದೇ ವರ್ಷ 1 ಲಕ್ಷವಿದ್ದ ಜನಸಂಖ್ಯೆಗೆ ಮರುವರ್ಷದ ವೇಳೆಗಾಗುವಾಗ 36 ಜನರು ಸೇರ್ಪಡೆ

ಆಗಿರುತ್ತಿದ್ದರು. ಇಲ್ಲಿ ಒಂದು ಅಂಶವನ್ನು ನೆನಪಿನಲ್ಲಿಡಬೇಕು. ಆ ದಿನಗಳಂದು ಜನನದರ ಸಾಕಷ್ಟು ಉನ್ನತವಾಗಿಯೇ ಇತ್ತು. ಆದರೆ ಹೀಗೆ ಹುಟ್ಟಿದ ಮಕ್ಕಳೆಲ್ಲರೂ ಬಹುಕಾಲ ಬದುಕಿ ಉಳಿಯುತ್ತಿರಲಿಲ್ಲ. ಅಲ್ಲದೇ ದೊಡ್ಡವರಾದರೂ ನೈಸರ್ಗಿಕ ಅಪಘಾತ, ವ್ಯಾಧಿ, ಕಾಳಗ ಮೊದಲಾದವುಗಳಿಗೆ ತುತ್ತಾಗಿ ಪೂರ್ಣಾಯುಷ್ಯ ತುಂಬುವ ಮೊದಲೇ ಮಡಿಯುತ್ತಿದ್ದರು. ಹೀಗೆ ಉನ್ನತ ಜನನದರವನ್ನು ಉನ್ನತ ಮರಣದರ ಹೆಚ್ಚುಕಡಿಮೆ ಸಮತೋಲಿಸಿ ಒಟ್ಟಾರೆ ಜನಸಂಖ್ಯಾವೃದ್ಧಿದರ ತೀರ ಅಲ್ಪ ಪ್ರಮಾಣದಲ್ಲಿರುತ್ತಿತ್ತು.

ಕ್ರಿಸ್ತಶಕಾರಂಭವಾಗುವ ವೇಳೆಗೆ ಮಾನವ ಕಬ್ಬಿಣಯುಗದ ಕೊಡಿ ತಲಪಿದ್ದ. ಬಂಗಾರವನ್ನು ಕೃತಕವಾಗಿ ನಿರ್ಮಿಸಲು ರಸವಾದಿಗಳು ಬಗೆಬಗೆಯ ಧಾತು ಕಷಾಯಗಳನ್ನೂ ಮಂತ್ರ ಮೋಡಿಗಳನ್ನೂ ಪ್ರಯೋಗಿಸುತ್ತಿದ್ದರು. ಅವರ ಉದ್ದೇಶವೇನೂ ಕೈಗೂಡಲಿಲ್ಲ. ಆದರೆ ಆ ಪ್ರಯೋಗಗಳ ಉಪೋತ್ಪನ್ನಗಳಾಗಿ ರಸಾಯನ ವಿಜ್ಞಾನವೂ ಲೋಹತಂತ್ರವಿದ್ಯೆಯೂ ಚೆನ್ನಾಗಿ ಬೆಳೆದು ಅಭಿವೃದ್ಧಿಸಿದವು. ಸರಿ, ಯಥಾಪ್ರಕಾರ ನಿಸರ್ಗದ ಮೇಲೆ ಶಕ್ತಿಯ ಅಧಿಕ ಪ್ರಯೋಗದಿಂದ ಅಧಿಕ ತ್ರಾಣ ಗಳಿಸುವ ಮತ್ತು ಹೆಚ್ಚಿನ ಹತೋಟಿ ಸಾಧಿಸುವ ಆಟ (ಅಥವಾ ಲೂಟಿ?) ಮುನ್ನಡೆಯಿತು. ಸಹಜವಾಗಿ ಜನಸಂಖ್ಯೆ ವೃದ್ಧಿ ಆಗುತ್ತ, ಈ ಹಿಂದೆ ಹೇಳಿದಂತೆ, ಕ್ರಿಸ್ತಶಕ 1ರಲ್ಲಿ ಮೂವತ್ತು ಕೋಟಿ ತಲಪಿತು.

ಮುಂದಿನ 1750 ವರ್ಷಗಳಲ್ಲಿ ಜನಸಂಖ್ಯೆ ಅತಿ ಮಂದ ದರದಿಂದ ವಾರ್ಷಿಕವಾಗಿ ಶೇಕಡ 0.056 ದರದಲ್ಲಿ ಬೆಳೆದು ಕ್ರಿಸ್ತಶಕ 1750ರ ವೇಳೆಗೆ ಎಂಬತ್ತು ಕೋಟಿ ಆಯಿತು. ಇಷ್ಟಾಗುವಾಗ ಮಾನವನಿಗೆ ಹೊಸದೊಂದು ಶಕ್ತಿಮೂಲ ಲಭಿಸಿತು. ಉನ್ನತ ಸಂಮರ್ದದಲ್ಲಿ ಸಂಗ್ರಹಿಸಿದ ಉಗಿಯನ್ನು ಬಗೆಬಗೆಯ ಕಾರ್ಯನಿರ್ವಹಿಸಲು ನಿಯೋಜಿಸಬಹುದು ಎಂಬ ಉಗಿ ಯಂತ್ರದ ತತ್ತ್ವ ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಕರಗತವಾಯಿತು. ಸಹಜವಾಗಿ ಇದರಿಂದ ವಿಜ್ಞಾನ ಮತ್ತು ತಂತ್ರವಿದ್ಯೆಗೆ ಹೆಚ್ಚಿನ ನೂಕುಬಲ ಒದಗಿತು. ಉತ್ಪಾದನೆ, ವ್ಯಾಪಾರ, ಸಂಚಾರ, ಜನಾರೋಗ್ಯ, ಸಾಮಾಜಿಕ ವ್ಯವಹಾರ, ಸರ್ಕಾರಗಳ ಕಾರ್ಯಕಲಾಪ, ಯುದ್ಧ ಮುಂತಾದ ವಿವಿಧ ರಂಗಗಳಲ್ಲಿ ತಂತ್ರವಿದ್ಯೆ ತನ್ನ ಖಚಿತ ಮುದ್ರೆ ಒತ್ತಿ ಮಾನವಜೀವನದ ಸಮಸ್ತಸ್ತರಗಳನ್ನೂ ವ್ಯಾಪಿಸಿತು. ಇಷ್ಟಾಗುವಾಗ ಇಸವಿಪಟ್ಟಿ 1800ನ್ನು ತೋರಿಸುತ್ತಿತ್ತು. ಜನಸಂಖ್ಯೆ ನೂರು ಕೋಟಿಯನ್ನು ದಾಟಿತ್ತು. 1750ರಿಂದ 1800 ತನಕದ ವಾರ್ಷಿಕ ಜನಸಂಖ್ಯಾವೃದ್ಧಿದರ ಶೇಕದ 0.44.

ಪೆಟ್ರೋಲಿಯಮ್ ಚಿಲುಮೆ

ತಂತ್ರವಿದ್ಯೆಯ ಸರ್ವತೋಮುಖ ಅಭಿವರ್ಧನೆಗೆ ಹೊಸ ಆಯಾಮ ಲಭಿಸಿದ್ದು ಪೆಟ್ರೋಲಿಯಮ್ ಉತ್ಪನ್ನಗಳ ವಾಣಿಜ್ಯ ಗಾತ್ರದ ಶೋಧನೆ, ಸಂಸ್ಕರಣೆ, ಸಾಗಣೆ ಹಾಗೂ ಸಂಗ್ರಹಣೆ ವ್ಯಾಪಕವಾಗಿಯೂ ವ್ಯವಸ್ಥಿತವಾಗಿಯೂ ಆಗತೊಡಗಿದ ಮೇಲೆ. ಕ್ರಿ.ಪೂ 3000ದಷ್ಟು ಹಿಂದೆಯೇ ಮಾನವ ಉಪ್ಪುನೀರಿನ ಬಾವಿಗಳನ್ನು ಅಗೆದು ಇಲ್ಲವೆ ಜವುಗು ನೆಲಗಳಲ್ಲಿ ಮೇಲಕ್ಕೆ ಒಸರಿ ಬರುತ್ತಿದ್ದ ಪಸೆಯನ್ನು ಬಗೆದು ಪೆಟ್ರೋಲಿಯಮ್ ಎಣ್ಣೆ ಮತ್ತು ನೈಸರ್ಗಿಕಾನಿಲಗಳನ್ನು ಸಂಗ್ರಹಿಸುತ್ತಿದ್ದನೆಂದು ತಿಳಿದಿದೆ. ಹೀಗಿದ್ದರೂ 19ನೆಯ ಶತಮಾನಾರಂಭದ ತನಕವೂ ಅಮೆರಿಕದಂಥ ತಂತ್ರವಿದ್ಯಾತ್ಮಕವಾಗಿ ಪ್ರಗತಿ ಕಂಡಿದ್ದ ದೇಶದಲ್ಲಿ ಕೂಡ, ಮನೆ ಬೆಳಗಲು ಹಣತೆಯುಗದ ವಿಧಾನಗಳೇ ಬಳಕೆಯಲ್ಲಿದ್ದುವು. ಆ ವೇಳೆಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನೂ ಜೀವನ ಸೌಕರ್ಯಗಳನ್ನೂ ಅರಸುತ್ತ ಜನರು ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳಿಗೂ ಕೈಗಾರಿವಲಯಗಳಿಗೂ ವಲಸೆ ಹೋದರು. ಹೀಗೆ ನಗರಗಳು ಮೈದಳೆದು ಬೆಳೆಯಲಾರಂಭಿಸಿದುವು. ಸಹಜವಾಗಿ ಮನೆ, ಕಾರ್ಖಾನೆ, ಅಂಗಡಿ, ಬೀದಿ ಮುಂತಾದವನ್ನು ಬೆಳಗಲು, ಯಂತ್ರ ಸಂಕುಲಗಳಿಗೆ ಊಡಲು ಮತ್ತು ಸಂಚಾರಸಾಧನಗಳನ್ನು ಸುಲಭವಾಗಿ ಚಾಲೂಗೊಳಿಸಲು ಹೊಸ ಇಂಧನಗಳೂ ಸ್ನೇಹನಗಳೂ (ಲ್ಯೂಬ್ರಿಕೆಂಟ್ಸ್) ಆವಶ್ಯವಾದುವು. 19ನೆಯ ಶತಮಾನದ ಮಧ್ಯಭಾಗದಲ್ಲಿ ಕೆರೊಸೀನಿನ (ಕಲ್ಲೆಣ್ಣೆ, ಸೀಮೆಯೆಣ್ಣೆ) ಬಳಕೆ ಯುರೋಪ್ ಮತ್ತು ಅಮೆರಿಕ ದೇಶಗಳಲ್ಲಿ ಸರ್ವೆ ಸಾಮಾನ್ಯವಾಗಿತ್ತು. ಕಲ್ಲಿದ್ದಲನ್ನು ಆಸವಿಸಿ ಇದನ್ನು ಪಡೆಯುತ್ತಿದ್ದರು. 18ನೆಯ ಶತಮಾನದಲ್ಲಿ ವಿಶೇಷ ವೇಗೋತ್ಕರ್ಷ ಪಡೆದು ಪ್ರವರ್ಧಿಸುತ್ತಿದ್ದ ಕೈಗಾರಿಕಾಕ್ರಾಂತಿ ತನ್ನ ಬಹುಬಾಹುಗಳನ್ನು (ಕಬಂಧ ಬಾಹುಗಳನ್ನು?) ನವ ಇಂಧನಾಕರಗಳ ಶೋಧನೆಗೆ ನಿಯೋಜಿಸಿತು. ಅಗ್ಗವಾಗಿಯೂ ಯಥೇಚ್ಛವಾಗಿಯೂ ದೊರೆಯಬಲ್ಲ ಎಣ್ಣೆಯ ಹಾಗೂ ಸ್ನೇಹನದ ಆವಶ್ಯಕತೆ ಹಿಂದೆಂದಿಗಿಂತಲೂ ಆಗ ಅತಿ ತೀವ್ರವಾಗಿತ್ತು.

1859ರಲ್ಲಿ ಇ.ಎಲ್ ಡ್ರೇಕ್ ಎಂಬಾತ ಪೆನ್ಸಿಲ್ವೇನಿಯಾದಲ್ಲಿ ಮೊದಲ ಎಣ್ಣೆ ಬಾವಿ ಕೊರೆದಾಗ ಪೆಟ್ರೋಲಿಯಂ ಉದ್ಯಮ ಆಧುನಿಕ ಕೈಗಾರಿಕಾಯುಗವನ್ನು ಆವಾಹಿಸಿತು. ಫಾಸಿಲ್ ಇಂಧನದ ವ್ಯಾಪಕೋಪಯೋಗ ಪ್ರಪಂಚದ ಮುಖವನ್ನು, ನಾಗರಿಕತೆಯ ಆರಂಭದಿಂದ ಆ ತನಕ ಕಾಣದಿದ್ದ ರೀತಿಯಲ್ಲಿ, ಶಾಶ್ವತವಾಗಿ ಬದಲಾಯಿಸಿಬಿಟ್ಟಿತು.

ಕೈಗಾರಿಕಾ ಕ್ರಾಂತಿಯ ಫಲವಾಗಿ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಸ್ವಯಂಚಲಿ – ಫಾಸಿಲ್ ಇಂಧನ ಸಂಬಂಧ ಅವಿಭಾಜ್ಯವಾಯಿತು. ಪೆಟ್ರೋ ರಾಸಾಯನಿಕ ಕೈಗಾರಿಕೆಯಲ್ಲಿ ಅತಿ ಪ್ರಮುಖ ಕಚ್ಚಾ ಸಾಮಗ್ರಿಯಾದ ಪೆಟ್ರೋಲಿಯಂ, ಸ್ವಯಂಚಲಿಗಳಿಗೆ ಶಕ್ತಿ ಪೂರೈಕೆ ಮಾಡುವ ಇಂಧನವಾಯಿತು. ಗರಿಷ್ಠ ಶಕ್ತಿಯನ್ನು ಉತ್ಪಾದಿಸಬಲ್ಲ ಅಕ್ಷಯ ಪಾತ್ರೆಯೇ ಇದಾಯಿತು. ಇದನ್ನು ಆಧರಿಸಿಯೇ ಮಾನವ ಸಮುದಾಯದ ವರ್ತಮಾನ ಹಾಗೂ ಭವಿಷ್ಯ ನಿಂತುವು.

1800ರಿಂದ ಈಚೆಗಿನ ಸುಮಾರು 190 ವರ್ಷಗಳಲ್ಲಿ ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಮಾನವ ಸಾಧಿಸಿರುವ ಪ್ರಗತಿ, ಗಳಿಸಿರುವ ಹಿರಿಮೆ ಮತ್ತು ಏರಿರುವ ಎತ್ತರ ಎಷ್ಟು ಎಂಬುದನ್ನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಆತನ ಜ್ಞಾನವಿಂದು ಪರಮಾಣುವಿನ ಅನಂತಾಲ್ಪಹೂರಣದಿಂದ ತೊಡಗಿ ಬ್ರಹ್ಮಾಂಡದ ವ್ಯೋಮ ಬೃಹದ್ವಿಸ್ತಾರದವರೆಗೂ ಹಬ್ಬಿದೆ. ಜನನ ಮರಣಗಳ ಮೇಲೆ ಹಿಂದೆ ಎಂದೂ ಇದ್ದಿಲ್ಲದಷ್ಟು ಹತೋಟಿಯನ್ನು ಇಂದು ಆತ ಗಳಿಸಿದ್ದಾನೆ, ನವಶಕ್ತಿ ಮೂಲಗಳನ್ನು ಕಂಡುಕೊಂಡಿದ್ದಾನೆ. ಸಮಗ್ರವಾಗಿ ಹೇಳುವುದಾದರೆ ಆಧುನಿಕ ಮಾನವ ಶಕ್ತಿಯನ್ನು, ಉದಾಹರಣೆಗೆ ವಿದ್ಯುಚ್ಛಕ್ತಿಯನ್ನು, ತನಗೆ ಬೇಕಾದಂತೆ ಕಾರ್ಯವೆಸಗಲು ವಿಧಿಸಬಲ್ಲವನಾಗಿದ್ದಾನೆ. ಶಕ್ತಿರಹಿತ ಜೀವನ ಇಂದು ಊಹಾತೀತವಾಗಿದೆ ಎಂದೇ ಆತ ಶಕ್ತಿಯ ಪ್ರಭುವೂ ಹೌದು, ದಾಸನೂ ಹೌದು.

ಶಕ್ತಿ ಬದುಕನ್ನು ಚುರುಕುಗೊಳಿಸುತ್ತದೆ. ನೂತನಾವಕಾಶಗಳನ್ನು ಅನ್ವೇಷಿಸುವುದರತ್ತ ಮಾನವನನ್ನು ಕ್ರಿಯಾಪ್ರೇರಿಸುತ್ತದೆ. ಇಂಥ ಅನ್ವೇಷಣೆಗೆ ಅಧಿಕ ಶಕ್ತಿ ಅವಶ್ಯ. ಶಕ್ತಿಯ ಬೆನ್ನಟ್ಟಿದ ಮಾನವ ತಂತ್ರ ವಿದ್ಯೆಯನ್ನು ಅಭಿವರ್ಧಿಸುತ್ತಾನೆ. ಒಟ್ಟಾಗಿ ಪ್ರಪಂಚದಲ್ಲಿ ದೂರಗಳು ಕುಗ್ಗುತ್ತವೆ. ಜನರಹಿತ ಪ್ರದೇಶಗಳು ಸಂಕೋಚಿಸುತ್ತವೆ, ಜನಸಂಚಾರ ಜಾಸ್ತಿ ಆಗುತ್ತದೆ. ಒಂದಿಗೇ ಜನಸಂಖ್ಯೆ ವರ್ಧಿಸುತ್ತದೆ. ಆದರೆ ಜನರ ಹಿತ?

ಜನಸಂಖ್ಯಾಸ್ಫೋಟ

ಜನಸಂಖ್ಯೆ ಕಳೆದ ಶತಮಾನಗಳಲ್ಲಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಮುಂದಿನ ಯಾದಿಯಿಂದ ತಿಳಿಯಬಹುದು:

ಇಸವಿ	ಪ್ರಪಂಚ ಜನಸಂಖ್ಯೆ (ಕೋಟಿಗಳಲ್ಲಿ)	ವಾರ್ಷಿಕ ವೃದ್ಧಿದರ(ಶೇಕಡ)
ಕ್ರಿಪೂ 8000	0.8	--
ಕ್ರಿ.ಶ 1	30	0.036
1750	80	0.056
1800	100	0.44
1850	130	0.52
1900	170	0.54
1950	250	0.79
1970	375	2.1
1980	450	2
1990	560	2.2
2000	640	1.4

20ನೆಯ ಶತಮಾನದಲ್ಲಿ ಜನನಸಂಖ್ಯಾವೃದ್ಧಿದರ (ಸರಾಸರಿಯಲ್ಲಿ) ವಾರ್ಷಿಕವಾಗಿ ಶೇಕಡ 1.4ರಲ್ಲಿ ನಿಲ್ಲುವುದೆಂದು ಹೇಳಬಹುದು. ಇದೇನೂ ಸಾಧಾರಣ ದರವಲ್ಲ – ಹಿಂದಿನ ಯಾವ ಶತಮಾನಗಳಲ್ಲೂ ಜನಸಂಖ್ಯಾ ವೃದ್ಧಿದರ ಈ ಎತ್ತರವನ್ನು ಐದಿರಲಿಲ್ಲ ಎಂಬುದನ್ನು ಮೇಲಿನ ಯಾದಿ ಸ್ಪಷ್ಟಪಡಿಸುತ್ತದೆ.

ಹಾಲಿ ಜನಸಂಖ್ಯೆ ಯಾವ ದರದಲ್ಲಿ ಬೆಳೆದದ್ದಾದರೆ ಅದು ಎಷ್ಟು ವರ್ಷಗಳಲ್ಲಿ ದ್ವಿಗುಣಿತವಾಗಬಲ್ಲುದು ಎಂಬುದನ್ನು ಗಣಿಸಿ ಜನಸಂಖ್ಯಾ ವೃದ್ಧಿದರವನ್ನು ವಿವರಿಸುವುದು ವಾಡಿಕೆ:

ವಾರ್ಷಿಕ ಜನಸಂಖ್ಯಾವೃದ್ಧಿದರ (ಶೇಕಡ)		ಹಾಲಿ ಜನಸಂಖೆ ದ್ವಿಗುಣಿತವಾಗಲು ಬೇಕಾಗುವ ವರ್ಷಗಳು
0.1	...	753
0.2	...	376
0.3	...	251
0.4	...	177
0.5	...	143
0.6	...	120
0.7	...	104
0.8	...	91
0.9	...	81
1	...	70
1.1	...	64
1.2	...	59
1.3	...	55
1.4	...	50
1.5	...	47
1.6	...	44
1.7	...	42
1.8	...	40
1.9	...	38
2	...	35

ಅಂಕಿ ಅಂಶಗಳು ಏನೇ ಹೇಳಲಿ ಭವಿಷ್ಯ ವಿಜ್ಞಾನಿಗಳು ಒಂದು ಸಂಗತಿಯನ್ನು ಮಾತ್ರ ಮೇಲಿಂದ ಮೇಲೆ ಒತ್ತಿ ಹೇಳುತ್ತಿದ್ದಾರೆ. 21ನೆಯ ಶತಮಾನವನ್ನು ಸ್ವಾಗತಿಸಲು ಸುಮಾರು 700 ಕೋಟಿ ಮನುಷ್ಯರು ಈ ಗ್ರಹದಲ್ಲಿ ಇರುವರೆಂದು ನಿರೀಕ್ಷಿಸಬಹುದು. ಅದೇನೂ ದೂರದ ಭವಿಷ್ಯವಲ್ಲ – ಈಗ ಅದು ಕದ ತಟ್ಟುತ್ತಿದೆ. ನೀವು ಪಡಿ ತೆರೆಯದಿರಿ ಅದು ಇಂದು ನಾಳೆ ಎನ್ನುವುದರೊಳಗೆ ನಿಮ್ಮ ಈ ಕಿಷ್ಕಿಂಧಾ ಭೂಮಿಯನ್ನು ಪ್ರವೇಶಿಸಿಯೇ ಬಿಡುವುದು ದಿಟ. ಇಳಿಯೆಣಿಕೆ (count down) ಕೇಳುತ್ತಿದೆ ಗಟ್ಟಿಯಾಗಿ: 7,6,5,.. 0 (= ಕ್ರಿ.ಶ 2000)

ಆಹಾರ ಪೂರೈಕೆ

ಮಾನವ ಎಲ್ಲೇ ಇರಲಿ, ಯಾವ ಕಾಲದಲ್ಲೇ ಇರಲಿ, ಹೊರನೋಟಕ್ಕೆ ಹೇಗೆಯೇ ತೋರುವ ಆಹಾರ ಪದಾರ್ಥಗಳನ್ನು ಉಣ್ಣಲಿ, ಅಂತಿಮ ವಿಶ್ಲೇಷಣೆಯಲ್ಲಿ ಅವರ ಆಹಾರ ಆರು ಮುಖ್ಯ ಘಟಕಗಳನ್ನು ಒಳಗೊಂಡಿರಲೇಬೇಕು: ಶರ್ಕರ, ಸಸಾರಜನಕ, ಮೇದಸ್ಸು, ಜೀವಸತ್ತ್ವ, ಖನಿಜಲವಣ ಮತ್ತು ನೀರು. ವ್ಯಕ್ತಿ ಸೇವಿಸುವ ಆಹಾರದಲ್ಲಿ ಇವು ಯುಕ್ತ ಪ್ರಮಾಣದಲ್ಲಿ ಮೇಳೈಸಿಕೊಂಡಿದ್ದು ಆತನಿಗೆ ಸಕಾಲದಲ್ಲಿ ಸೇವನಾರ್ಹ ರೂಪದಲ್ಲಿ ಒದಗಬೇಕು. ಹೀಗಾಗದಿದ್ದರೆ ಮಾನವ ಹಸಿವಿನಿಂದ ಮತ್ತು/ ಅಥವಾ ನ್ಯೂನಪೋಷಣೆಯಿಂದ ನರಳುತ್ತಾನೆ. ಇದರಿಂದ ಆತನ ಆರೋಗ್ಯ ಹದಗೆಡುತ್ತದೆ. ಕಾರ್ಯ ಸಾಮರ್ಥ್ಯ ಕುಗ್ಗುತ್ತದೆ.

ಪ್ರಪಂಚದ ಆಹಾರಪೂರೈಕೆಯ ಬಗ್ಗೆ ಖಚಿತ ಅಂಕೆ ಅಂಶಗಳನ್ನು ಒದಗಿಸುವುದು ಅತಿ ಕಷ್ಟ. ಪ್ರಾಯಶಃ ಎಂದೂ ಕೈಗೂಡದು. ವೈಜ್ಞಾನಿಕ ತರ್ಕವನ್ನು ಆಧರಿಸಿ ಅಂದಾಜನ್ನು ಮಾತ್ರ ಮಾಡಬಹುದು ಅಷ್ಟೆ. ನಿಜಕ್ಕೂ ಪ್ರಪಂಚದ ಆಹಾರಪರಿಸ್ಥಿತಿ ಅಪಾಯದ ಹಂತದಲ್ಲಿದೆ. ಆಹಾರೋತ್ಪಾದನೆಗೆ ಸಂಬಂಧಿಸಿದ ಸಮಸ್ತ – ಸಮಸ್ಯೆಗಳನ್ನೂ ಅವು ಎಷ್ಟೇ ಜಟಿಲವಾಗಿರಲಿ – ಪರಿಹರಿಸಲು ಮಾನವ ತಂತ್ರವಿದ್ಯಾತ್ಮಕವಾಗಿ ಸಾಮರ್ಥ್ಯಗಳಿಸಿರುವ ಈ ದಿನಗಳಲ್ಲಿ ಇಂಥ ಉಲ್ಬಣತೆ ತಲೆಹಾಕಿರುವುದೊಂದು ಐತಿಹಾಸಿಕ ವಿಪರ್ಯಾಸ. ಪ್ರಪಂಚದ ಏರು ಜನಸಂಖ್ಯೆ ನಾಗಾಲೋಟದೊಡನೆ ಆಹಾರೋತ್ಪಾದನೆಯ ಮಾಮೂಲಿ ಇರ್ಕಾಲೋಟಕ್ಕೆ ಹೊಂದಿಕೊಳ್ಳಲಾಗುತ್ತಿಲ್ಲ. ಜನಸಂಖ್ಯೆ ಘಾತೀಯವಾಗಿ ಅಂದರೆ 1, 2, 4, 8, 16, 32, 64... ಮೊಲಜಿಗಿತಗಳಲ್ಲಿ ವೃದ್ಧಿಸುತ್ತದೆ; ಆಹಾರೋತ್ಪಾದನೆಯಾದರೋ ರೇಖೀಯವಾಗಿ, ಅಂದರೆ 1, 2, 3, 4... ಆಮೆ ನಡಿಗೆಯಲ್ಲಿ ಏರುತ್ತದೆ – ಹೀಗಾಗಿ ಎರಡರ ನಡುವೆ ಅಗಳು ಏರ್ಪಡುವುದು ಮಾತ್ರವೇ ಅಲ್ಲ ಅದು ಅಗಲ ಅಗಲವೂ ಆಗುತ್ತದೆ. 1900ರಲ್ಲಿ 170 ಕೋಟಿ ಇದ್ದ ಜನಸಂಖ್ಯೆ 1930ರಲ್ಲಿ 220 ಕೋಟಿಗೆ ಜಿಗಿದು 1960ರಲ್ಲಿ 310 ಕೋಟಿ ತಲಪಿತ್ತು. ಪ್ರಸಕ್ತ ಶತಮಾನ ಮುಗಿಯುವ ವೇಳೆಗೆ ಪ್ರಪಂಚದ ಜನಸಂಖ್ಯೆ 700 ಕೋಟಿ – 1960ರಲ್ಲಿ ಇದ್ದುದರ ಎರಡರಷ್ಟಕ್ಕಿಂತಲೂ ಹೆಚ್ಚು – ಆಗುವುದೆಂದು ಅಂದಾಜು. ಕೃಷಿರಂಗದಲ್ಲಿ ಭಾರತವನ್ನೂ ಒಳಗೊಂಡಂತೆ ಅನೇಕ ರಾಷ್ಟ್ರಗಳು ಸಾಧಿಸುರುವ ಹಸುರು ಕ್ರಾಂತಿ, ದವಸ ಧಾನ್ಯಗಳ ಉತ್ಪಾದನೆಯನ್ನು ಹಿಂದೆಂದೂ ಕಾಣದಿದ್ದ ಎತ್ತರಕ್ಕೆ ಒಯ್ದಿದೆ. ಅಂತೆಯೇ ಮಾಂಸೋದ್ಯಮ, ಕ್ಷೀರೋದ್ಯಮ, ಮತ್ಸ್ಯೋದ್ಯಮ, ತರಕಾರಿ ಹಣ್ಣು ಮುಂತಾದವುಗಳ ಕೃಷಿ ಕೂಡ ಉಚ್ಛ್ರಾಯ ಸ್ಥಿತಿಯಲ್ಲಿದೆ, ನಿಜ. ಆದರೆ ಇವೆಲ್ಲವೂ ಶಾಶ್ವತ ಪರಿಹಾರವನ್ನು ಒದಗಿಸಬಹುದೆಂದಾಗಲಿ ಈಗಿನ ಉಚ್ಛ್ರಾಯ ಸ್ಥಿತಿಯಲ್ಲಿಯೇ ಉಳಿದಾವೆಂದಾಗಲಿ ನಿರೀಕ್ಷಿಸುವುದು ಪೂರ್ತಿ ಸಾಧುವಾಗದೆಂದು ವಿಜ್ಞಾನಿಗಳ ಅಭಿಮತ.

ಆಹಾರೋತ್ಪಾದನೆ ಯಾವ ಉನ್ನತ ಮಟ್ಟದಲ್ಲಿಯೇ ಇದ್ದರೂ ಆಹಾರ ವಿತರಣೆ ಏಕ ರೀತಿ ಆಗದೆ ಪ್ರಪಂಚ, ಉಳ್ಳವರು ಉಳ್ಳದವರು, ಅಥವಾ ಹಸಿವಿಲ್ಲದವರು ಹಸಿವಿರುವವರು ಎಂಬ ಎರಡು ಬಣಗಳಾಗಿ ಒಡೆದುಹೋಗಿದೆ. ಪ್ರಪಂಚ ಜನಸಂಖ್ಯೆಯಲ್ಲಿ ಎಂಟನೆಯ ಒಂದರಷ್ಟು ಮಂದಿಗೆ ಸಮರ್ಪಕ ಆಹಾರ ಒದಗದೆ ಅವರು ಹಸಿವು ಹಾಗೂ ನ್ಯೂನಪೋಷಣೆಗಳಿಂದ ಬಾಧಿತರಾಗಿದ್ದಾರೆಂದು ಅಂದಾಜು ಮಾಡಲಾಗಿದೆ. ಅದೇ ವೇಳೆ ಅತ್ಯಲ್ಪಾಂಶ ಮಂದಿ ಅತಿಪೋಷಣೆಯಿಂದ ಅಗ್ನಿಮಾಂದ್ಯ, ಅಜೀರ್ಣ, ಮಧುಮೇಹ ಮೊದಲಾದ 'ಶ್ರೀಮಂತ' ವ್ಯಾಧಿಗಳಿಂದ ನರಳುತ್ತಿದ್ದಾರೆಂದೂ ತಿಳಿದಿದೆ. ಪ್ರಪಂಚದ ಪರಿಸ್ಥಿತಿ 1975ರಲ್ಲಿ ಎಷ್ಟು ತೀವ್ರವಾಗಿತ್ತೆಂಬುದನ್ನು ಈ ಮುಂದಿನ ಅಂಕೆ ಅಂಶಗಳಿಂದ ತಿಳಿಯಬಹುದು:

1 ಕೋಟಿ ಮಕ್ಕಳು ನ್ಯೂನಪೋಷಣೆಯಿಂದ ಪೀಡಿತರಾಗಿ ಅವರ ಬೆಳೆವಣಿಗೆ ಕುಂಠಿತವಾಗಿತ್ತು;
40 ಕೋಟಿ ಜನ ಉಪವಾಸದ (ಸ್ಟಾರ್ವೇಶನ್) ಅಂಚಿನಲ್ಲಿ ಬದುಕುತ್ತಿದ್ದರು;
100 ಕೋಟಿ ಜನ ಹಸಿವು ಹಾಗೂ ನ್ಯೂನಪೋಷಣೆಗಳಿಂದ ಬಾಧಿತರಾಗಿದ್ದರು;
12000 ಮಂದಿ ಪ್ರತಿದಿನ ಹಸಿವಿನಿಂದ ಮಡಿಯುತ್ತಿದ್ದರು.
1993ರ ಪರಿಸ್ಥಿತಿ ಖಂಡಿತ ಸುಧಾರಿಸಿಲ್ಲ ಮಾತ್ರವಲ್ಲ ಉಲ್ಬಣಿಸುತ್ತಿರುವುದರ ಸೂಚನೆ ಕಂಡುಬರುತ್ತಿದೆ ಎನ್ನುತ್ತಾರೆ ಪರಿಣತರು.

ದೇಹದ ಬೆಳವಣಿಗೆಗೆ ಹಾಗೂ ಅಭಿವರ್ಧನೆಗೆ ಆವಶ್ಯವಾದ ಶರ್ಕರಾದಿ ಘಟಕಗಳು ಯುಕ್ತ ಪ್ರಮಾಣಗಳಲ್ಲಿ ಪೂರೈಕೆ ಆಗದಿರುವುದೇ ನ್ಯೂನಪೋಷಣೆ. ವ್ಯಕ್ತಿ ಹೊಟ್ಟೆ ತುಂಬ ಆಹಾರ ತಿಂದಾಗಲೂ – ಅಂದರೆ ಆತ ಉಪವಾಸ ಪೀಡಿತನಾಗಿರದಾಗಲೂ – ನ್ಯೂನಪೋಷಣೆಯಿಂದ ನರಳುವುದು ಸಾಧ್ಯ.

ಯಂತ್ರ ಚಾಲೂ ಆಗಲು ಇಂಧನ ಹೇಗೊ ದೇಹ ಕೆಲಸ ಮಾಡಲು ಆಹಾರ ಹಾಗೆ. ಇಂಧನ ದಹಿಸಿದಾಗ ಶಕ್ತಿ ಉತ್ಪಾದನೆ ಆಗಿ ಅದರ ನೆರವಿನಿಂದ ಯಂತ್ರ ಕಾರ್ಯ ಪ್ರವೃತ್ತವಾಗುತ್ತದೆ. ಆಹಾರ ಜೀರ್ಣವಾಗಿ ರಕ್ತಗತವಾಗಿ ಕೋಶಗತವಾಗಿ ಬಳಸಲ್ಪಟ್ಟಾಗ (ಅಂತಿಮ ಘಟ್ಟದಲ್ಲಿ ಈ ಕ್ರಿಯೆಯೂ ದನವೇ – ಕಾರ್ಬನ್ ಮತ್ತು ಹೈಡ್ರೋಜನ್ ಆಕ್ಸಿಜನ್ನಿನೊಡನೆ ದೇಹದ ಹಿತೋಷ್ಣತೆಯಲ್ಲಿ ಸಂಯೋಗವಾಗುವ ಉತ್ಕರ್ಷಣಕ್ರಿಯೆ) ಶಕ್ತಿ ಬಿಡುಗಡೆ ಆಗಿ ದೇಹ ವಿವಿಧ ಚಟುವಟಿಕೆಗಳಲ್ಲಿ ನಿರತವಾಗುತ್ತದೆ. ಆದ್ದರಿಂದ ಜನಸಂಖ್ಯೆ ವೃದ್ಧಿಸಿದಂತೆ ಶಕ್ತಿ ಬೇಡಿಕೆಯೂ ವೃದ್ಧಿಸುತ್ತದೆ.

ಮಾನವನ ಸಮಸ್ತ ಆಹಾರವೂ ಸಸ್ಯಗಳಿಂದಲೇ ಒದಗಬೇಕಾಗುತ್ತದೆ. ಶುದ್ಧ ಮಾಂಸಾಹಾರಿ ಪ್ರಾಣಿಗಳಾದರೂ ಸಸ್ಯಾಹಾರಿ ಅಥವಾ ಮಿಶ್ರಾಹಾರಿ ಪ್ರಾಣಿಗಳನ್ನು ತಿಂದು ಬದುಕುವುದು ನಿಸರ್ಗ ನಿಯಮ. ಸಸ್ಯರಹಿತ ನಾಡು ಆಹಾರಶೂನ್ಯ ಬೆಂಗಾಡು. ಸಸ್ಯಗಳು ಬೆಳೆಯಲು ನೆಲ, ಜಲ, ವಾಯು ಮತ್ತು ಸೂರ್ಯಪ್ರಕಾಶ ಬೇಕು. ದ್ಯುತಿ ಸಂಶ್ಲೇಷಣೆ ಎಂಬ ಸಸ್ಯಗಳಿಗೆ ಮಾತ್ರ ವಿಶಿಷ್ಟವಾದ ಸಂಯಂತ್ರದ ಮೂಲಕ ಸಸ್ಯಗಳು ಸೌರಶಕ್ತಿಯನ್ನು ಉಪಯೋಗಿಸಿಕೊಂಡು ನೀರನ್ನು ಕಾರ್ಬನ್‌ಡೈಆಕ್ಸೈಡಿನೊಡನೆ ಸಂಯೋಗಿಸಿ ಪಿಷ್ಟವನ್ನೂ ಸಕ್ಕರೆಯನ್ನೂ (ಸಮಗ್ರವಾಗಿ ಶರ್ಕರಗಳನ್ನು) ಸಂಶ್ಲೇಷಿಸುತ್ತವೆ. ಆದ್ದರಿಂದ ಆಹಾರದ ಮೂಲಕ ದೇಹಕ್ಕೆ ದೊರೆಯುವ ಶಕ್ತಿಯಾದರೂ ಸೆರೆಹಿಡಿಯಲ್ಪಟ್ಟ ಸೌರಶಕ್ತಿಯೇ.

ಆಹಾರ ಒದಗಿಸುವ ಶಕ್ತಿಯನ್ನು ಕಿಲೊ ಕೆಲೊರಿಗಳಲ್ಲಿ ಅಳೆಯುವುದು ವಾಡಿಕೆ. ನೆಲದಲ್ಲಿ ಬೆಳೆಯುವ ಆಹಾರಪದಾರ್ಥಗಳೆಲ್ಲವೂ ಮಾನವ ಸೇವನೆಗೆ ಒದಗುವುದಿಲ್ಲ ಎಂಬುದು ಕಂಡಂತೆಯೇ ಇದೆ. ಒಂದು ಸ್ಥೂಲ ಅಂದಾಜಿನ ಪ್ರಕಾರ ನೆಲದಲ್ಲಿ ಬೆಳೆಯುವ ಆಹಾರದಿಂದ ಉತ್ಪಾದನೆಯಾಗುವ ಕಿಲೊಕೆಲೊರಿಗಳ ಪೈಕಿ ಹದಿನೈದನೆಯ ಒಂದು ಅಂಶವೂ ಕಡಲಲ್ಲಿ ಬೆಳೆಯುವ ಆಹಾರದಿಂದ ಉತ್ಪಾದನೆಯಾಗುವ ಕಿಲೊಕೆಲೊರಿಗಳ ಪೈಕಿ ಹದಿನೈದನೆಯ ಒಂದು ಅಂಶವೂ ಮಾನವಾಹಾರವಾಗಿ ವಿನಿಯೋಗವಾಗುತ್ತಿದ್ದುವು (1967). ಇಂದು ಬದುಕಿರುವ ಪ್ರತಿಯೊಬ್ಬನಿಗೂ ಯುಕ್ತಹಾರ ಒದಗಿಸಬೇಕಾದಲ್ಲಿ ಈ ಮೇಲಿನ ಶೇಕಡ ಸಂಖ್ಯೆಗಳನ್ನು ಇಮ್ಮಡಿಗೊಳಿಸಬೇಕಾದೀತು. ಇನ್ನು ಜನಸಂಖ್ಯೆ ದ್ವಿಗುಣಿತವಾದಂತೆ ಇವನ್ನು ಮತ್ತೆ ಏರಿಸಬೇಕಾಗುತ್ತದೆ. ಅಲ್ಲಿಗೆ 1990ರ ಸುಮಾರಿಗೆ, ಖಂಡಿತವಾಗಿಯೂ 2000ದ ವೇಳೆಗೆ, ನೆಲದ ಮೇಲಿನ ಸಮಸ್ತ ಸಸ್ಯಗಳೂ ಸೆರೆಹಿಡಿದಿಟ್ಟಿರುವ ಸೌರಶಕ್ತಿಯ ಶೇಕಡ 80ನ್ನು ಮಾನವ ಕೇವಲ ಬದುಕಿರಲು ಬಳಸಬೇಕಾದೀತೆಂದು ತೋರುತ್ತದೆ. ಅಂಕೆ ಅಂಶಗಳು ಹೇಳುವ ಕತೆ ನಿಜಕ್ಕೂ ಭೀಕರವಾಗಿದೆ.

2000ದ ಅರುಣೋದಯ (ಮರಣೋದಯ?) ಸಮೀಪವಾದಂತೆ ಮಾನವನ ಸಮಸ್ತ ಚಟುವಟಿಕೆಗಳೂ ಏರುತ್ತಿರುವ ಬಾಯಿಗಳನ್ನು ಸಮಾಧಾನ ಸ್ಥಿತಿಯಲ್ಲಿ ಇಡುವುದರ ಕಡೆಗೇ ಕೇಂದ್ರಿತವಾಗಬೇಕಾದೀತು. ಇದಕ್ಕಾಗಿ ಹೆಚ್ಚು ನೆಲ, ಹೆಚ್ಚು ಬೆಳೆ, (ಮತ್ತು ಅನಿವಾರ್ಯವಾಗಿ) ಹೆಚ್ಚು ಜನ ಎಂಬ ಸೂತ್ರ ಪ್ರಕಾರ ಹೋರಾಡಬೇಕಾದೀತು. ಇಂಥ ಒಂದು ಯೋಜನೆಯಿಂದ ನಿಸರ್ಗದ ಸಮತೋಲಕ್ಕೆ ಅನೇಕ ರೀತಿಗಳಲ್ಲಿ ಭಂಗತಟ್ಟುತ್ತದೆ.

ನಿಸರ್ಗದ ಸಮತೋಲ



ಮೊದಲನೆಯದಾಗಿ ಜನರ ವಸತಿ, ಸಂಚಾರ, ವಿಹಾರ ಮೊದಲಾದವುಗಳಿಗಾಗಿ ಹೆಚ್ಚು ಹೆಚ್ಚು ನೆಲವನ್ನು ಆಕ್ರಮಿಸಬೇಕಾಗುತ್ತದೆ. ಎರಡನೆಯದಾಗಿ ಆಹಾರೋತ್ಪಾದನೆಗಾಗಿ ಹೆಚ್ಚು ಹೆಚ್ಚು ನೆಲವನ್ನು ನಿರ್ದಿಷ್ಟ ಕೃಷಿಗಳಿಗಾಗಿ ಬಳಸಬೇಕಾಗುತ್ತದೆ. ಇವೆರಡೂ ಒಟ್ಟಾಗಿ ನೈಸರ್ಗಿಕ ಪರಿಸ್ಥಿತಿಗಳ ಮೇಲೆ – ಅರಣ್ಯ ಸಂಪತ್ತು, ಸಸ್ಯ ಪ್ರಾಣಿಗಳು, ಬೆಟ್ಟ, ಕಣಿವೆ, ಕೆರೆ, ತೊರೆ, ವಾಯುಮಂಡಲ, ಕಡಲು – ದುಷ್ಪರಿಣಾಮ ಬೀರುತ್ತವೆ. ಮಾನವನ ಉಳಿವಿಗೆ ಅವಶ್ಯವಾದ ಶುದ್ಧ ವಾಯು ಮತ್ತು ಶುದ್ಧ ಜಲ ಮಲಿನಗೊಂಡು ಬದುಕು ಅಸಹನೀಯವಾಗುತ್ತದೆ.

ನಿಸರ್ಗದ ಸಮತೋಲವೆಂಬುದು ಒಂದು ಗತ್ಯಾತ್ಮಕ ಸಾಮರಸ್ಯ. ಅಸಂಖ್ಯಾತ ಸಸ್ಯ ಪ್ರಾಣಿ ಬಗೆಗಳು ನೆಲ ಜಲ ವಾಯುವಿನ ವಿವಿಧ ಸಂಪನ್ಮೂಲಗಳ ಮೇಲೆ ಮಾತ್ರವಲ್ಲ ಪರಸ್ಪರವಾಗಿಯೂ ಅವಲಂಬನೆಗೊಂಡು ಈ ಸಮತೋಲ ಏರ್ಪಟ್ಟಿದೆ. ಯಾವುದೇ ಕಾಡನ್ನು ಸ್ಥೂಲವಾಗಿ ನೋಡಿದಾಗಲೂ ಈ ಸಂಗತಿ ವೇದ್ಯವಾಗುತ್ತದೆ. ಅಲ್ಲಿಯ ಸಸ್ಯ ಪ್ರಾಣಿ ವೈವಿಧ್ಯವೇ ಅದರ ತ್ರಾಣ, ವಿಶೇಷೀಕರಣ ಅಥವಾ ಏಕತಾನತೆ ಅಲ್ಲ. ಕೀಟಬಾಧೆಯಾಗಲಿ ಬೂಷ್ಟುರೋಗವಾಗಲಿ ಸಾಂಕ್ರಾಮಿಕ ಪಿಡುಗುಗಾಗಲಿ ಕಾಡಿಗೆ ಸಾಧಾರಣವಾಗಿ ತಾಗದು. ಒಂದು ಬಗೆಯ ಜೀವಿಗೆ ತಾಗಿದ ರೋಗ ಕೇವಲ ಅದನ್ನು ನಿರ್ನಾಮ ಮಾಡೀತೇ ವಿನಾ ಸಮಗ್ರ ಅರಣ್ಯವನ್ನಲ್ಲ. ಪ್ರತಿಯೊಂದು ಜೀವಿಗೂ ಸಾಧಾರಣವಾಗಿ ವೈರಿಜೀವಿಯೂ ಒಂದಿರುವುದು ವಾಡಿಕೆ. ಹೀಗಾಗಿ ಯಾವುದೇ ಜೀವಿ – ಸಸ್ಯವಾಗಲಿ, ಪ್ರಾಣಿಯಾಗಲಿ – ಕಾಡಿನ ಒಡೆಯ ಆಗಿ ಇತರ ಜೀವಿಗಳ ನಾಶಕ್ಕೆ ಕಾರಣವಾಗುವುದು ಅಸಾಧ್ಯ.



ನಾಗರಿಕತೆಯ ಪರಿಧಿಯನ್ನು ವಿಸ್ತರಿಸುವಾಗ ಇಲ್ಲವೇ ಬೇಸಾಯವನ್ನು ಸರ್ವವ್ಯಾಪಿಯಾಗಿಸುವಾಗ ಇಲ್ಲವೇ ಬೃಹಜ್ಜಲಾಶಯಗಳನ್ನು ನಿರ್ಮಿಸಿ ಹುಚ್ಚು ಹೊಳೆಗಳನ್ನು ಪಳಗಿಸುವಾಗ ಮಾನವ, ಸಹಜವಾಗಿ, ನಿಸರ್ಗದ ಸಮತೋಲವನ್ನು ಕೆಡಿಸಬೇಕಾಗುತ್ತದೆ. ಮಲೇರಿಯವೋ ಸಿಡುಬೋ ಬೇರೆ ಯಾವುದೋ ಪಿಡುಗೋ ನಗರಗಳ ಮೇಲೆ ದಾಳಿ ಇಟ್ಟಾಗ ಮಾನವ ಸುಲಭವಾಗಿ ಅವುಗಳಿಗೆ ಬಲಿ ಆಗುವುದು ಇದರ ಒಂದು ಲಕ್ಷಣ. ಗಾವುದ ಗಾವುದ ಹಬ್ಬಿ ನಳನಳಿಸುತ್ತಿರುವ ಪೈರು ಬೈಗು ಬೆಳಗಾಗುವುದರೊಳಗೆ ಮಿಡತೆ ದಂಡುಗಳಿಗೆ ಬಲಿ ಆಗಿ ಬೋಳು ಬಯಲಾಗುವುದು ಇನ್ನೊಂದು ಲಕ್ಷಣ. ಹವಾವೈಪರೀತ್ಯಗಳು, ಅತಿ ವೃಷ್ಟಿ, ಅನಾವೃಷ್ಟಿ ಅನಾಹುತಗಳು, ಪ್ರವಾಹದಿಂದ ಆಗುವ ಸರ್ವನಾಶ ಒಂದೊಂದರ ಕಾರಣವನ್ನೂ ನಿಸರ್ಗದ ಪ್ರಕೋಪಕ್ಕೆ ಸಂಬಂಧಿಸಿ ತೋರಿಸುವುದು ಕಷ್ಟ ಸಾಹಸವೇನೂ ಅಲ್ಲ. ಹೀಗಾಗಿ ಜನಾರೋಗ್ಯ ಸಂವರ್ಧನೆ, ಪೈರು, ಫಸಲುಗಳ ಸಂರಕ್ಷಣೆ, ಪ್ರವಾಹ ನಿಯಂತ್ರಣ ಮುಂತಾದವು ಸರ್ಕಾರಗಳ ಕೇಂದ್ರೀಯ ಹೊಣೆಗಳಾಗುತ್ತವೆ. ಇವನ್ನು ಕ್ಷಿಪ್ರವಾಗಿಯೂ ಸಮರ್ಪಕವಾಗಿಯೂ ನಿರ್ವಹಿಸಲು ಒದಗುವ ಪರಮೋತ್ಕೃಷ್ಟ ಆಯುಧ ತಂತ್ರವಿದ್ಯೆ. ಎಂದೇ ಇಂದು ತಂತ್ರವಿದ್ಯೆ ಹಾಗೂ ಅದರ ಉಪೋತ್ಪನ್ನಗಳು ಇಷ್ಟೊಂದು ಪ್ರಪಂಚ ವ್ಯಾಪ್ತಿ ಗಳಿಸಿರುವುದಾಗಿದೆ. ಇವು ಮಾನವನಿಗೆ ಪರಿಸರದ ಒಡೆಯನೇ ತಾನು, ಪರಿಸರವನ್ನು (ನಿಸರ್ಗವನ್ನು) ತನ್ನ ಇಚ್ಛಾನುಸಾರ ವರ್ತಿಸಲು ವಿಧಿಸಬಲ್ಲ ನವಬ್ರಹ್ಮನೇ ತಾನು ಎಂಬ ಭ್ರಾಂತಿಜನ್ಯ ಭಾವನೆಯನ್ನು ಹುಟ್ಟಿಸಿರುವುದಾಗಿದೆ.

ಆಧುನಿಕ ತಂತ್ರವಿದ್ಯೆ

ವಿಜ್ಞಾನ ಸಂಶೋಧಿಸಿ ಹೊರಗೆಡಹುವ ನಿಸರ್ಗ ನಿಯಮಗಳನ್ನೂ ಸೂತ್ರಗಳನ್ನೂ ಆಧರಿಸಿ ತಂತ್ರವಿದ್ಯೆ ವಿಕಸಿಸುತ್ತದೆ. ಆಧುನಿಕ ತಂತ್ರವಿದ್ಯೆ ಮುಖ್ಯವಾಗಿ ಪಾಶ್ಚಾತ್ಯ ನಾಗರಿಕತೆಯ ಕೊಡುಗೆ. ಅಲ್ಲಾದರೂ ಅಮೆರಿಕ ದೇಶ ತಂತ್ರವಿದ್ಯಾಭಿವರ್ಧನೆಯ ಮುಂಚೂಣಿಯಲ್ಲಿದೆ. ಅಮೆರಿಕಕ್ಕೆ ಈ ಧುರೀಣತ್ವ ಹೇಗೆ ಪ್ರಾಪ್ತವಾಯಿತು ಎಂಬುದನ್ನು ಐತಿಹಾಸಿಕವಾಗಿ ಪರಿಶೀಲಿಸಿದರೆ ಕೆಲವು ಮುಖ್ಯ ಸಂಗತಿಗಳು ವ್ಯಕ್ತವಾಗುತ್ತವೆ.

ವಿದ್ಯೆಯಲ್ಲಿ ನುರಿತ ಕಾರ್ಯಶೀಲರು ಗ್ರೇಟ್ ಬ್ರಿಟನ್ ಮತ್ತು ಯುರೋಪಿನಿಂದ ಅಮೆರಿಕದ ಹೊಸ ನೆಲಕ್ಕೆ ವಲಸೆ ಹೋಗಿ ತಳ ಊರಿದರು. ಕಡಿಮೆ ಜನ ಅಧಿಕ ವಿಸ್ತಾರದ ಕನ್ನೆನೆಲವನ್ನು ಕಬಳಿಸಿದರು. ಹೀಗೆ ಅಮೆರಿಕದ ವಿಶಾಲ ಫಲವತ್ತ್ರದೇಶ ಆಧುನಿಕ ವಿಜ್ಞಾನ ಹಾಗೂ ತಂತ್ರ ವಿದ್ಯೆಯ ಪ್ರಯೋಗಗಳಿಗೂ ಅಭಿವರ್ಧನೆಗೂ ಸುಲಭವಾಗಿ ಲಭಿಸಿತು. ಜನಸಂಖ್ಯೆಯ ತಡೆಯಿರದ ಏರಿಕೆಯಿಂದ ಒದಗಬಹುದಾದ ಅನಾಹುತಗಳನ್ನು ಆ ಮಂದಿ ಅರಿತವರಾದ್ದರಿಂದ ತಮ್ಮ ರಾಷ್ಟ್ರದ ಜನಸಂಖ್ಯಾವೃದ್ಧಿಯನ್ನು ನಿಯಂತ್ರಿಸಲು ಉದ್ಯುಕ್ತರಾಗಿ ಸಫಲರಾದರು. ವಿಶ್ವಸಂಸ್ಥೆಯ ಮೂಲಗಳಿಂದ ಪಡೆಯಲಾದ 1973ರ ಪರಿಸ್ಥಿತಿಯನ್ನು ಮುಂದಿನ ಯಾದಿಯಲ್ಲಿ ಕಾಣಿಸಿದೆ.

ಪ್ರದೇಶ	ಜನಸಂಖ್ಯೆ (ಕೋಟಿ)	ಸ್ಥೂಲ ವಾರ್ಷಿಕ ಜನನಸಂಖ್ಯೆ (ಶೇಕಡ)	ಸ್ಥೂಲ ವಾರ್ಷಿಕ ಮರಣಸಂಖ್ಯೆ (ಶೇಕಡ)	ವಾರ್ಷಿಕ ನಿವ್ವಳವೃದ್ಧಿ (ಶೇಕಡ)
ಪ್ರಪಂಚ	386	3.3	1.3	2
ಅಭಿವರ್ಧಿತ ರಾಷ್ಟ್ರಗಳು	112	1.7	0.9	0.8
ಅಭಿವರ್ಧನಶೀಲ ರಾಷ್ಟ್ರಗಳು	274	3.9	1.4	2.5
ಆಫ್ರಿಕ	35.5	4.6	1.9	2.7
ಜಪಾನ್ ಹೊರತಾದ ಏಷ್ಯ	210	3.8	1.4	2.4
ಲ್ಯಾಟಿನ್‌ಅಮೆರಿಕ(ಉಷ್ಣವಲಯ)	26.5	3.8	0.8	3
ಅಮೆರಿಕ ಸಂಯುಕ್ತ ಸಂಸ್ಥಾನಗಳು	21	1.5	0.9	0.6
ಜಪಾನ್	10.8	1.9	0.7	1.2
ಯೂರೋಪ್	47.2	1.6	1.1	0.5
ಸೋವಿಯತ್ ಒಕ್ಕೂಟ(ಮಾಜಿ)	25	1.8	0.8	1
ಇತರ ರಾಷ್ಟ್ರಗಳು (ಕೆನಡ, ಆಸ್ಟ್ರೇಲಿಯ ನ್ಯೂಜಿಲ್ಯಾಂಡ್, ಲ್ಯಾಟಿನ್ ಅಮೆರಿಕ (ಸಮಶೀತೋಷ್ಣವಲಯ)	8	2.2	0.8	1.4

ಅಮೆರಿಕದ ಕುಶಲಿಗಳಿಗೆ ಒದಗಿಬಂದ ಸನ್ನಿವೇಶ ವಿಶೇಷ ತರಹದ್ದು: ತಂತ್ರವಿದ್ಯಾಪರಿಣತ ಅಲ್ಪ ಜನಸಂಖ್ಯೆ, ವಿಪುಳ ನೈಸರ್ಗಿಕ ಸಂಪನ್ಮೂಲಗಳು, ವಿಶಾಲ ಪ್ರದೇಶ, ವ್ಯವಸ್ಥಿತವಾಗಿ ಈ ಸಂಪನ್ಮೂಲಗಳನ್ನು ಅನ್ವೇಷಿಸಿ ಸ್ವಂತ ಸೌಕರ್ಯಕ್ಕಾಗಿ ಸಂಗ್ರಹಿಸಿ ಬಳಸುವುದು ಸಹಜವಾಗಿ ಅವರ ಉದ್ದೇಶವಾಯಿತು. ಸ್ವಯಂಚಲಿಗಳ ಅಭಿವರ್ಧನೆಯತ್ತ ಅವರ ಒತ್ತು ಬಿತ್ತು. ಹೀಗೆ ಬೆಳೆದ ಆಧುನಿಕ ಪಾಶ್ಚಾತ್ಯ ತಂತ್ರವಿದ್ಯೆ ಪ್ರಧಾನವಾಗಿ ನಾಲ್ಕು ಸೂತ್ರಗಳನ್ನು ಅವಲಂಬಿಸಿದೆ. ಆಧಿಕ ಬಂಡವಾಳ, ಕಡಿಮೆ ಕಾರ್ಮಿಕರು, ಫಾಸಿಲ್ ಇಂಧನ, ಸಾರಿಗೆ ಜಾಲ. ಇವುಗಳ ಅರ್ಥವಿಷ್ಟು:

ಅಧಿಕ ಬಂಡವಾಳ ಹೂಡಿ ಬೃಹದುದ್ಯಮಗಳನ್ನು ಸಂಸ್ಥಾಪಿಸಬೇಕಾಗುತ್ತದೆ. ಶ್ರೀಮಂತ ರಾಷ್ಟ್ರಗಳಿಗೆ ಮಾತ್ರ ಇದು ಸಾಧ್ಯವಾದೀತು.

ಜನಸಂಖ್ಯೆ ಮಿತವಾಗಿದ್ದುದರಿಂದಲೂ ಇತರೆಡೆಗಳಿಂದ ಜನ ವಲಸೆ ಬಂದುದಾದರೆ ಹೊಸ ಸಮಸ್ಯೆಗಳು ತಲೆದೋರಬಹುದಾದ್ದರಿಂದಲೂ ಯಂತ್ರೋದ್ಯಮಗಳಿಗೂ ಕೃಷಿ ಕೈಗಾರಿಕೆಗಳಿಗೂ ಒದಗುತ್ತಿದ್ದ ಕಾರ್ಮಿಕರು ಕಡಿಮೆ ಸಂಖ್ಯೆಯಲ್ಲಿದ್ದರು. ಹೀಗಾಗಿ ಆದಷ್ಟು ಮಟ್ಟಿಗೆ ಸ್ವಯಂಚಲಿಗಳನ್ನು ಅವಲಂಬಿಸುವುದು ಅನಿವಾರ್ಯವಾಯಿತು.

ಫಾಸಿಲ್ ಇಂಧನ ಅಗ್ಗವಾಗಿಯೂ ವಿಪುಳವಾಗಿಯೂ ಲಭಿಸುತ್ತಿದ್ದುದರಿಂದ ಈ ಇಂಧನ ಒದಗಿಸುವ ಶಕ್ತಿಯನ್ನು ಆಧರಿಸಿ ತಂತ್ರವಿದ್ಯೆ ಬೆಳೆಯಿತು.

ಬೃಹದುದ್ಯಮಗಳು ಕೇಂದ್ರೀಯವಾಗಿ ಉತ್ಪಾದನೆ ಮಾಡುತ್ತವೆ. ಅವುಗಳ ಉತ್ಪನ್ನಗಳು ಸ್ವದೇಶಾದ್ಯಂತ ಹಾಗೂ ಪ್ರಪಂಚಾದ್ಯಂತ ಗ್ರಾಹಕರನ್ನು ತಲಪಬೇಕಾದರೆ ಸುಸಂಘಟಿತ ಸಾರಿಗೆ ಜಾಲ ಅತ್ಯಾವಶ್ಯಕ.

ಈ ಮೇಲಿನ ಸೂತ್ರಗಳನ್ನು ಆಧರಿಸಿರುವ ತಂತ್ರವಿದ್ಯೆ ತನ್ನ ಅಕ್ಟೋಪಸ್ ಬಹುಕರಗಳನ್ನು ಚಾಚಿ ನಿಸರ್ಗದಿಂದ ಸಂಪನ್ಮೂಲಗಳನ್ನು ದೋಚಿ ಹಿಂಚೋಲಿನಲ್ಲಿ ಪರಿಸರಮಾಲಿನ್ಯವನ್ನು ಉರುಚಿ ವ್ಯಾಕೋಚಿಸದೆಯೇ ವಿನಾ ನಿಸರ್ಗದೊಡನೆ ಹೊಂದಿ ಅದಕ್ಕೆ ಅನುವರ್ತಿಯಾಗಿ ಬೆಳೆದು ಅಭಿವರ್ಧಿಸಿಲ್ಲ. ಇಂಥ ಬೆಳೆವಣಿಗೆ ವರ್ತಮಾನ ಯುಗದ ಅಸಂಖ್ಯಾತ ಮಾನವ ನಿರ್ಮಿತ ಸಮಸ್ಯೆಗಳಿಗೆ ಕಾರಣವಾಗಿದೆ.

ಮೊದಲನೆಯದಾಗಿ, ನಗರಗಳ ಅತಿಲಂಬನೆ. ಒಂದು ಕಾಲದಲ್ಲಿ ಜನಜೀವನಕ್ಕೆ ಅವಶ್ಯವಾದ ಸಮಸ್ತ ಸೌಲಭ್ಯಗಳೂ ಒಂದೆಡೆ ದೊರೆಯುವಂತಿದ್ದ ನಗರಗಳು ಈಗ ಅದೇ ಜನಜೀವನಕ್ಕೆ ಆರೋಗ್ಯ, ಆರ್ಥಿಕತೆ, ಬದುಕಿನ ಮಟ್ಟ, ಸೌಕರ್ಯಗಳು ಒಂದೊಂದರಲ್ಲೂ ಮಾರಕವಾಗುವಂತೆ ಬೆಳೆದು ಹೋಗಿವೆ, ಬೆಳೆಯುತ್ತಲೇ ಇವೆ. ಇಂಥ ಶಿರೋಭಾರವೃದ್ಧಿ ಯಾವ ರಾಷ್ಟ್ರಕ್ಕೂ ಆರೋಗ್ಯಕರವಲ್ಲ.

ಎರಡನೆಯದಾಗಿ, ತಂತ್ರವಿದ್ಯೆಯ ಫಲಗಳು ಕೃಶಿ ತೋಟಗಾರಿಕೆ ಕ್ಷೇತ್ರಗಳನ್ನು ಆಕ್ರಮಿಸಿ ಅಲ್ಲಿ ಹೊಸ ನಮೂನೆಯ ಪರಿಸರಮಾಲಿನ್ಯ ಸಮಸ್ಯೆಗಳಿಗೆ ಕಾರಣವಾಗಿವೆ. ಡಿಡಿಟಿ ಮೊದಲಾದ ಕೀಟನಾಶಕಗಳ ವ್ಯಾಪಕ ಬಳಕೆಯೇ ಆಗಲಿ, ಕೃತಕ ಗೊಬ್ಬರಗಳ ಉಪಯೋಗವೇ ಆಗಲಿ, ದಿಢೀರ್ ವೈದ್ಯಕೀಯ ಸೇವೆಗಳ ಸೌಲಭ್ಯವೇ ಆಗಲಿ, ಎಲ್ಲ ದೈಹಿಕ ಶ್ರಮಗಳನ್ನೂ ಯಂತ್ರ ಸಲಕರಣೆಗಳಿಂದ ಪ್ರತಿಸ್ಥಾಪಿಸುವ ಪ್ರಯತ್ನಗಳೇ ಆಗಲಿ ಜನಜೀವನದ ಗುಣಮಟ್ಟವನ್ನು ಎತ್ತರಿಸಿವೆ ಎಂದು ಹೇಳಲಾಗುವುದಿಲ್ಲ. ಪರಿಣಾಮ ತದ್ವಿರುದ್ಧವೇ ಆಗಿರುವುದು ದೀರ್ಘಕಾಲೀನ ಪರಿಶೀಲನೆಗಳಿಂದ ಕಂಡುಬಂದಿದೆ.

ಮೂರನೆಯದಾಗಿ, ಆಧುನಿಕ ತಂತ್ರವಿದ್ಯೆ ಒದಗಿಸಿರುವ ವ್ಯಾಪಕ ಸೌಲಭ್ಯಗಳ ಉಪೋತ್ಪನ್ನವಾಗಿ ಪೋಲುಮಾಡುವಿಕೆ (ಅಪವ್ಯಯ) ಜನಜೀವನದ ಅವಿಭಾಜ್ಯ ಅಂಗವೇ ಆಗಿಹೋಗಿದೆ. ಸಾವಿರ ಜನ ಮಾಡುವ ಕೆಲಸವನ್ನು ಒಂದು ಯಂತ್ರ ಕ್ಷಿಪ್ರವಾಗಿ ಮಾಡಿ ಮುಗಿಸಿ ಜನರ ಅಷ್ಟು ಶ್ರಮ, ಕಾಲ ಮುಂತಾದವನ್ನು ಉಳಿಸುತ್ತದೆ ನಿಜ. ಹೀಗೆ ಲಭಿಸುವ ವಿರಾಮ ಆ ಜನರಲ್ಲಿ ಸಮವಾಗಿ ಹಂಚಿಹೋಗಿ ಅವರ ಬದುಕು ಹಸನಾದರೆ ಯಂತ್ರದಿಂದ ಆ ಮಂದಿಗೆ ಉಪಕಾರವಾಯಿತೆನ್ನಬಹುದು. ಆದರೆ ವಾಸ್ತವ ಪರಿಸ್ಥಿತಿ ಹೀಗೆ ಕಾಣುತ್ತಿಲ್ಲ. ಇಂಥ ಲಾಭ ಏನಿದ್ದರೂ ಮಾಲಿಕರಿಗೆ ಒದಗುವುದೇ ವಿನಾ ಕಾರ್ಮಿಕರಿಗೆ ಅಲ್ಲ. ಪರಿಣಾಮವಾಗಿ ಎರಡು ವರ್ಗಗಳು ತಲೆದೋರಿ ಒಟ್ಟಾರೆ ಅಶಾಂತಿಯ ವಾತಾವರಣ ಮೂಡಿದೆ. ಇದರಿಂದ ಮಾಲಿಕರಿಗೂ ಸುಖವಿಲ್ಲ, ಕಾರ್ಮಿಕರಿಗೂ ಸಮಾಧಾನವಿಲ್ಲ. ಮಾನವರ ಮೇಲೆ ಯಂತ್ರಸವಾರಿ ಮಾಡುವ ಈ ತಿರುಗಾ ಮುರುಗಾ ಸನ್ನಿವೇಶ ಆಡಳಿತಗಾರರ, ಅಂತೆಯೇ ಜನರ ಕೂಡ, ತಲೆ ತಿನ್ನುತ್ತಿದೆ. ತಂತ್ರವಿದ್ಯೆಯ ನೇಪಥ್ಯ ನಿರ್ದೇಶನದ ಕಹಿಫಲವಿದು.

ನಾಲ್ಕನೆಯದಾಗಿ, ನೈಸರ್ಗಿಕ ಸಂಪನ್ಮೂಲಗಳ ಅವ್ಯಾಹತ ದರೋಡೆ ಮತ್ತು ಪರಿಸರಮಾಲಿನ್ಯದ ನಿರಂತರ ಏರಿಕೆ. ಯಂತ್ರದ ಹಸಿವೆ ನೀಗಲು ರಾಕ್ಷಸಗಾತ್ರದಲ್ಲಿ ಶಕ್ತಿಯೂ ಬೇಕು, ಕಚ್ಚಾಸಾಮಗ್ರಿಯೂ ಬೇಕು. ಇವುಗಳಿಗಾಗಿ ನಿಸರ್ಗವನ್ನು ನಿರ್ದಾಕ್ಷಿಣ್ಯವಾಗಿ ಹನನ (ಸೂರೆ) ಮಾಡಬೇಕು. ಒಟ್ಟಿನಲ್ಲಿ ನಿಸರ್ಗಕ್ಕೆ ಮೂರು ಬಗೆಯ ನಷ್ಟಗಳು (ಯಾವ ಲಾಭ ಅಥವಾ ಪ್ರತಿಫಲ ಇಲ್ಲದೇ) ಸಂಭವಿಸುತ್ತವೆ: ಸಂಪನ್ಮೂಲಗಳ ಸೋರಿಕೆ, ಸಿದ್ಧ ವಸ್ತುಗಳ ಪೇರಿಕೆ, ತ್ಯಾಜ್ಯ ವಸ್ತುಗಳ ಏರಿಕೆ.

ತಂತ್ರವಿದ್ಯೆಯ ಕಾರಣವಾಗಿ ಮಾನವನ ಬದುಕಿನಲ್ಲಿ ಪ್ರಗತಿ ಆಗಿದೆ ನಿಜ. ಅಂತಿಮ ವಿಶ್ಲೇಷಣೆಯಲ್ಲಿ ಶಕ್ತಿವಿನಿಯೋಗದ ಮೊತ್ತವೇ ಪ್ರಗತಿಯ ಮಾನಕ. 1940ರಲ್ಲಿ ಪ್ರತಿಯೊಬ್ಬ ಅಮೆರಿಕನ್ನನಿಗೂ ದಿನವಹಿ 153 ಗುಲಾಮರು ಒದಗಿಸಬಹುದಾದ ಸ್ನಾಯು ಸೇವೆಗೆ ಸಮಾನವಾದ ಸೇವೆ ಬೇರೆ ಬೇರೆ ಹಂತಗಳಲ್ಲಿ ಶಕ್ತಿವಿನಿಯೋಗದಿಂದ ದೊರೆಯುತ್ತಿತ್ತೆಂದು ಅಂದಾಜು ಮಾಡಲಾಗಿದೆ. 1970ರ ವೇಳೆಗೆ ಈ ಸಂಖ್ಯೆ 400ಕ್ಕೆ ನೆಗೆದಿತ್ತಂತೆ. ಪ್ರಪಂಚದ ಬಹುಸಂಖ್ಯಾತರು ಇಂಥ ಅದೃಷ್ಟವಂತರಲ್ಲ ನಿಜ. ಆದರೆ ಇವರ ಪೈಕಿ ಹೆಚ್ಚಿನವರ ಹಿರಿ ಆಸೆ ಇರುವುದು ಈ ತೆರನಾದ ಸುಖಗಿಟ್ಟಿಸುವುದರತ್ತ. ಮಾನವನ ಈ ಸುಪ್ತ ಹಾಗೂ ಅದಮ್ಯ ಪ್ರವೃತ್ತಿಯ ಪರಿಣಾಮವಾಗಿ ಪ್ರಪಂಚದಲ್ಲಿ ಶಕ್ತಿವಿನಿಯೋಗ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತ ಬಂದಿದೆ.

ಶಕ್ತಿವಿನಿಯೋಗ

ನಿಸರ್ಗದಿಂದ ಕಚ್ಚಾ ಸಾಮಗ್ರಿ ಸಂಗ್ರಹಿಸಲು ಶಕ್ತಿ ಬೇಕು. ಇದನ್ನು ಕಾರ್ಖಾನೆಗೆ ಸಾಗಿಸಲು ಶಕ್ತಿ ಬೇಕು, ಕಾರ್ಖಾನೆ ಕಾರ್ಯೋದ್ಯುಕ್ತವಾಗಿ ಸಿದ್ಧ ವಸ್ತುಗಳನ್ನು ನಿರ್ಮಿಸಲು ಶಕ್ತಿ ಬೇಕು. ಜನರಾದರೂ ಈ ವಸ್ತುಗಳಿಂದ ಸೇವೆ ಅಥವಾ ಉಪಯೋಗ ಪಡೆಯಲು ಶಕ್ತಿ ಬೇಕು. ಕೊನೆಯದಾಗಿ ಉಪಯೋಗಾನಂತರ ಉಳಿಯುವ ಶೇಷವಸ್ತುವಿನ ವಿಲೆವಾರಿಗೆ ಕೂಡ ಶಕ್ತಿ ಬೇಕು. ಆದರೆ ವಾಸ್ತವವಾಗಿ ಈ ತೆರನಾದ ನಿರಂತರ ಶಕ್ತಿ ವಿನಿಯೋಗ ವೈಜ್ಞಾನಿಕ, ರಾಜಕೀಯ ಮಾತ್ತು ಇತರ ಕಾರಣಗಳಿಂದಾಗಿ ಕೈಗೂಡದೆ ಇಂದು ಬಾಳ ಬಂಡಿ ಗಡಬಡಾಯಿಸುವಂಥ ಪರಿಸ್ಥಿತಿ ಸರ್ವವ್ಯಾಪಿ ಆಗುತ್ತಿದೆ.

ಕಲ್ಲಿದ್ದಲಿನ ದಹನದಿಂದ ಉತ್ಪಾದನೆ ಆಗುವ ಶಕ್ತಿಯನ್ನು ಶಕ್ತಿವಿನಿಯೋಗದ ಮಾನಕವಾಗಿ ಬಳಸುವುದು ವಾಡಿಕೆ. ಮುಂದಿನ ಯಾದಿ 1900ರಿಂದ 1970ರ ತನಕ ಜನಸಂಖ್ಯೆ ಮತ್ತು ಶಕ್ತಿ ವಿನಿಯೋಗ ಹೇಗೆ ಹೆಚ್ಚುತ್ತ ಬಂದಿದೆ ಎಂಬುದನ್ನೂ 1970ರಿಂದ 2000ದ ತನಕದ ಪ್ರವೃತ್ತಿ ಹೇಗಿರಬಹುದು ಎಂಬುದನ್ನೂ ಶ್ರುತಪಡಿಸುತ್ತದೆ.

ಇಸವಿ	ಜನಸಂಖ್ಯೆ (ಕೋಟಿಗಳಲ್ಲಿ)	ಶಕ್ತಿವಿನಿಯೋಗ (ದಶಲಕ್ಷಮೆಟ್ರಿಕ್ ಟನ್ ಕಲ್ಲಿದ್ದಲಿಗೆ ಸಮಾನ)	ತಲಾ ಶಕ್ತಿ ವಿನಿಯೋಗ (ಮೆಟ್ರಿಕ್ ಟನ್ ಕಲ್ಲಿದ್ದಲಿಗೆ ಸಮಾನ)
1900	150	625	0.3676
1910	175	1150	0.6571
1920	210	1250	0.5952
1930	220	2000	0.9091
1940	240	2250	0.9375
1950	250	3150	1.26
1960	310	4350	1.45
1970	375	6825	1.82
1980	450	10000	2.2222
1990	560	15000	2.6786
2000	640	22500	3.1563

ಮಾನವನ ಶಕ್ತಿದಾಹ ವರ್ಷದಿಂದ ವರ್ಷಕ್ಕೆ, ಅದೂ ಪ್ರಸಕ್ತ ಶತಮಾನದಲ್ಲಿ, ಹೇಗೆ ಉಲ್ಬಣ ಸ್ಥಿತಿಗೇರಿದೆ ಎಂಬುದನ್ನು ಮೇಲಿನ ಯಾದಿಯ ಕೊನೆಯ ನೀಟಸಾಲಿನ ಸಂಖ್ಯೆಗಳು ಸ್ಪಷ್ಟಪಡಿಸುತ್ತವೆ. ಇಷ್ಟೊಂದು ಅಗಾಧ ಶಕ್ತಿಯ ಗಮನಾರ್ಹ ಭಾಗ ಒದಗುವುದು ಮುಖ್ಯವಾಗಿ ಫಾಸಿಲ್ ಇಂಧನಗಳಿಂದ. ಇವುಗಳ ಜೊತೆಗೆ ಹೆಸರಿಸಬಹುದಾದವು ಸ್ನಾಯುಶಕ್ತಿ, ಜಲಶಕ್ತಿ ಮತ್ತು ಬೈಜಿಕ ಶಕ್ತಿ. ಮಾರುತಶಕ್ತಿ, ಭೂಶಾಖಶಕ್ತಿ ಅಥವಾ ಸೌರಶಕ್ತಿ ಗಣನೀಯ ಮೊತ್ತದಲ್ಲೇನೂ ಉತ್ಪಾದನೆ ಆಗುತ್ತಿಲ್ಲ. ಪ್ರಾಣಿಗಳಿಂದಲೂ ಮನುಷ್ಯರಿಂದಲೂ ಒದಗುವ ಸ್ನಾಯುಶಕ್ತಿ ಮತ್ತು ಜಲಶಕ್ತಿ ಪರಿಸರ ಮಾಲಿನ್ಯಕ್ಕೆ ಕಾರಣವಾಗುವುದಿಲ್ಲ. ಆದರೆ ಇವುಗಳಿಂದ ಪ್ರಪಂಚದ ಬೃಹದ್ಯಂತ್ರ ಸ್ಥಾವರಗಳಾಗಲಿ ಸಂಚಾರ ಸಾಧನಗಳಾಗಲಿ ಚಾಲೂ ಆಗಲಾರವು. ಅವುಗಳಿಗೆ ಫಾಸಿಲ್ ಇಂಧನಶಕ್ತಿ ಬೇಕೇಬೇಕು. ಬೈಜಿಕ ಶಕ್ತಿ ಇನ್ನೂ ವ್ಯಾಪಕ

ಉಪಯೋಗಕ್ಕೆ ಬಂದಿಲ್ಲ. ಅಲ್ಲಿ ಇಲ್ಲಿ ಬಂದಿದ್ದರೂ ಇದು ಸಾಕಷ್ಟು ಕಳಂಕಲೇಪಿತವಾಗಿದ್ದು ತೀವ್ರ ವಿರೋಧ ಎದುರಿಸಬೇಕಾಗಿದೆ. ದುರ್ದೈವವೆಂದರೆ ಇವೆಲ್ಲವೂ ಪರಿಸರಮಾಲಿನ್ಯಕ್ಕೆ ಕಾರಣವಾಗುತ್ತವೆ. ಅಲ್ಲದೇ ಇವನ್ನು ಒದಗಿಸುವ ಮೂಲಗಳು – ಕಲ್ಲಿದ್ದಲು ಹಾಗೂ ಎಣ್ಣೆ ಬಾವಿಗಳು ಮತ್ತು ವಿಕಿರಣಪಟುಧಾತುಗಳು – ಸಂತತವಾಗಿ ಲಭಿಸುವ ಭರವಸೆ ಏನೂ ಇಲ್ಲ. ಹೀಗಾಗಿ ಶಕ್ತಿ ವಿನಿಯೋಗ ಗಗನಕ್ಕೆ ಏರುತ್ತಿದ್ದಂತೆ ಮಾನವನ ಭವಿಷ್ಯದ ಬಗ್ಗೆ ಕಳವಳ ಉಂಟಾಗುತ್ತಿದೆ. ಒಂದಿಗೇ ಹೊಸ ಮತ್ತು ಮಾಲಿನ್ಯರಹಿತ ಮೂಲಗಳ ಶೋಧನೆ ಜರೂರಾಗಿ ಆಗಬೇಕು ಎಂಬ ಅಂಶವೂ ವೇದ್ಯವಾಗುತ್ತಿದೆ.

ನೇಸರಿಗೆ ಲಗ್ಗೆ ಹಾಕುವುದು

ಮಾನವನ ಆಸೆ ಆಕಾಂಕ್ಷೆಗಳೂ ಬದುಕಿನ ರೀತಿನೀತಿಗಳೂ ಈಗಿನ ಜಾಡಿನಲ್ಲಿಯೇ ದೌಡಾಯಿಸಿದರೆ ಅವನಿಗೆ ಆವಶ್ಯವಾಗುವ ಶಕ್ತಿ ಪೂರೈಕೆ ಮಾಡಲು ಸೌರ ಶಕ್ತಿಯನ್ನು ಸೆರೆಹಿಡಿದು ಒದಗಿಸಬೇಕಾದೀತು ಎಂಬುದಾಗಿ ವಿಜ್ಞಾನಿಗಳು ಹೇಳುತ್ತಿದ್ದಾರೆ. ಈ ದಿಶೆಯಲ್ಲಿ ಅವರು ಪ್ರಯೋಗಗಳಲ್ಲಿ ಉದ್ಯುಕ್ತರಾಗಿಯೂ ಇದ್ದಾರೆ. ಸೂರ್ಯನಿಂದ ಶಕ್ತಿ ಪ್ರವಾಹ ಅಡೆತಡೆ ಇಲ್ಲದೆ ಭೂಮಿಗೆ ಹರಿಯುತ್ತಿದೆ. ವಾಸ್ತವವಾಗಿ ಸೌರಶಕ್ತಿಯ ಕಡಲಿನಲ್ಲಿ ಭೂಮಿ ಮುಳುಗಿದೆ ಎನ್ನಬಹುದು. ಇದರ ಪರಿಣಾಮವಾಗಿ ವಾಯುಮಂಡಲದಲ್ಲಿ ಮಾರುತಗಳು ಸಾಗರದಲ್ಲಿ ತರಂಗಗಳೂ ಉದ್ಭವಿಸುವುದಾಗಿದೆ. ಇವುಗಳಿಂದ ಉತ್ಪಾದನೆ ಆಗುವ ಚಲನಶಕ್ತಿ $1.2X10^{22}$ ಜೌಲುಗಳು. ಇಂದಿನ ಪ್ರಪಂಚದ ಶಕ್ತಿವಿನಿಯೋಗದ ಸುಮಾರು 60 ಪಟ್ಟು ದೊಡ್ಡ ಮೊತ್ತವಿದು. ಎಂದ ಮೇಲೆ ನೇರ ಸೌರಶಕ್ತಿಯ ಅಗಾಧತೆ ಎಷ್ಟಿರಬೇಡ!



ಸೌರಶಕ್ತಿಯನ್ನು ಮಾನವನ ಉಪಯೋಗಕ್ಕೆ ಪಳಗಿಸುವುದು ಅಷ್ಟೇನೂ ಸುಲಭವಲ್ಲ. ವ್ಯಾಪಕವಾಗಿಯೂ ತೆಳುವಾಗಿಯೂ ಹರಡಿ ಹೋಗಿರುವ ಅಸಾಂದ್ರ ಶಕ್ತಿ ಇದು. ಇನ್ನೂ ಒಂದು ತೊಂದರೆ ಇದೆ. ಬಿಸಿಲು ನೇರವಾಗಿ ಬೀಳದ ಎಡೆಗಳಲ್ಲಿ ಸೌರಶಕ್ತಿಯ ಸಂಗ್ರಹಣೆ ಸಫಲವಾಗದು. ಬಿಸಿಲು ಸರಿಯಾಗಿ ಬಿದ್ದು ಸೌರಶಕ್ತಿಯ ಸಂಗ್ರಹಣೆ ಸಮರ್ಪಪವಾಗಿ ನಡೆದು ಅದು ಉಪಯೋಗಕ್ಕೆ ಲಭಿಸಿದ್ದಾದರೆ ಆಗ ಗೃಹೋಪಯೋಗಕ್ಕೂ ಸಾರ್ವಜನಿಕ ಕಟ್ಟಡಗಳಿಗೆ ವಾಯುಶಾಖ ಸಂಸ್ಕಾರ ಒದಗಿಸಲಿಕ್ಕೂ (ಸೌರತಾಪನ) ಈಗ ಪ್ರಪಂಚದಲ್ಲಿ ವೆಚ್ಚವಾಗುವ ಶಕ್ತಿಯ ಮೂರನೆಯ ಎರಡು ಅಂಶವನ್ನು ಸೌರಶಕ್ತಿ ಪೂರೈಸಬಹುದು.

ಮಹಾಗಾತ್ರದ ದರ್ಪಣಗಳನ್ನು ನಿಯೋಜಿಸಿ ಇಲ್ಲವೇ ಕೆಲವೊಂದು ರಾಸಾಯನಿಕ ಕ್ರಿಯೆಗಳನ್ನು ಸೌರಶಕ್ತಿಯಿಂದ ಪ್ರೇರಿಸಿ ಸೌರಶಕ್ತಿಯನ್ನು ಮಾನವೋಪಯೋಗಕ್ಕೆ ದೊರಕಿಸಬಹುದು. ಆದರೆ ಇವೆಲ್ಲ ಈಗ (1993) ಪ್ರಾಯೋಗಿಕ ಹಂತಗಳಲ್ಲಿವೆ. ವಾಣಿಜ್ಯ ಗಾತ್ರದಲ್ಲಿ ಯಶಸ್ವಿಯಾಗುವ ಹಂತ ಏರಿಲ್ಲ. ಉಷ್ಣವಲಯ ಪ್ರದೇಶಗಳಲ್ಲಿ ಸೌರತಾಪಕಗಳು (Solar heaters) ಬಳಕೆಗೆ ಬರುತ್ತಿವೆ.

ಇನ್ನೊಂದು ಯೋಜನೆ ತಾತ್ತ್ವಿಕ ಘಟ್ಟದಲ್ಲಿದೆ. ಗೊತ್ತಾದ ಎತ್ತರದಲ್ಲಿ ಭೂಮಿಯನ್ನು ಪರಿಭ್ರಮಿಸುವ ಕೃತಕ ಉಪಗ್ರಹ (ಅಥವಾ ಉಪಗ್ರಹಗಳ ಸರಣಿ), ವಾಯುಮಂಡಲದಿಂದ ಹೊರಗಿನ ಮತ್ತು ಹೆಚ್ಚು ಕಡಿಮೆ ಸದಾ ಹಗಲಾಗಿರುವ ಆ ವಲಯದಲ್ಲಿ, ಸೌರಶಕ್ತಿಯನ್ನು ಯಥೇಚ್ಛವಾಗಿ ಸಂಗ್ರಹಿಸಿ ಸೂಕ್ಷ್ಮತರಂಗಗಳ ಸಾಮರ್ಥ್ಯಯುತ ದೂಲವಾಗಿ ಭೂಮಿಯ ಮೇಲಿನ ನಿಯೋಜಿತ ಠಾಣೆಗಳಿಗೆ ಪ್ರೇಷಿಸಬೇಕು. ಈ ಠಾಣೆಗಳು ಸೂಕ್ಷ್ಮತರಂಗ ದೂಲಗಳನ್ನು ಸ್ವೀಕರಿಸಿ ಅವುಗಳಲ್ಲಿ ಅಡಕವಾಗಿರುವ ಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ ವಿತರಿಸಬೇಕು. ಪ್ರಪಂಚಾದ್ಯಂತ ಆಯಕಟ್ಟು ನೆಲೆಗಳಲ್ಲಿ ಇಂಥ ಠಾಣೆಗಳನ್ನು ಸ್ಥಾಪಿಸುವುದರ ಮೂಲಕ ಇಡೀ ಪ್ರಪಂಚಕ್ಕೆ ನಿರಂತರ, ಮಾಲಿನಶೂನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಶೋಷಿಸದ ಶಕ್ತಿಯನ್ನು ಪೂರೈಸಬಹುದೆಂದು ಈ ಯೋಜನೆ ನಂಬಿದೆ.

ನವತಂತ್ರವಿದ್ಯೆ? – ಇಪ್ಪತ್ಮೂರು

ಮಾಲಿನ್ಯಶೂನ್ಯ ಶಕ್ತಿಯನ್ನು ಮಿತವ್ಯಯದಲ್ಲಿ ಸಮೃದ್ಧವಾಗಿ ಉತ್ಪಾದಿಸುವ ದಿಶೆಯಲ್ಲಿ ಈಗ ವಿವಿಧ ಪ್ರಯೋಗಗಳು ನಡೆಯುತ್ತಿವೆ. ಹಲವು ಮಂದಿ ಸ್ವತಂತ್ರ ಚಿಂತನಶೀಲ ವಿಜ್ಞಾನಿಗಳು ತಂತ್ರವಿದ್ಯೆ ಈ ತನಕ ಅಭಿವರ್ಧಿಸಿ ಬಂದಿರುವ ಜಾಡೇ ದೋಷಪೂರಿತವಾದದ್ದು, 'ನಿಸರ್ಗ ದೋಚಿ ತಂತ್ರವಿದ್ಯೆ ಬೆಳೆಸು' ಎಂಬ ಅನಾರೋಗ್ಯಕರ ತತ್ತ್ವಾಧಾರಿತವಾದದ್ದು, ತತ್ಪರಿಣಾಮವಾಗಿ ಮಾನವಕುಲ ಇಂದಿನ ತೊಂದರೆಗಳನ್ನು ಎದುರಿಸಿ ಬಾಳಬೇಕಾಗಿದೆ, ಪರಿಸ್ಥಿತಿ ಹೀಗೆಯೇ ಮುಂದುವರಿದದ್ದಾದರೆ ಈ ತಂತ್ರವಿದ್ಯೆ ಖುದ್ದು ಮಾನವನನ್ನೇ ದಹಿಸಿಬಿಡಬಲ್ಲ ಭಸ್ಮಾಸುರಕರವಾಗದಿರದು. ಆದ್ದರಿಂದ ಈಗಿಂದೀಗಲೇ ತಂತ್ರವಿದ್ಯೆಯ ಆಧಾರ ತತ್ತ್ವವನ್ನೇ ಪುನರ್ವ್ಯಾಖಿಸಿ ಆ ವ್ಯಾಖ್ಯಾನುಸಾರ ನವತಂತ್ರವಿದ್ಯೆಯನ್ನು ರೂಪಿಸಿ ಅಭಿವರ್ಧಿಸಬೇಕು. ಇದೊಂದೇ ಶಾಶ್ವತ ಮಾನವಕಲ್ಯಾಣವನ್ನು ಸಾಧಿಸಬಲ್ಲದು ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ನಿಸರ್ಗದಿಂದ ಬೇರ್ಪಟ್ಟ ಪ್ರಾಣಿ ಅಲ್ಲ ಮಾನವ. ನಿಸರ್ಗದ ಶಿಶು. ಆದ್ದರಿಂದ ಆತ ನಿಸರ್ಗವನ್ನು ಸೂರೆ ಮಾಡಿ ಅಥವಾ ಕಬಳಿಸಿ ಬದುಕಲಾರ. ಬದಲು ನಿಸರ್ಗದೊಡನೆ ಹೊಂದಿಕೊಂಡು ಬದುಕಲು ಕಲಿಯಬೇಕು. ಆಗ ಮಾತ್ರ ಆತನ ಬಾಳು ಹಸನಾದೀತು. ಸಾರ್ಥಕವಾದೀತು ಎಂಬುದಾಗಿ ಇವರು ಹೇಳುತ್ತಾರೆ. ಇಂಥ ರಚನಾತ್ಮಕ (ವಿನಾಶಾತ್ಮಕ ಅಲ್ಲ) ತಂತ್ರವಿದ್ಯೆಗೆ ಸದ್ಯದಲ್ಲಿ ಬೇರೆ ಬೇರೆ ಹೆಸರುಗಳುಂಟು: ಪರ್ಯಾಯ, ನಿಮ್ನವೆಚ್ಚ, ಮಧ್ಯವರ್ತಿ, ಸ್ವಸಹಾಯ, ಪ್ರಕೃತಿಪರ, ಸಮುಚಿತ, ಸಮರ್ಪಕ ಇತ್ಯಾದಿ.

ಭಾರತದಂಥ ಅಭಿವೃದ್ಧಿಶೀಲ ('ಹಿಂದುಳಿದ' ಎನ್ನುವ ಪದದ ಗೌರವ ರೂಪ!) ದೇಶಕ್ಕೆ ಪರ್ಯಾಯ ತಂತ್ರವಿದ್ಯೆಯೇ ಯೋಗ್ಯವಾದದ್ದು ಎಂಬ ವಾದ ಉಂಟು. ಪಾಶ್ಚಾತ್ಯ ತಂತ್ರವಿದ್ಯೆ ಅಧಿಕ ಬಂಡವಾಳ, ಮಿತ ಕಾರ್ಮಿಕರು, ಫಾಸಿಲ್ ಇಂಧನ ಮತ್ತು ವ್ಯಾಪಕ ಸಂಪರ್ಕಜಾಲ ಇವನ್ನು ಆಧರಿಸಿ ಅಭಿವರ್ಧಿಸುವುದಾಗಿದೆ ಎಂದು ಹಿಂದೆ ವಿವರಿಸಿರುವುದು ಸರಿಯಷ್ಟೆ. ಭಾರತ ಕುರಿತಂತೆ ಈ ನಾಲ್ಕು ಕೂಡ ಋಣಾತ್ಮಕ ಗುಣಗಳಾಗುತ್ತವೆ; ಇದು ಆರ್ಥಿಕವಾಗಿ ಬಡದೇಶ; ಅಮಿತ ಕಾರ್ಮಿಕರಿಗೆ ಯೋಗ್ಯ ಸೇವಾವಕಾಶ ಒದಗಿಸುವುದು ಇಲ್ಲಿಯ ಸಮಸ್ಯೆ; ಫಾಸಿಲ್ ಇಂಧನಕ್ಕಾಗಿ ಇದು ಅನ್ಯ ರಾಷ್ಟ್ರಗಳನ್ನು ಆಶ್ರಯಿಸಬೇಕಾಗಿದೆ; ಸಾರಿಗೆ ಸಂಪರ್ಕಜಾಲ ಇಲ್ಲಿ ವ್ಯಾಪಕವಾಗಿ ಹಬ್ಬಿಲ್ಲ. ಆದ್ದರಿಂದ ಸ್ನಾಯುಶಕ್ತಿಯ ಜೊತೆಗೆ ಜಲ, ಜೈವಿಕ, ಸೌರ, ಮಾರುತ ಮುಂತಾದ ಫಾಸಿಲ್ ಇಂಧನಾವಲಂಬಿ ಅಲ್ಲದ ಶಕ್ತಿ ಮೂಲಗಳನ್ನು ಆಧರಿಸಿದ ಚಿಕ್ಕ ಪುಟ್ಟ ಯಂತ್ರ ಸ್ಥಾವರಗಳನ್ನು ದೇಶಾದ್ಯಂತ ಸ್ಥಾಪಿಸುವುದರ ಮೂಲಕ ಭಾರತ ಹೊಸ ಜಾಡು ತುಳಿಯಬಹುದೆಂದು ಸೂಚಿಸಲಾಗಿದೆ.

ಭವಿಷ್ಯ ಸಾಧ್ಯತೆಗಳು – ಇಪ್ಪತ್ನಾಲ್ಕು

ತಾಂತ್ರಸ್ಥಾಪಕರು ವಿನಾಶಪ್ರವಾಚಕರು, ಮಧ್ಯವರ್ತಿಗಳು: ಭವಿಷ್ಯ ವಿಜ್ಞಾನಿಗಳ ಪ್ರಕಾರ ಇಂದು ಮಾನವ ಅಖಂಡವಾದ ಒಂದೇ ಭೂಮಿಯಲ್ಲಿ ಬಾಳುತ್ತಿಲ್ಲ. ಬದಲು, ತಂತ್ರವಿದ್ಯೆಯ ಕಾರಣವಾಗಿ ಮೈದಳೆದಿರುವ ತಾಂತ್ರಗೋಳದಲ್ಲಿಯೂ ಆತನ ನೈಸರ್ಗಿಕ ನೆಲೆಯಾದ ಜೈವಿಕಗೋಳದಲ್ಲಿಯೂ ಏಕಕಾಲದಲ್ಲಿ ಬಾಳುತ್ತಿದ್ದಾನೆ.

ಯಂತ್ರ ಸ್ಥಾವರಗಳು, ಇವನ್ನು ಪೋಷಿಸುವ ಕೈಗಾರಿಕೆಗಳು ಇವೆಲ್ಲವೂ ಸೇರಿ ಉತ್ಪಾದಿಸುವ ಉಪಯುಕ್ತ ಹಾಗೂ ಮಲಿನ ವಸ್ತುಗಳು ಮುಂತಾದವು ಒಟ್ಟಾಗಿ ತಾಂತ್ರಗೋಳವನ್ನು ರೂಪಿಸುತ್ತವೆ. ಜೀವಿಗಳ ಉಗಮ ಹಾಗೂ ವಿಕಾಸಕ್ಕೆ ಕಾರಣವಾದ ಭೂ ತೊಗಟೆಯ ತೀರ ಮೇಲು ಭಾಗವೇ (ವಾಯುಮಂಡಲವನ್ನೂ ಒಳಗೊಂಡಂತೆ) ಜೈವಿಕಗೋಳ. ಈ ಸೀಮಿತ ಪ್ರದೇಶದಲ್ಲಿ ಸಸ್ಯ, ಪ್ರಾಣಿ ಹಾಗೂ ಅಜೈವಿಕ ಪದಾರ್ಥಗಳಾದ ನೆಲ ಜಲ ಮತ್ತು ವಾಯುಮಂಡಲ ಇವುಗಳ ನಡುವೆ ಅನ್ಯೋನ್ಯ ಅವಿಭಾಜ್ಯ ಸಂಬಂಧ ಹಾಗೂ ಅಂತರಕ್ರಿಯೆ ಬೆಸೆಯಲ್ಪಟ್ಟಿವೆ. ಸಸ್ಯ, ಪ್ರಾಣಿ ಮತ್ತು ಅಜೈವಿಕ ಪದಾರ್ಥಗಳು ಇವು ಜೈವಿಕಗೋಳದ ಮೂರು ಘಟಕಗಳು. ಇವುಗಳ ಪೈಕಿ ಯಾವುದೇ ಒಂದಕ್ಕೆ ಗಾಸಿ ಉಂಟಾದರೂ ಅದು ಇಡೀ ಜೈವಿಕಗೋಳದ ಮೇಲೆಯೇ ಮಾರಕ ಪರಿಣಾಮ ಬೀರದಿರದು. ಸದ್ಯದಲ್ಲಿ ತಾಂತ್ರಗೋಳ ಜೈವಿಕಗೋಳವನ್ನು ಅತಿಯಾಗಿ ಶೋಷಿಸಿ ಶಕ್ತಿಯನ್ನು ಚೂಷಿಸಿ ನೆಲ ಜಲ ಗಗನಗಳಿಗೆ ವ್ಯಾಪಿಸಿ ತ್ರಿವಿಕ್ರಮಾವತಾರ ತಳೆದಿದೆ. ಇದರಿಂದಾಗಿ ಮೂರು ದುಷ್ಪರಿಣಾಮಗಳು ತಲೆದೋರಿವೆ. ನೈಸರ್ಗಿಕ ಸಂಪನ್ಮೂಲಗಳ ನಾಶ, ಪರಿಸರ ಮಾಲಿನ್ಯ, ಬಹುಸಂಖ್ಯಾತರ ಬದುಕಿನ ಮಟ್ಟದಲ್ಲಿ ಕ್ರಮಶಃ ಕುಸಿತ.

ಇಂಥ ಪ್ರಪಂಚದ ಭವಿಷ್ಯವೇನು? ಭವಿಷ್ಯ ವಿಜ್ಞಾನಿಗಳ ಪೈಕಿ ಮುಖ್ಯವಾಗಿ ಎರಡು ವ್ಯಾಸೀಯ ವಿರುದ್ಧ (ಅಂದರೆ ಎದುರು ಬದಿರು) ಚಿಂತನಶೀಲರ ತಂಡಗಳನ್ನು ಗುರುತಿಸಬಹುದು: ತಾಂತ್ರ ಸ್ಥಾಪಕರು, ವಿನಾಶ ಪ್ರವಾಚಕರು.



ತಾಂತ್ರಸ್ಥಾಪಕರು – ತಂತ್ರವಿದ್ಯೆ ಮತ್ತು ಅದರ ಫಲಗಳ ಬಗ್ಗೆ ಅಪಾರ ವಿಶ್ವಾಸ ಇರುವಾತ, ಆಧುನಿಕ ಮಾನವನಿಗೆ ಬಲು ಪ್ರಿಯರಾದವರು. ಇವರು ಆಶಾವಾದಿಗಳು. ತಂತ್ರವಿದ್ಯೆ ಅಗಾಧವಾಗಿ ಸಾಧಿಸಿರುವ ಐಹಿಕಾಭ್ಯುದಯದಲ್ಲಿ ಅಪಾರ ಶ್ರದ್ಧೆ ಉಳ್ಳವರು. ಪ್ರಪಂಚದ ಐಹಿಕ ಸಂಪನ್ಮೂಲಗಳನ್ನು ಆಧರಿಸಿ ಅಭಿವರ್ಧಿಸಿರುವ ಆಧುನಿಕ ವಿಜ್ಞಾನ ಎಂದೂ ವಿಫಲವಾಗದು. ತನ್ನಲ್ಲಿರಬಹುದಾದ ದೋಷಗಳನ್ನು ಇದು ಚೆನ್ನಾಗಿ ಅರಿತು ಅವುಗಳ ನಿವಾರಣೆಗೆ ತಿದ್ದುಪಡಿಗಳನ್ನೂ ಉಪಾಯಗಳನ್ನೂ ಕೈಗೊಳ್ಳಬಲ್ಲದು ಎನ್ನುತ್ತಾರೆ ತಾಂತ್ರಸ್ಥಾಪಕರು. ಪ್ರಪಂಚದ ಐಹಿಕ ಸಂಪನ್ಮೂಲಗಳ ಬೆಳವಣಿಗೆ ಈ ತನಕ ನಡೆದು ಬಂದಿರುವಂತೆ ಮುಂದೆಯೂ ಬೆಳೆಯುತ್ತದೆ. ಭೂಮಿಯಲ್ಲಿ ವಿಪುಳವಾಗಿ ನಿಕ್ಷೇಪಗೊಂಡಿದ್ದು ಇನ್ನೂ ಮಾನವಾನ್ವೇಷಣೆಗೆ ಒಳಪಡದಿರುವ ಮೀಸಲು ಸಂಪನ್ಮೂಲಗಳು ಇಂತಿಷ್ಟೆ ಇವೆ ಎಂದು ನಿಖರವಾಗಿ ಹೇಳಲು ಸಾಧ್ಯವಾಗದು. ಇಂದು ನಿರುಪಯುಕ್ತ ವಸ್ತುಗಳೆಂದು ಪರಿಗಣಿತವಾದವು ತಂತ್ರವಿದ್ಯೆ ಅಭಿವರ್ಧಿಸಿದಂತೆ ನವಸಂಪನ್ಮೂಲಗಳೇ ಆಗಬಹುದು. ಇತಿಹಾಸಪೂರ್ವ ದಿನಗಳಲ್ಲಿ ಕಬ್ಬಿಣ ಮಾತು ತೀರ ಈಚಿನ (ಅಂದರೆ ಪ್ರಸಕ್ತ ಶತಮಾನದ) ದಿನಗಳಲ್ಲಿ ಅಲ್ಯೂಮಿನಿಯಮ್ ಲೋಹ ಖನಿಜಗಳು ಈ ತೆರನಾದ ಮಾರ್ಪಡಿಕೆಗಳಿಗೆ ನಿದರ್ಶನಗಳು. ಪ್ರಪಂಚದಲ್ಲಿ ಅತ್ಯಂತ ಸಮೃದ್ಧವಾಗಿ ಹರಡಿರುವ ಬಾಕ್ಸೈಟಿನ (ಅಲ್ಯೂಮಿನಿಯಮ್ಮಿನ ಖನಿಜ) ಅನ್ವೇಷಣೆ ಹಾಗೂ ಲೋಹ ಸಂಸ್ಕರಣೆ ಆದದ್ದು ತಂತ್ರವಿದ್ಯೆ ಇಪ್ಪತ್ತನೆಯ ಶತಮಾನದ ಮಜಲನ್ನು ತಲಪಿದ ಮೇಲೆಯೇ. ಇನ್ನಷ್ಟು ಎತ್ತರದ ಮಜಲುಗಳಿಗೆ ಏರಿದಂತೆ ಮರಳರಾಶಿಯಿಂದ ಸಂಪತ್ತನ್ನು ಹಿಂಡುವ ತಂತ್ರ ಸಿದ್ಧಿ ಕೈಗೂಡಲೂಬಹುದು. ಇತ್ತ ಲೋಹ ಪದಾರ್ಥಗಳ ಹರಕು ಮುರುಕುಗಳನ್ನು ಪುನಃ ಲೋಹ ಸಂಸ್ಕರಣೆಗೆ ಒಳಪಡಿಸಿ ಇನ್ನೊಮ್ಮೆ ಶುದ್ಧ ಲೋಹವನ್ನು ಉಪಯೋಗಕ್ಕೆ ಗಳಿಸುವ ಪುನಶ್ಚಕ್ರೀಕರಣ ಈಚೆಗೆ ಪ್ರಾರಂಭವಾಗಿ ಬಳಕೆಗೆ ಬರುತ್ತಿದೆ. ತಂತ್ರವಿದ್ಯೆ ಅಭಿವರ್ಧಿಸಿದಂತೆ ಪುನಶ್ಚಕ್ರೀಕರಣ ಪ್ರಕ್ರಿಯೆಯಲ್ಲಿಯೂ ಸಾಕಷ್ಟು ಸುಧಾರಣೆ ಮತ್ತು ಮಿತವ್ಯಯ ಸಾಧಿಸಲ್ಪಟ್ಟು ಅನೇಕ ಕ್ಷೇತ್ರಗಳಲ್ಲಿ ಕಚ್ಚಾ ಸಾಮಗ್ರಿಗಳ ಕೊರತೆ ನಿರ್ಮೂಲವಾಗಬಹುದು. ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, 1900ರಲ್ಲಿ, ಕೇವಲ ಶೇಕಡ 10ರಷ್ಟು ತಾಮ್ರವನ್ನು ಪುನಶ್ಚಕ್ರೀಕರಿಸುತ್ತಿದ್ದರು. 1970ಕ್ಕಾಗುವಾಗ ಇದು ಶೇಕಡ 35ಕ್ಕೆ ಏರಿತು. ಹಾಗೆಯೇ ಸೀಸದ ಪುನಶ್ಚಕ್ರೀಕರಣ 1910ರಲ್ಲಿ ಶೇಕಡ 8 ಇದ್ದದ್ದು 1970ರಲ್ಲಿ ಶೇಕಡ 40 ಆಗಿತ್ತು. ಅಲ್ಯೂಮಿನಿಯಮ್ಮಿನ ಲೋಹ ಸಂಸ್ಕರಣೆಗೆ ಬಳಕೆ ಆಗುತ್ತಿದ್ದ ಶಕ್ತಿ ಹೊಸ ಪ್ರಕ್ರಿಯೆಯ ಶೋಧನೆ ಆದ ಬಳಿಕ ಶೇಕಡ 30ರಷ್ಟು ಕಡಿಮೆ ಆಯಿತು. ಇದೇ ಉಳಿತಾಯ ಹಾಗೂ ಪುನಶ್ಚಕ್ರೀಕರಣ ತಂತ್ರಗಳು ವ್ಯಾಪಕವಾಗಿ ಬಳಕೆಗೆ ಬರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.



ಖನಿಜಗಳು ಮುಗಿದು ಹೋಗಿ ಭೂಮಿ ಬರಡಾಗುತ್ತಿದೆ ಎಂದು ಕೂಗುವವರಿಗೆ ತಾಂತ್ರಸ್ಥಾಪಕರ ಸಮಾಧಾನದ ಸಮಜಾಯಿಷಿ ಇದ್ದೆ ಇದೆ. ಭೂವೈಜ್ಞಾನಿಕಾನ್ವೇಷಣೆಗಳು ಇನ್ನಷ್ಟು ಪರಿಷ್ಕಾರವಾಗಿಯೂ ವ್ಯಾಪಕವಾಗಿಯೂ ಸಾಗಿದಂತೆ ಹೊಸ ಖನಿಜಮೂಲಗಳು ಪತ್ತೆ ಆಗಬಹುದು. ಆಣವಿಕ ಬೆಸೆತವನ್ನು ಮರಳಿನಂಥ ಬೇಕಾಬಿಟ್ಟಿ ಹರಡಿಹೋಗಿರುವ ಪದಾರ್ಥದ ಮೇಲೆ ಪ್ರಯೋಗಿಸಿದುದರ ಪರಿಣಾಮವಾಗಿ ಹೊಸ ಪದಾರ್ಥಗಳ ನಿರ್ಮಾಣ ಕೈಗೂಡಿದೆ. ಈ ಯಶಸ್ಸು ನವಸಾಧ್ಯತೆಗಳತ್ತ ಕೈ ತೋರಿಸುತ್ತಿದೆ. ಸಾಗರಾಂತರ್ಗತ ಸಂಪತ್ತು ಎಣಿಕೆಗೆ

ನಿಲುಕದಷ್ಟು ಸಮೃದ್ಧವಾಗಿದೆ. ಇದರಿಂದ 40 ಕೋಟಿ ಮೆಟ್ರಿಕ್ ಟನ್ ಖನಿಜಗಳನ್ನು ಹೆಚ್ಚು ಕಡಿಮೆ ಆಚಂದ್ರಾರ್ಕವಾಗಿ 'ಕೊಯ್ಲು' ಮಾಡಬಹುದೆಂದು ಸ್ಥೂಲ ವೈಜ್ಞಾನಿಕಾನ್ವೇಷಣೆಗಳಿಂದ ತಿಳಿದುಬಂದಿದೆ.

ಖನಿಜಮೂಲಗಳೇನೋ ಸರಿ. ಶಕ್ತಿ ಸಂಪಾದಿಸಲು ಏನು ಮಾಡೋಣವೆಂದು ಗೋಗರೆಯುವವರಿಗೂ ತಾಂತ್ರಸ್ಥಾಪಕರ ಭರವಸೆ ಉಂಟು. ಖನಿಜತೈಲ ಮತ್ತು ನೈಸರ್ಗಿಕಾನಿಲ ಸಂಗ್ರಹಣೆಗಳು ಈಗಿನ ವೆಚ್ಚದ ದರದಲ್ಲಿ ಇನ್ನು ಕೆಲವೇ ದಶಕಗಳ ತರುವಾಯ (ಸ್ಥೂಲವಾಗಿ 2020ರ ಸುಮಾರಿಗೆ) ಬತ್ತಿಹೋಗಬಹುದೆಂದು ನಿರೀಕ್ಷಿಸಲಾಗಿದೆ. ಕಲ್ಲಿದ್ದಲಿನ ಕೊರತೆ ಇಷ್ಟು ಶೀಘ್ರವಾಗಿ ತಲೆದೋರದು. ಇನ್ನೊಂದು ಶತಮಾನದ ತನಕ (2090ರ ಅಂದಾಜು) ಇದು ಉಪಯೋಗಕ್ಕೆ ಲಭಿಸಬಹುದು. ಆದರೆ ಈಗಾಗಲೇ ಪ್ರಾಯೋಗಿಕ ಸಾಫಲ್ಯಕ್ಕಿಂತಲೂ ಮೇಲಿನ ಸಾರ್ವತ್ರಿಕ ಉಪಯೋಗದ ಹಂತ ಏರಿರುವ ಬೈಜಿಕಾಗ್ನಿ ಅಗ್ಗವಾಗಿಯೂ ಮಾಲಿನ್ಯರಹಿತವಾಗಿಯೂ ಒದಗುವುದು ಸಾಧ್ಯವಿದೆ. ಜನ್ಮಕಾರಿ – ಕ್ರಿಯಾಕಾರಿಗಳು ಈ ದಿಸೆಯತ್ತ ಸಾಗುತ್ತಿವೆ.

ಇನ್ನು ಜನಸಂಖ್ಯೆ. ಅಭಿವರ್ಧಿತ ರಾಷ್ಟ್ರಗಳು ಸಂಖ್ಯಾವೃದ್ಧಿಯಲ್ಲಿ ಸ್ಥಿರತೆಯನ್ನು, ಅನೇಕ ರಾಷ್ಟ್ರಗಳು ಇಳಿತಾಯವನ್ನು ಕೂಡ, ಸಾಧಿಸಿವೆ. ತಂತ್ರವಿದ್ಯೆಯ ಕಾರಣವಾಗಿ ಜೀವನಮಟ್ಟ ಸುಧಾರಿಸಿರುವುದರಿಂದ ಕಂಡು ಬರುವ ಬದಲಾವಣೆ ಇದೆಂದು ತಾಂತ್ರಸ್ಥಾಪಕರು ಹೇಳುತ್ತಾರೆ. ಅಭಿವೃದ್ಧಿಶೀಲ ರಾಷ್ಟ್ರಗಳ ಜನಸಂಖ್ಯೆಯಲ್ಲಿ ಸದ್ಯ ವೃದ್ಧಿ ಕಂಡುಬರುತ್ತಿದೆ ನಿಜ. ಆದರೆ ತಂತ್ರವಿದ್ಯೆಯ ಫಲಗಳು ಆ ರಾಷ್ಟ್ರಗಳಿಗೂ ಎಟುಕಿದಂತೆ ಅವುಗಳಲ್ಲಿಯೂ ಜನಸಂಖ್ಯಾವೃದ್ಧಿದರ ಶೂನ್ಯವಾಗಿ ಜನಸಂಖ್ಯೆ ನಿರ್ದಿಷ್ಟ ಮಟ್ಟದಲ್ಲಿ ಸ್ಥಗಿತವಾಗುವುದು ಖಂಡಿತ.

ಪರಿಸರಮಾಲಿನ್ಯದ ಪ್ರಶ್ನೆಯಾದರೂ ಅಷ್ಟೆ. ಯಾವ ವಿಜ್ಞಾನ ಮತ್ತು ತಂತ್ರವಿದ್ಯೆಯ ಅನಗತ್ಯ ಉಪೋತ್ಪನ್ನವಾಗಿ ಪರಿಸರಮಾಲಿನ್ಯ ಮೈದಾಳಿದೆಯೋ ಅವೇ ವಿಜ್ಞಾನ ಮತ್ತು ತಂತ್ರವಿದ್ಯೆ ಇದನ್ನು ಯಶಸ್ವಿಯಾಗಿ ನಿವಾರಿಸಲು ಶಕ್ತವಾಗುತ್ತವೆ. ಆದ್ದರಿಂದ ಇದೊಂದು ಸಮಸ್ಯೆಯೇ ಅಲ್ಲ. ಸದ್ಯ ಚಿಂತನೆಯ ಹಂತದಲ್ಲಿರುವ ಸಂಲಯನಜ್ವಾಲೆ ವಾಸ್ತವ ಸಲಕರಣೆಯ ರೂಪಕ್ಕೆ ಇಳಿದದ್ದಾದರೆ ಇದು ಯಾವುದೇ ಪದಾರ್ಥವನ್ನೂ ಅದರ ಮೂಲಧಾತುವಿನ ಅಣುಗಳಾಗಿ ಒಡೆದು ಮತ್ತೆ ಬೇಕಾದಂತೆ ಸಂಲಯನಮಾಡಲು ನೆರವಾಗಬಹುದು.

ವಿಜ್ಞಾನ ಮತ್ತು ತಂತ್ರವಿದ್ಯೆಗೆ ಇರುವ ಸಾಮರ್ಥ್ಯವನ್ನು ವಿನಾಶ ಪ್ರವಾಚಕರು ತತ್ತ್ವಶಃ ಒಪ್ಪಿಕೊಳ್ಳುತ್ತಾರೆ. ಆದರೆ ಇವರು ಮಾನವನ ದೌರ್ಬಲ್ಯ ಮತ್ತು ಅದರ ಪರಿಣಾಮವಾಗಿ ಕಂಡುಬರುವ ಅತಿರೇಕ ವರ್ತನೆಯತ್ತ ನಮ್ಮ ಲಕ್ಷ್ಯ ಸೆಳೆಯುತ್ತಾರೆ. ಪ್ರಪಂಚದಾದ್ಯಂತ ಜನ ಬೇರೆ ಬೇರೆ ರಾಜಕೀಯ ವ್ಯವಸ್ಥೆಗಳ ಸುಪರ್ದಿಯಲ್ಲಿ ಹಂಚಿಹೋಗಿದ್ದಾರೆ. ರಾಷ್ಟ್ರಗಳ ಸಂಪನ್ಮೂಲಗಳೂ ತಂತ್ರವಿದ್ಯಾಸಿದ್ಧಿ ಸಾಧನೆಗಳೂ ಬೇರೆ ಬೇರೆ; ಎಂದೇ ಒಂದೊಂದು ರಾಷ್ಟ್ರದ ಇಷ್ಟಾನಿಷ್ಟಗಳೂ ಆಸೆ ಆಕಾಂಕ್ಷೆಗಳೂ ಬಗೆ ಬಗೆಯವಾಗಿವೆ. ಈ ತೆರನಾದ ಮಾನವೀಯ ಸಮಸ್ಯೆಗಳ ಜೊತೆಗೆ ಅತಿ ಸಂಕೀರ್ಣವಾಗಿ ಹೆಣೆದುಕೊಂಡಿರುವ ತಂತ್ರವಿದ್ಯೆಯ ದುಷ್ಪರಿಣಾಮಗಳನ್ನು ಕೇವಲ ಮಾನವನ ಒಳ್ಳೆಯತನಕ್ಕೆ ಅಥವಾ ಸಭ್ಯತೆಗೆ ಅರಿಕೆ ಸಲ್ಲಿಸುವುದರ ಮೂಲಕ ನಿವಾರಿಸಬಹುದೆಂಬುದು ಅತ್ಯಾಶಾವಾದವಾದೀತು. ಭವಿಷ್ಯ ದುರಂತಗಳ ಸಂಭಾವ್ಯತೆಯ ಬಗ್ಗೆ ಭಯ ಹುಟ್ಟಿಸುವುದರಿಂದಲೂ ಇದು ಕೈಗೂಡದು.

ಜನಸಂಖ್ಯೆಯಲ್ಲಿ ಕಂಡುಬರುತ್ತಿರುವ ಅಭೂತಪೂರ್ವ ಅತಿವೃದ್ಧಿಯೇ ವರ್ತಮಾನ ಜೀವನದ ಕಷ್ಟಕಾರ್ಪಣ್ಯಗಳ ಪ್ರಾರಂಭ ಬಿಂದು. ನಗರಗಳಿಗೆ ಇಂದು ವಲಸೆಹೋಗಿ ಬೀಳುತ್ತಿರುವ ನಿರ್ಗತಿಕ ಜನರ ಪ್ರವಾಹ, ಅವರ ಸಂಖ್ಯೆಯಲ್ಲಾಗಲೀ ಅವರು ಅನುಭವಿಸುವ ಸಂಕಷ್ಟದಲ್ಲಾಗಲೀ ಹತ್ತೊಂಬತ್ತನೆಯ ಶತಮಾನದ ಇಂಥದೇ ಪ್ರವಾಹದೊಡನೆ ಒಂದಿಷ್ಟೂ ಸಾದೃಶ್ಯ ಹೊಂದಿಲ್ಲ. ಈ ಮಹಾ ಜನಸ್ತೋಮ ಅತಿ ಕ್ಷಿಪ್ರವಾಗಿ ವೃದ್ಧಿಗೊಂಡು ಆಹಾರ ಮತ್ತು ನೀರು, ಆರೋಗ್ಯ ಮತ್ತು ನೈರ್ಮಲ್ಯ, ಸ್ಥಳ ಮತ್ತು ಅವಕಾಶ ಒಂದೊಂದರಲ್ಲೂ ದಂಡೆಮೀರಿ ಹರಿದು ಇಡೀ ಪ್ರಪಂಚವನ್ನೇ ದೊಡ್ಡ ರೊಚ್ಚೆಗುಂಡಿಯಾಗಿ ಮಾಡದಿರದು. ಈ ಮಂದಿಯ ಭಗ್ನ ಆಶೋತ್ತರಗಳು ಖಂಡಿತ ಪ್ರಪಂಚದ ಏಳ್ಗೆಗೆ ಸಹಕಾರಿಗಳಾಗವು. ಇಂಥವರ ಬಾಳಿಗೆ ನೆಮ್ಮದಿ ಕೊಡಲು ವ್ಯಾಪಕ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿ ರೂಢಿಸಬೇಕಾಗುತ್ತದೆ. ಇವು ಅತಿ ಪ್ರಸರಣಕ್ಕೆ ಕಾರಣವಾಗಿ ಹಿಂದೆಂದೂ ಕಂಡುಬರದಿದ್ದಂಥ ತೀವ್ರ ಸಮಸ್ಯೆಗಳನ್ನು ಮಾನವ ಎದುರಿಸಬೇಕಾಗುತ್ತದೆ. ಸನ್ನಿವೇಶ ವಿಕೋಪ ಸ್ಥಿತಿಯನ್ನೈದಿದಾಗ ಲಭ್ಯ ಪದಾರ್ಥಗಳು ಅತ್ಯಲ್ಪವಾಗಿರುತ್ತವೆ. ಆದರೆ ಅವನ್ನು ಬೇಡುವ ಕೈಬಾಯಿಗಳು ಅಮಿತವಾಗಿರುತ್ತವೆ. ಇಂಥಲ್ಲಿ ವ್ಯವಸ್ಥಿತ ವಿತರಣೆಯ ಎಲ್ಲ ಪ್ರಯತ್ನಗಳೂ ಕುಸಿದು ಬೀಳುವುದು ಖಾತ್ರಿ. ಯುದ್ಧ ಕ್ಷಾಮ ಪಿಡುಗು ಮುಂತಾದವು ಆಗ ಸರ್ವವ್ಯಾಪಿ

ಆಗಬಹುದು. ಆಫ್ರಿಕಾ ಖಂಡದ ಹಲವಾರು ಆಂತರಿಕ ಪ್ರದೇಶಗಳಲ್ಲಿ ಈಗಾಗಲೇ ಈ ದುರ್ಲಕ್ಷಣಗಳು ಪ್ರಕಟವಾಗಿವೆ. ಇವು ಸಾಕ್ಷಾತ್ ಬೈಜಿಕ ಯುದ್ಧಕ್ಕೆ ಎಡೆ ಮಾಡಿಕೊಡಬಹುದು. ಅದರಲ್ಲಿ ಮಡಿಯದೇ ಉಳಿಯುವವರೂ ಅವರ ಪೀಳಿಗೆಯವರೂ ವಿಕಿರಣದಿಂದ ಉಂಟಾಗುವ ಗಾಸಿಗಳ ಪರಿಣಾಮವಾಗಿ ಜೀವಂತ ನರಕ ಅನುಭವಿಸುತ್ತ ನವೆದು ನವೆದು ಸಾಯಬೇಕಾದೀತು.

ಭವಿಷ್ಯ ಕುರಿತಂತೆ ತಾಂತ್ರಸ್ಥಾಪಕರ ಅತ್ಯಾಶಾವಾದವನ್ನೂ ವಿನಾಶಪ್ರವಾಚಕರ ಅತಿ ನಿರಾಶಾವಾದವನ್ನೂ ಬದಿಗೊತ್ತಿ ಮಧ್ಯವರ್ತಿಯಾದ ಚಿಂತನೆಯನ್ನು ಕೆಲವು ಪರಿಣತರು ಹರಿಸಿದ್ದುಂಟು. ಮಧ್ಯವರ್ತಿಗಳ ಪ್ರಕಾರ ಮೇಲೆ ವಿಶ್ಲೇಷಿಸಿದ ಅತಿವಾದಿಗಳಿಬ್ಬರ ವಾದಗಳಲ್ಲಿಯೂ ಹುರುಳಿದೆ. ಆದರೆ ಇಬ್ಬರೂ ತಮ್ಮ ನಿಲವನ್ನು ವೃಥಾ ಉತ್ಪ್ರೇಕ್ಷಿಸಿದ್ದಾರೆ. ವಿನಾಶದ ಪ್ರಪಾತದೆಡೆಗೆ ಪ್ರಪಂಚ ಹೋಗದಂತೆ ತಡೆಯಬಲ್ಲ ವಿವೇಕ ಮಾನವನಲ್ಲಿ ಖಂಡಿತ ಇದೆ. ಈಗ ಪ್ರಪಂಚದ ಶೇಕಡ 75 ಭಾಗ ಸಂಪತ್ತು ಶೇಕಡ 25 ಮಂದಿ ಜನರಿಗೆ ಮಾತ್ರ ಲಭ್ಯವಾಗಿದ್ದು ಇದರಿಂದ ಉಂಟಾಗಿರುವ ಬದುಕಿನ ಏರುಪೇರನ್ನು ಮಾನವ ಖಂಡಿತ ಸರಿಪಡಿಸಿ ಸರ್ವರಿಗೆ ಸಮಪಾಲು ಸುಖಬಾಳು ಇವನ್ನು ಸಾಧಿಸುತ್ತಾನೆ, ಪರಿಸ್ಥಿತಿ ಹೀಗೆ ಮಾಡಲು ಅವನನ್ನು ಒತ್ತಾಯಿಸುತ್ತದೆ ಎನ್ನುತ್ತಾರೆ ಮಧ್ಯವರ್ತಿಗಳು. ಸರ್ವೇಜನಾಸ್ಸುಖಿನೋಭವಂತು ಎಂಬ ಆದರ್ಶವನ್ನು ಕಾರ್ಯಗತಗೊಳಿಸುವುದರಲ್ಲಿ ಇವರಿಗೆ ಅಪಾರ ಭರವಸೆ ಉಂಟು.

ನಾಲ್ಕನೆಯ ಕ್ರಾಂತಿ. ಜೀವಿಪ್ರಪಂಚದ ಎರಡು ಮುಖ್ಯ ವಿಭಾಗಗಳು ಸಸ್ಯಲೋಕ, ಪ್ರಾಣಿಲೋಕ ಮತ್ತು ಪ್ರಾಣಿಲೋಕದ ಒಬ್ಬ ಸದಸ್ಯ ಮಾನವ. ಮಾನವನನ್ನು ಇತರ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿ ಕಾಣಿಸುವ ಹಲವಾರು ಲಕ್ಷಣಗಳ ಪೈಕಿ ಒಂದೆಂದರೆ ಸಂವಹನತೆಯ ಸಾಮರ್ಥ್ಯ. ಸಂವಹನತಾಮಾಧ್ಯಮದ ಅಭಿವರ್ಧನೆಯ ಹಾದಿಯಲ್ಲಿ ಮೊದಲ ಕ್ರಾಂತಿ ಲಿಪಿ ಶೋಧನೆ. ಕ್ರಿ.ಪೂ ಸುಮಾರು 3000ದ ಅಂದಾಜಿಗೆ ಇದು ಸಿದ್ಧಿಸಿರಬಹುದೆಂದು ಅಂದಾಜು. ಆ ವೇಳೆಗೆ ವ್ಯವಸ್ಥಿತ ಕೃಷಿ, ಜೀವನದ ಅವಿಭಾಜ್ಯ ಅಂಗವಾಗಿತ್ತು. ಅಂದಿನ ಪಟ್ಟಣಗಳಲ್ಲಿ ಒಟ್ಟಾಗಿ ಬಾಳುತ್ತಿದ್ದು ಸಾಕಷ್ಟು ವಿರಾಮ ಗಳಿಸಿದ್ದ ಜನ ಬರವಣಿಗೆಯನ್ನು ಶೋಧಿಸಿರಬೇಕು. ಬರವಣಿಗೆ ಇಲ್ಲದೆಯೂ ನಾಗರಿಕತೆ ಅಭಿವರ್ಧಿಸುವುದು ಸಾಧ್ಯ. ಆದರೆ ಇದರ ಗತಿ ಅತಿ ಮಂದ. ಇಂಥ ನಾಗರಿಕತೆ ಸಂಕೀರ್ಣ ಸಂಶೋಧನೆಗಳನ್ನೇನೂ ನಡೆಸದು. ಮಾತು ಮತ್ತು ನೆನಪು ಮಾತ್ರ ಜ್ಞಾನವನ್ನು ಯಾವ ಎತ್ತರಕ್ಕೆ ಒಯ್ಯಬಲ್ಲವೋ ಅಲ್ಲಿವರೆಗೆ ಮಾತ್ರ ಈ ನಾಗರಿಕತೆ ತನ್ನ ಆಸೆ ಆಕಾಂಕ್ಷೆಗಳನ್ನು ಚಾಚಬಲ್ಲದು. ಪೆರುವಿನಲ್ಲಿ ಕೊನೆಗೊಂಡ ಇನ್ಕಾ ನಾಗರಿಕತೆ (ಕ್ರಿ.ಶ ಹದಿನೈದನೆಯ ಶತಮಾನ) ಇದಕ್ಕೊಂದು ನಿದರ್ಶನ. ಮಾತು ಬರವಣಿಗೆಯಾಗಿ ಘನೀಭವಿಸಿದೊಡನೆ ಜ್ಞಾನ ಸಂವಹನತೆಗೊಂದು ಯೋಗ್ಯ ಮಾಧ್ಯಮ ಲಭಿಸಿದಂತಾಯಿತು. ಹೀಗಿದ್ದರೂ ಬರವಣಿಗೆ ಸುಲಭ ಕ್ರಿಯೆ ಏನೂ ಆಗಿರಲಿಲ್ಲ. ಪುಸ್ತಕಗಳ ಪ್ರಕಟಣೆ ಮಹಾ ಸಾಹಸವೇ ಆಗಿತ್ತು – ತಾಳ ಯಾ ಭೂರ್ಜಪತ್ರದ, ಇಲ್ಲವೇ ಕಡತಿಯ (ಚರ್ಮಕಾಗದ) ಇಲ್ಲವೇ ಲೋಹಪತ್ರದ ಮೇಲೆ ಕೈಬರಹದಿಂದ ಲಿಖಿಸುವುದೂ ಹೀಗೆ ಬರೆದ ಪತ್ರಗಳನ್ನು ಸಂಗ್ರಹಿಸಿಟ್ಟು ಆಸಕ್ತ ಅಧ್ಯಯನಶೀಲರಿಗೆ ಒದಗಿಸುವುದೂ ವಿಶೇಷ ಪರಿಶ್ರಮ ಬೇಡುವ ಕ್ರಿಯೆಗಳಾಗಿದ್ದುವು. ಹೀಗಾಗಿ ಜ್ಞಾನ ಸಂವಹನತೆ ಮಂದಗಾಮಿಯಾಗಿತ್ತು. ಅಶೋಕನ ಚಕ್ರಾಧಿಪತ್ಯದಂಥ ನಾಗರಿಕತೆಯ ಮಟ್ಟವನ್ನು ಮಾನವ ಎರಡನೆಯ ಕ್ರಾಂತಿಯ ಫಲವಾಗಿ ತಲಪಬಲ್ಲವನಾಗಿದ್ದ.

ಮೂರನೆಯ ಕ್ರಾಂತಿ ಸಂಭವಿಸಿದ್ದು ಹದಿನೈದನೆಯ ಶತಮಾನದಲ್ಲಿ: ಯಾಂತ್ರಿಕವಾಗಿ (ಅಂದರೆ ಲೆಕ್ಕಣಿಕೆ ಹಿಡಿದು ಬಿಡಿಬಿಡಿಯಾಗಿ ಬರೆಯುವಾತನ ನೆರವಿಲ್ಲದೆ) ಬರವಣಿಗೆಯನ್ನು ಮುದ್ರಿಸುವುದು ಆಗ ಸಿದ್ಧಿಸಿತು. ಮುದ್ರಣ ಯಂತ್ರ ಅತಿ ಕ್ಷಿಪ್ರವಾಗಿ ಸಾವಿರಾರು ಪುಟಗಳನ್ನೇ ಮುದ್ರಿಸಬಲ್ಲದಾಗಿತ್ತು. ಹೀಗಾಗಿ ಜ್ಞಾನ ಸಂವಹನತೆ ಪ್ರಪಂಚದಾದ್ಯಂತ ತ್ವರಿತವಾಯಿತು. ಜ್ಞಾನದಿಂದ ಬಲ, ಬಲದಿಂದ ಅಧಿಕ ಜ್ಞಾನ ಒದಗುತ್ತಿದ್ದುದರಿಂದ ಮುದ್ರಣಕ್ರಾಂತಿ ಸರ್ವವ್ಯಾಪಿ ಹಾಗೂ ಸರ್ವಗ್ರಾಹಿ ಆಯಿತು. ಆಧುನಿಕ ಯುಗದ ಒಳ್ಳೆಯವು ಕೆಟ್ಟವು ಎಲ್ಲವೂ ಒಂದು ರೀತಿಯಲ್ಲಿ ಮುದ್ರಣ ಕ್ರಾಂತಿಯ ಫಲಗಳು. ನಗರಗಳ ಅತಿಲಂಬನೆ ಹಾಗೂ ತತ್ಪರಿಣಾಮವಾದ ಬದುಕಿನ ಮಟ್ಟದ ಕುಸಿತವನ್ನು ಭವಿಷ್ಯದಲ್ಲಿ ಸರಿಪಡಿಸಬೇಕಾದರೆ ನಾಲ್ಕನೆಯ ಕ್ರಾಂತಿ ಸಂಭವಿಸುವುದು ಅಗತ್ಯ. ಅದಕ್ಕೀಗ ಕಾಲ ಮಾಗಿದೆ ಎಂಬುದಾಗಿ ಭವಿಷ್ಯ ವಿಜ್ಞಾನಿಗಳು ಹೇಳುತ್ತಿದ್ದಾರೆ. ಅದೇ ಎಲೆಕ್ಟ್ರಾನಿಕ್ ಕ್ರಾಂತಿ.

ಎಲ್ಕ್ಟ್ರಾನಿಕ್ ಕ್ರಾಂತಿ ಈಗಾಗಲೇ ಆರಂಭವಾಗಿ ಹಲವಾರು ವರ್ಷಗಳು ಸಂದಿವೆ. ನಮ್ಮ ದೈನಂದಿನ ಕ್ರಿಯಾಕಲಾಪಗಳು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಇಂದು (1993) ಎಲೆಕ್ಟ್ರಾನಿಕ್ ಕ್ರಾಂತಿಯಿಂದ ಪ್ರಭಾವಿತವಾಗಿವೆ. ದೂರದರ್ಶನ, ಮುದ್ರಣ, ಗಣಕ ಕೇವಲ ಮೂರು ಸುಲಭ ಗೋಚರ ನಿದರ್ಶನಗಳು. ಇಂತಿದ್ದರೂ ಈ ಕ್ರಾಂತಿ ಇನ್ನೂ ಏರು

ಮಜಲಿನಲ್ಲಿಯೇ ಇದೆ. ಇದರ ಪೂರ್ಣ ಫಲ ಮಾನವನಿಗೆ ಒದಗಲು ಹಲವಾರು ದಶಕಗಳೇ ಬೇಕಾಗಬಹುದು ಎನ್ನುತ್ತಾರೆ ಆ ಕ್ಷೇತ್ರದ ಮುಂಚೂಣಿಯಲ್ಲಿರುವ ಸಂಶೋಧಕರು ಮತ್ತು ಪರಿಣತರು. ಎಲೆಕ್ಟ್ರಾನಿಕ್ ಕ್ರಾಂತಿ ವ್ಯಾಪಕವಾಗಿ ಪಸರಿಸಿದಾಗ ಜನರಿಗೆ ಅವಶ್ಯವಾಗುವ ಜ್ಞಾನ ಬೇಕಾದಲ್ಲಿ ಬೇಕಾದಾಗ ದೊರೆಯುತ್ತದೆ. ಪರಿಣಾಮವಾಗಿ ಜನ ವೃಥಾ ನಗರಗಳಲ್ಲಿ ದಟ್ಟಯಿಸುವುದು ಅನವಶ್ಯವಾಗುತ್ತದೆ. ಆಗ ಅವರು ದೂರ ದೂರ ಹರಡಿ ಹೋಗುತ್ತಾರೆ. ಸಾರಿಗೆ ಸಂಪರ್ಕಗಳು ಈಗಿನ ಮಟ್ಟದಲ್ಲಿ ಬೇಕಾಗವು. ಒಟ್ಟಾರೆ ಜನಜೀವನದ ಗುಣಮಟ್ಟ ಸುಧಾರಿಸುವುದು. ಎಲೆಕ್ಟ್ರಾನಿಕ್ ಕ್ರಾಂತಿ ನಾಗರಿಕತೆಗೆ ಹೊಸ ತಿರುವನ್ನೂ ಆಯಾಮವನ್ನೂ ಕೊಡಬಲ್ಲದು.

ಆಕಾಶ ಯೋಜನೆ: ಸೀಮಿತ ನೆಲ ಪರಿಸರ ಸಾಕಾಗದಾಗ ಮಾನವ ಹೊಸ ಹಸುರುಗಳನ್ನು ಅರಸಿ ಭೂಮಿಯ ಉದ್ದಗಲ ವ್ಯಾಪಿಸಿದ. ಅಮೆರಿಕ ಖಂಡಗಳ ಆವಿಷ್ಕಾರ ಹೀಗಾಯಿತು. ಈಗ ಭೂಮಿಯೇ ಆತನ ಚಟುವಟಿಕೆಗಳಿಗೆ ಸಾಕಾಗದಿರುವಂಥ ಸನ್ನಿವೇಶ ತಲೆದೋರಿದೆ. ಮೇರೆ ಇರದ ಗಗನದತ್ತ ಮಾನವ ನಾಗರಿಕತೆಯ ವಿಸ್ತರಣೆ ಆಗುವುದರ ಸಾಧ್ಯತೆಗಳನ್ನು ಭವಿಷ್ಯ ವಿಜ್ಞಾನಿಗಳು ಈಗ ಯೋಚಿಸುತ್ತಿದ್ದಾರೆ. ಇಂಥ ಎಲ್ಲ ಮೊದಲ ಭಾವನೆಗಳೂ ಹೆಪ್ಪುಗಟ್ಟುವುದು ಚಂದ್ರನ ಸುತ್ತ.

ಆಕಾಶಯಾನ ಮಾಡಲು ಮಾನವನಿಗೆ ಸುಲಭವಾಗಿ ಒದಗುವ ಪ್ರಥಮ ನೈಸರ್ಗಿಕ ನಿಲ್ದಾಣ ಚಂದ್ರ. ಚಂದ್ರಲೋಕದಲ್ಲಿ ಸ್ಥಾಪಿಸಲಾಗುವ ಯಂತ್ರ ಸ್ಥಾವರಗಳು ಅಲ್ಲಿ ಯಥೇಚ್ಛವಾಗಿಯೂ ತೀಕ್ಷ್ಣವಾಗಿಯೂ (ಚಂದ್ರನಲ್ಲಿ ವಾಯುಮಂಡಲವಿಲ್ಲ) ಲಭಿಸುವ ಸೌರಶಕ್ತಿಯನ್ನು ಬಳಸುತ್ತವೆ. ಹೀಗಾಗಿ ಪರಿಸರಮಾಲಿನ್ಯವಾಗಲಿ ಶಕ್ತಿ ಬಿಕ್ಕಟ್ಟಾಗಲಿ ಎಂದೂ ತಲೆದೋರವು. ಭೂಮಿಯಲ್ಲಿ ಸಾಧಿಸಲಾಗದ ನಿರ್ವಾತ ಚಂದ್ರನಲ್ಲಿ ಸಹಜಸ್ಥಿತಿಯಾದ್ದರಿಂದ ಲೋಹಗಳ ಎರಕ, ಬೆಸೆತ, ರೂಪಣೆ ಎಲ್ಲವೂ ಅಲ್ಲಿ ಅತಿ ಸುಲಭ ಕ್ರಿಯೆಗಳಾಗಬಹುದು. ವಾಸ್ತವವಾಗಿ ಚಾಂದ್ರತಂತ್ರ ವಿದ್ಯೆ ಎಂಬ ನೂತನ ಅಧ್ಯಯನ ವಿಭಾಗವನ್ನು ಆಗ ಉಜ್ಜುಗಿಸಬೇಕಾಗುತ್ತದೆ. ಹೀಗೆ ಕಡಿಮೆ ವೆಚ್ಚದಿಂದಲೂ ಹಗುರ ದುಡಿಮೆಯಿಂದಲೂ ತಯಾರಿಸಲಾಗುವ ಉತ್ಪನ್ನಗಳನ್ನು ಭೂಮಿಗೆ ತಂದು ಬಳಸುವುದು, ಸಾರಿಗೆಯ ಖರ್ಚನ್ನು ಭರಿಸಿಯೂ ಲಾಭದಾಯಕವಾದೀತೆಂದು ವಿಜ್ಞಾನಿಗಳು ಎಣಿಕೆ ಹಾಕಿರುವರು. ಭೂಮಿಯ ಎಡೆಬಿಡದ ಸಂಗಾತಿಯಾದ ಚಂದ್ರ ಈ ತೆರನಾಗಿ ಮಾನವ ವಿಕಾಸದ ಹಾದಿಯಲ್ಲಿ ನವಕ್ರಿಯಾತ್ಮಕ ಪಾತ್ರ ನಿರ್ವಹಿಸುವ ದಿನ ಪ್ರಸಕ್ತ ಶತಮಾನ ನೇಪಥ್ಯಕ್ಕೆ ನಿರ್ಗಮಿಸುವ ಮುನ್ನವೇ ಮೂಡಬಹುದೆಂದು ವಿಜ್ಞಾನಿಗಳು ನಂಬಿದ್ದಾರೆ.

ಚಂದ್ರನಲ್ಲಿ ಯಂತ್ರಸ್ಥಾವರಗಳನ್ನು ಸ್ಥಾಪಿಸಿ ಪ್ರವರ್ತಿಸಲು ಚಾಂದ್ರ ತಂತ್ರವಿದ್ಯಾವಿದರ ತಂಡವೇ ಅಲ್ಲಿ ನೆಲಸುವುದು ಅಗತ್ಯವಾಗುತ್ತದೆ. ಇವರ ಧೃತಿ ಹಿರಿಯಮಟ್ಟದಲ್ಲಿದ್ದು ದುಡಿಮೆ ಸಾರ್ಥಕವಾಗಬೇಕಾದರೆ ಕುಟುಂಬ ಜೀವನ, ನಾಗರಿಕ ಸೌಕರ್ಯ, ಭೂಮಿಗೆ ಹಿಂತಿರುಗುವ ಅವಕಾಶ ಎಲ್ಲವನ್ನೂ ಇವರಿಗೆ ಒದಗಿಸಿಕೊಡಬೇಕು. ಅಂದರೆ ಚಂದ್ರನಲ್ಲಿ ಮಾನವ ತಾಂಡೆಗಳನ್ನು ಸ್ಥಾಪಿಸಬೇಕೆಂದಾಯಿತು. ಇವು ಭೂಮಿಯ ಮೇಲಿನ ತಾಂಡೆಗಳಂತಲ್ಲದೆ ಅಲ್ಲಿಯ ನೆಲದಡಿಯಲ್ಲಿರುವುವು. ಆ ನೆಲಮಾಳಿಗೆಯ ಬಡಾವಣೆಗಳು ಬಾಹ್ಯ ಪರಿಸರಕ್ಕೆ ಪೂರ್ಣ ವಾಯುಬಂಧಿತವಾಗಿರುತ್ತವೆ. ಒಳಗಡೆ ಭೂಮಿಯ ಸಹಜ ಪರಿಸರ ಇರುವುದು. ಯುಕ್ತವಾಗಿ ಮೇಳೈಸಿದ ಕನ್ನಡಿಗಳ ನೆರವಿನಿಂದ ಬೆಳಕು ಬಿಸಿಲುಗಳನ್ನು ಒಳಗಡೆಗೆ ಪ್ರವೇಶಗೊಳಿಸಲಾಗುವುದು. ಭೂಮಿಯಿಂದ ಮೊದಲ ಬಾರಿಗೆ ಒಯ್ದ ಹೈಡ್ರೋಜನ್ನನ್ನೂ ಚಂದ್ರನಲ್ಲಿ ದೊರೆಯುವ ಖನಿಜಗಳಿಂದ ಸಂಸ್ಕರಿಸಿ ಪಡೆದ ಆಕ್ಸಿಜನ್ನನ್ನೂ ರಾಸಾಯನಿಕವಾಗಿ ಸಂಯೋಗಿಸಿ ನೀರನ್ನು ತಯಾರಿಸಿ ಪೂರೈಸಲಾಗುವುದು. ಇದೇ ಆಕ್ಸಿಜನ್‌ಯುತ ವಾಯುಮಂಡಲ ಆ ಬಡಾವಣೆಯ ಜನರಿಗೆ ಉಸಿರಾಡಲು ವಾಯುವನ್ನು ಕೂಡ ಒದಗಿಸುವುದು. ಮಲಿನವಾಯು, ನೀರು, ತ್ಯಾಜ್ಯವಸ್ತು ಮೊದಲಾದವನ್ನು ರಾಸಾಯನಿಕವಾಗಿ ವಿಭಜಿಸಿ ಘಟಕಗಳಾಗಿ ಒಡೆದು ಉಪಯುಕ್ತ ವಸ್ತುಗಳಾಗಿ ಪುನಸ್ಸಂಯೋಜಿಸಿ ಮರುಬಳಸಲಾಗುವುದು. ವಾಯು, ನೀರು, ಬಿಸಿಲು ವಿಪುಳವಾಗಿ ದೊರೆತ ಬಳಿಕ ಸಸ್ಯ ಮತ್ತು ಪ್ರಾಣಿಸಂಪತ್ತನ್ನು ಕೃಷಿಮಾಡಿ ಆಹಾರ ಪದಾರ್ಥಗಳನ್ನು ಅಲ್ಲಿಯೇ ತಯಾರಿಸಿಕೊಳ್ಳುವುದು ಮುಂದಿನ ಹೆಜ್ಜೆ.

ಇದು ಹೇಗೆಯೇ ಇರಲಿ. ಚಂದ್ರನಲ್ಲಿ ಶಾಶ್ವತ ನಗರಗಳನ್ನು ಕಟ್ಟಿ ಚಾಂದ್ರಸಂಸ್ಕೃತಿಯನ್ನು ಅಭಿವರ್ಧಿಸುವುದರತ್ತ ವಿಜ್ಞಾನಿಗಳ ಒಲವು ಮೂಡಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾದವೆಂದರೆ ಅಲ್ಲಿಯ ಶಕ್ತಿ ಬಿಕ್ಕಟ್ಟು ಮತ್ತು ನಿಮ್ನ ಗುರುತ್ವ. ಚಂದ್ರನಲ್ಲಿ ಹಗಲು ಇರುಳು ತಲಾ ಹದಿನಾಲ್ಕು ಭೂದಿವಸಗಳಾಗುವುದರಿಂದ ಯಾವುದೇ ನಗರಕ್ಕೆ ಅದು ಎದುರಿಸುವ ದೀರ್ಘರಾತ್ರಿಯ ವೇಳೆ ಸೌರಶಕ್ತಿಯನ್ನು ಪೂರೈಕೆ ಮಾಡಲು ಜಟಿಲ ತಂತ್ರವಿದ್ಯೆಯನ್ನು ಆಶ್ರಯಿಸಬೇಕಾಗುತ್ತದೆ. ಇದರ ಮೇಲೆ ಹೂಡುವ ಬಂಡವಾಳ ಲಾಭದಾಯವಾಗದು. ಚಂದ್ರನ ನಿಮ್ನ ಗುರುತ್ವ

ಮಾನವಸಂತತಿಯ ವಿಕಾಸಕ್ಕೆ ಶ್ರೇಯಸ್ಕರವಲ್ಲ. ಚಂದ್ರ ಏನಿದ್ದರೂ ಆಕಾಶದಲ್ಲಿ ನಮ್ಮ ನೆರೆ ಒಕ್ಕಲು, ಸೌರವ್ಯೂಹದ ಯಾತ್ರೆಗೆ ಸುಲಭವಾಗಿ ಒದಗುವ ತರಬೇತಿ ಕೇಂದ್ರ, ಆಕಾಶ ವಸಾಹತುಗಳನ್ನು ನಿರ್ಮಿಸಲು ಕಚ್ಚಾ ಸಾಮಗ್ರಿಯನ್ನು ನೀಡಬಲ್ಲ ಗನಿ – ಅಷ್ಟು ಮಾತ್ರ.

ಆಕಾಶದಲ್ಲಿ ಮಾನವ ವಸಾಹತುಗಳನ್ನು ಕಟ್ಟುವುದರತ್ತ ಚಿಂತನೆ ಹರಿಯುತ್ತಿದೆ. ಅಮೆರಿಕದ ಪ್ರಸಿದ್ಧ ಭೌತವಿಜ್ಞಾನಿ ಗೆರಾರ್ಡ್ ಕೆ. ಓನ್ಯೆಲ್ ಎಂಬವರು ಇಂಥ ನಿರ್ಮಾಣ ಸಾಧ್ಯವಾಗಬಹುದು ಎನ್ನುತ್ತಾರೆ. ಪ್ರಚಲಿತ ತಂತ್ರವಿದ್ಯೆಯ ಸಿದ್ಧಿಗಳನ್ನೂ ವಿಭವಗಳನ್ನೂ ಗಮನಿಸಿರುವ ಇವರ ಪ್ರಕಾರ ಆಕಾಶ ವಸಾಹತುಗಳ ಸ್ಥಾಪನೆ ಮುಂದಿನ ಶತಮಾನದಲ್ಲಿ ಸಾಧ್ಯ ಸಾಹಸವಾದೀತು ಎಂದಿದೆ. ಆ ವೇಳೆಗೆ ಭೂಗ್ರಹದಿಂದ 'ಹೊರಕ್ಕೆ' ತುಳುಕುವ ಜನಸಂಖ್ಯೆಯನ್ನು ಆಕಾಶವಸಾಹತುಗಳಲ್ಲಿ ನೆಲೆಗೊಳಿಸುವುದು ಸಾಧ್ಯವಾದೀತು.

ಭೂಮಿಯ ಸುತ್ತ ಚಂದ್ರ ಸಾಗುವ ಕಕ್ಷೆ ಇದೆಯಷ್ಟೆ. ಇದು ಚಾಂದ್ರ ಕಕ್ಷೆ. ಇದರಲ್ಲಿ ಚಂದ್ರನಿಂದ ಹಿಂದಕ್ಕೂ ಮುಂದಕ್ಕೂ ಭೂಮಿ – ಚಂದ್ರ ಅಂತರದಷ್ಟು ದೂರಗಳಲ್ಲಿ ಎರಡು ಬಿಂದುಗಳನ್ನು ಗುರುತಿಸಬೇಕು. ಇವುಗಳಿಗೆ ಲಗ್ರಾಂಜ್ ಬಿಂದುಗಳೆಂದು ಹೆಸರು. ಮುಂದಿನದು L_4 ಹಿಂದಿನದು L_5. ಇವು ಕೇಂದ್ರಗಳಾಗಿರುವ ಗೋಳಗಳ ಅಥವಾ ವಲಯಗಳ ಒಳಗೆ ಇಡಲಾಗುವ ವಸ್ತು ಬೇರೆ ಯಾವ ಬಾಹ್ಯ ಕಾರಕದ ಪ್ರಭಾವ ಇಲ್ಲದೆಯೂ ಸದಾ ಅಲ್ಲೇ ಇರಬಲ್ಲದು. ವಿಶೇಷವಾಗಿ ಭೂಮಿ, ಚಂದ್ರ ಹಾಗೂ ಸೂರ್ಯ ಇವುಗಳ ಪರಸ್ಪರ ಗುರುತ್ವ ಬಲಗಳು ಈ ತೆರನಾದ ಗತ್ಯಾತ್ಮಕ ಸಮತೋಲವನ್ನು ಆ ವಲಯಗಳಲ್ಲಿ ಸಾಧಿಸುವುದಾಗಿದೆ.

ಚಂದ್ರನ ಲಗ್ರಾಂಜ್ ವಲಯಗಳಲ್ಲಿ ಮಾನವ ವಸಾಹತುಗಳನ್ನು ನಿರ್ಮಿಸುವುದು ಸಾಧ್ಯವಿದೆ. ಪ್ರಚಲಿತ ತಂತ್ರವಿದ್ಯೆ ಇದನ್ನು ಕೈಗೂಡಿಸಬಲ್ಲದೆಂಬುದಾಗಿ ಓನ್ಯೆಲ್ ಹೇಳುತ್ತಾರೆ. ಪ್ರತಿಯೊಂದು ಲಗ್ರಾಂಜ್ ವಲಯದಲ್ಲಿಯೂ ಹತ್ತು ಸಾವಿರ ಯಾ ಹೆಚ್ಚು ಜನರನ್ನು ಒಳಗೊಳ್ಳಬಲ್ಲ ಹಲವರು ಆಕಾಶ ದ್ವೀಪಗಳನ್ನು ಸ್ಥಾಪಿಸಬಹುದು. ಇಂಥ ಒಂದೊಂದು ದ್ವೀಪವೂ ಆಯಾ ಲಗ್ರಾಂಜ್ ಬಿಂದುವಿನ ಸುತ್ತ ಸುಮಾರು ಎಂಬತ್ತೊಂಬತ್ತು ದಿವಸಗಳಲ್ಲಿ ಒಂದು ಪರಿಭ್ರಮಣೆಯನ್ನು ಮುಗಿಸುತ್ತದೆ. ಯಾವುದೇ ಲಗ್ರಾಂಜ್ ವಲಯದಲ್ಲಿ ದ್ವೀಪಗಳು ಭರ್ತಿ ಆದಾಗ ಅವುಗಳ ಒಟ್ಟು ಜನಸಂಖ್ಯೆ ಇಂದಿನ ಪ್ರಪಂಚದ ಜನಸಂಖ್ಯೆಗಿಂತ ಹಲವು ಪಟ್ಟು ಹೆಚ್ಚಿದ್ದೀತೆಂದು ಓನ್ಯೆಲ್ ಅವರ ಗಣನೆಗಳಿಂದ ತಿಳಿದಿದೆ.

ಓನ್ಯೆಲ್ ವೈಜ್ಞಾನಿಕವಾಗಿ ಬೆಂಬಲಿಸಿರುವ ಆಕಾಶದ್ವೀಪ 1000 ಮೀ ಉದ್ದ ಮತ್ತು 2000 ಮೀ ವ್ಯಾಸದ ಹಲವಾರು ಉರುಳೆಗಳ ಸಮುಚ್ಚಯ. ಇದರಲ್ಲಿ 10,000 ಮಂದಿ ಭೂಮಿಯಲ್ಲಿಯ ನಗರವೊಂದರ ಯಾವುದೇ ಸುಸಜ್ಜಿತ ಬಡಾವಣೆಯಲ್ಲಿರುವಂತೆ ಸುಖವಾಗಿ ಇರಬಲ್ಲರು. ಸುಲಭವಾಗಿ ವಿಪುಳವಾಗಿ ಮತ್ತು ಸತತವಾಗಿ ದೊರೆಯುವ ಸೌರಶಕ್ತಿಯೇ ಈ ದ್ವೀಪಗಳಿಗೆ ಶಕ್ತಿಯ ಆಕರ. ಇಂಥ ದ್ವೀಪಗಳಿಗೆ ಭೂಮಿಯಿಂದ ಹೋಗಿಬರಲು ಅಂತೆಯೇ ಇವುಗಳ ನಡುವೆ ಸಂಚರಿಸಲು ಸಾಕಷ್ಟು ಆಕಾಶಲಾಳಿಗಳು (space shuttle) ಆ ವೇಳೆಗೆ ಬಳಕೆಗೆ ಬಂದಿರುತ್ತವೆ. ಆಕಾಶಲಾಳಿಗಳ ಪ್ರಾಯೋಗಿಕ ಹಾರಾಟ 1979 ರಲ್ಲಿ ಪ್ರಾರಂಭವಾಯಿತು ಎಂಬುದನ್ನಿಲ್ಲಿ ಸ್ಮರಿಸಬಹುದು.

ಮುಕ್ತಾಯ – ಇಪ್ಪತ್ತೈದು

ವರ್ತಮಾನಯುಗದಲ್ಲಿ ಪ್ರಪಂಚದ ಧುರೀಣರೂ ಪ್ರಜೆಗಳೂ ಆಗಿರುವ ನಮ್ಮ ಮೇಲೆ ಈಗ ಇದರ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿಕೆ ಬಂದು ಕುಳಿತಿದೆ. ಗತಯುಗಗಳ ಯಾವುದೇ ಮಾನವ ಸಮುದಾಯದ ಮೇಲೆಯೂ ಇಂಥ ಜವಾಬ್ದಾರಿಕೆ ಬಿದ್ದಿರಲಿಲ್ಲ. ಈ ಜವಾಬ್ದಾರಿಕೆಯನ್ನು ನಾವು ಹೇಗೆ ನಿರ್ವಹಿಸಬಲ್ಲೆವು? ಎರಡು ಪರ್ಯಾಯ ಮಾರ್ಗಗಳು ನಮ್ಮೆದುರಿಗಿವೆ:

ಮೊದಲನೆಯದು, ನಮ್ಮ ಪೀಳಿಗೆಯ ಬಗ್ಗೆ ಪೂರ್ತಿ ಕಾಳಜಿಯಿಂದ ವರ್ತಿಸುವುದು. ಭವಿಷ್ಯದ ಅಜಾತ ಜೀವಿಗಳೆಲ್ಲವೂ ಈ ಗ್ರಹದ ಸದ್ಯೋಜಾತ ಜೀವಿಗಳಷ್ಟೇ ಇದರ ಸಂಪನ್ಮೂಲಗಳನ್ನು ಅನುಭವಿಸಲು ಹಕ್ಕುಳ್ಳವೆಂದು ತಿಳಿದು ತದನುಗುಣವಾಗಿ ನಡೆದುಕೊಳ್ಳುವುದು. ಈ ಭೂಮಿಯನ್ನು ನಮಗೆ ಸುಖಪ್ರದಾಯಕ ಗ್ರಹವಾಗಿ ಬಳುವಳಿಕೊಟ್ಟು ಹೋದುದಕ್ಕಾಗಿ ನಾವು ಹೇಗೆ ನಮ್ಮ ಪೂರ್ವಜರಿಗೆ ಕೃತಜ್ಞರಾಗಿರುವೆವೋ ಅಥವಾ ಇರಬೇಕೋ ಹಾಗೆ ನಮ್ಮ ಪೀಳಿಗೆ ನಮಗೆ ಕೃತಜ್ಞರಾಗಿರುವಂತೆ ಇಂದು ನಾವು ಬದುಕನ್ನು ಸಾಗಿಸುವುದು ಅಗತ್ಯ.

ಎರಡನೆಯದು, ನಮ್ಮ ಪೀಳಿಗೆಯ ಬಗ್ಗೆ ಪೂರ್ತಿ ಅಲಕ್ಷ್ಯದಿಂದ ವರ್ತಿಸುವುದು. ಭವಿಷ್ಯದ ಅಜಾತ ಮತ್ತು ಅಜ್ಞಾತ ಜೀವಿಗಳ ಗೊಡವೆ ನಮಗೇಕೆ, ನಮ್ಮ ದಿನಗಳು ಸಮೃದ್ಧವಾಗಿಯೂ ವೈಭವಯುತವಾಗಿಯೂ ಉರುಳಿಹೋದರೆ ಸಾಕೆಂಬ ದಾರ್ಷ್ಟ್ಯದ ನಿಲವನ್ನು ತಳೆಯುವುದು. ಸದ್ಯ ಪ್ರಪಂಚ ಈ ಹಾದಿಯನ್ನು ಹಿಡಿದಿರುವಂತೆ ತೋರುತ್ತದೆ. ಎಲ್ಲರಿಗೂ ಮುಕ್ತ ಪ್ರವೇಶವಿರುವ ವಾಯು ಹಾಗೂ ಜಲಮಂಡಲಗಳನ್ನು ವಿಶೇಷವಾಗಿ ಸೂರೆಮಾಡಿ ಮಲಿನಗೊಳಿಸುತ್ತಿರುವ ಬೇಜವಾಬ್ದಾರಿಕೆಯ ನಡತೆ ಗಾಬರಿ ಹುಟ್ಟಿಸುವಂತಿದೆ. ಇದರ ವಿಷಫಲಗಳು ಈಗಾಗಲೇ ನಮ್ಮ ದೇಹ ಸೇರಿ ಬದುಕಿನ ಮಟ್ಟದ ಮೇಲೆ ದುಷ್ಪರಿಣಾಮ ಬೀರಿವೆ. ಇದೇ ಹಾದಿಯಲ್ಲಿ ಮುನ್ನಡೆದದ್ದಾದರೆ ಸಮೀಪ ಭವಿಷ್ಯದಲ್ಲೇ ವರ್ತಮಾನ ಪೀಳಿಗೆ ಉಸಿರುಗಟ್ಟಿ ನೀರಡಕೆ ಬಡಿದು ಅಸುನೀಗಿದರೆ ಆಶ್ಚರ್ಯವೇನೂ ಇಲ್ಲ.

ವರ್ತಮಾನ ಕಾಲದ ಪ್ರಭುಗಳಾಗಿರುವ ನಮ್ಮ ಹೊಣೆ ಏನೆಂಬುದರತ್ತ ಭವಿಷ್ಯವಿಜ್ಞಾನ ನಮ್ಮ ಲಕ್ಷ್ಯ ಸೆಳೆಯುತ್ತದೆ. ಪ್ರಪಂಚದ ಭವಿಷ್ಯದಲ್ಲಿ ಆಸಕ್ತರಾದವರೆಲ್ಲರೂ ಭವಿಷ್ಯ ವಿಜ್ಞಾನದ ಬಗ್ಗೆ ಗಂಭೀರವಾಗಿ ಚಿಂತಿಸುವುದು ಅಗತ್ಯ.

ನವಶತಮಾನದ ಅರುಣೋದಯ

ವೈಜ್ಞಾನಿಕ ರೂಪಕ

ಅನುಬಂಧ

ಇಪ್ಪತ್ತನೆಯ ಶತಮಾನ ಇನ್ನು ಕೆಲವೇ ವರ್ಷಗಳಲ್ಲಿ (1993ರಲ್ಲಿ ಬರೆದ ಮಾತು.) ನೇಪಥ್ಯಕ್ಕೆ ನಿರ್ಗಮಿಸಿ ಇಪ್ಪತ್ತೊಂದನೆಯ ಶತಮಾನ ರಂಗ ಪ್ರವೇಶಿಸಿರುತ್ತದೆ. ಸದ್ಯದಲ್ಲಿ ಮಾನವ ನವ ಶತಮಾನದ ಅರುಣೋದಯ ಕಾಲದಲ್ಲಿದ್ದಾನೆ.

ವರ್ತಮಾನ ಜೀವನ ಹೇಗಿದೆ? ಎಲ್ಲಿ ನೋಡಿದರೂ ಅಶಾಂತಿ, ತುಮುಲ, ಮಾಲಿನ್ಯ, ಬಿಕ್ಕಟ್ಟು, ಮನುಕುಲದ ಅಂತ್ಯಕಾಲವೇ ಸನ್ನಿಹಿತವಾಗಿದೆಯೇ ಎನ್ನುವ ಸನ್ನಿವೇಶ. ಆಹಾರೋತ್ಪಾದನೆಯ ಆಧಿಕ್ಯದ ಜೊತೆಗೇ ಹಸಿವಿನ ಭೂತದ ಕರಾಳ ಕೂಗು. ತಂತ್ರವಿದ್ಯೆಯ ಪರಾಕಾಷ್ಠೆಯ ಬೆನ್ನಿಗೇ ತೀವ್ರ ಶಕ್ತಿ ಬಿಕ್ಕಟ್ಟಿನ ಸಮಸ್ಯೆ. ನಾಗರಿಕತೆಯ ಉಚ್ಛ್ರಾಯದ ಹಿನ್ನೆಲೆಯಲ್ಲಿ ಪಾಶವೀಯತೆಯ ಉಗ್ರ ಮುಖ. ಈ ವೈರುದ್ಧ್ಯಗಳನ್ನು ಗಮನಿಸಿ ಮಾನವ ಪ್ರಜ್ಞೆಯ ಮೂಲಭೂತ ವಿವೇಕದಲ್ಲಿ ಭರವಸೆ ಇರಿಸಿ ಬರಲಿರುವ ಶತಮಾನದಲ್ಲಿ ಬದುಕು ಹೇಗಿರಬಹುದೆನ್ನುವುದನ್ನು ವೈಜ್ಞಾನಿಕವಾಗಿ ಮುನ್ನುಡಿಯುವುದು ಸಾಹಸವೇ ಸರಿ. ಈ ನಿಟ್ಟಿನಲ್ಲಿ ಒಂದು ಪ್ರಯತ್ನ ಪ್ರಸಕ್ತ ರೂಪಕ. ಮಾನವ ವಿವೇಕಯುತನಾಗಿ ತನ್ನ ಮನೆಯನ್ನೂ ಬದುಕನ್ನೂ ಹದದಲ್ಲಿಟ್ಟುಕೊಂಡು ತಂತ್ರವಿದ್ಯೆಯ ದಾಸನಾಗದೇ ಯಜಮಾನನಾಗಿ ಉಳಿದದ್ದಾದರೆ ಇಪ್ಪತ್ತೊಂದನೆಯ ಶತಮಾನ ಅವನೆದುರು ಭವ್ಯ ನವ ಜೀವನವನ್ನು ಅನಾವರಣಗೊಳಿಸಬಲ್ಲುದೆಂಬ ಆಶಾವಾದ ಪ್ರಸಕ್ತ ರೂಪಕದ ಪ್ರಧಾನ ಶ್ರುತಿ.

ಇದೊಂದು ವೈಜ್ಞಾನಿಕರೂಪಕ, 1983ರಲ್ಲಿ ಬರೆದದ್ದು ಬೆಂಗಳೂರು ಆಕಾಶವಾಣಿಯ ಕೋರಿಕೆ ಮೇರೆಗೆ. ಅದೇ ವರ್ಷ ಇದು ಆಕಾಶವಾಣಿಯಲ್ಲಿ ಪ್ರಸಾರವಾಗಿದೆ. ಇಲ್ಲಿ ಬರುವ ಪಾತ್ರಗಳು ಪ್ರತೀಕಾತ್ಮಕ.

ಕಾಲಪುರುಷ – ಚಿರಂತನ ಕಾಲದ ಪ್ರತೀಕ. ಎಲ್ಲ ಶತಮಾನಗಳ ಸಾರ್ವತ್ರಿಕ ಪ್ರಜ್ಞೆ.
ಇಪ್ಪತ್ತನೆಯ ಶತಮಾನ – ವರ್ತಮಾನ ಕಾಲದ ಪ್ರತೀಕ. ಪ್ರಸಕ್ತ ಶತಮಾನದ ಅನುಭವಗಳ ಸಾರ.
ಇಪ್ಪತ್ತೊಂದನೆಯ ಶತಮಾನ – ಸದ್ಯವೇ ರಂಗಪ್ರವೇಶಿಸಲಿರುವ ಹೊಸ ಕಾಲದ ಪ್ರತೀಕ. ಮಾನವನ ಭವಿಷ್ಯ ಆಶೋತ್ತರಗಳ ಮೂರ್ತರೂಪ.
ರೆಡ್ ಇಂಡಿಯನ್ ನಾಯಕ – ಮನುಕುಲದ ಮನಸ್ಸಾಕ್ಷಿಯ ಪ್ರತೀಕ.

ಹಿನ್ನೆಲೆ ಗಾನ

ಇರುಳಿರುಳಳಿದು ದಿನದಿನ ಬೆಳಗೆ
ಸುತ್ತುಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

ಯುಗಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

– **ಅಂಬಿಕಾತನಯದತ್ತ**

ಕಾಲಪುರುಷ: ನಾನು ಕಾಲಪುರುಷ. ಸಮಸ್ತ ವಿಶ್ವದ ನಿಯಂತ್ರಣಕಾರ. ನಿರಂತರ ಗತಿಶೀಲತೆ ನನ್ನ ಧರ್ಮ. ನನ್ನ ಎದುರು ಶಾಶ್ವತ ಎಂಬುದೇ ಇಲ್ಲ. ಅಯ್ಯಾ ಇಪ್ಪತ್ತನೆಯ ಶತಮಾನ! ನೀನೀಗ ಎಂಬತ್ತಮೂರು ವರ್ಷ ವಯಸ್ಸಿನ ವೃದ್ಧ. ನಿನಗೆ ಉಳಿದಿರುವುದು ಇನ್ನು ಹದಿನೇಳು ವರ್ಷ ಮಾತ್ರ. ನಿನ್ನ ಜೀವಿತಾವಧಿಯಲ್ಲಿ ಮಾನವ ಹೇಗೆ ಬೆಳೆದ ಹೇಳು.

ಇಪ್ಪತ್ತನೆಯ ಶತಮಾನ: ಮಾನವ ಹೇಗೆ ಬೆಳೆದ? ಕಾಲಪುರುಷ! ತುಂಬ ಧ್ವನಿಪೂರ್ಣ ಪ್ರಶ್ನೆ ಹಾಕಿರುವೆ. ಮಾನವ ಹೇಗೆ ಅಳಿಯುತ್ತಿದ್ದಾನೆ ಎಂದು ಕೇಳಿದ್ದರೆ ಪ್ರಶ್ನೆ ಹೆಚ್ಚು ನೇರವಾಗಿರುತ್ತಿತ್ತು.

ಕಾಲಪುರುಷ: ವೃದ್ಧರಿಗೆ ಅನ್ನಿಸುವುದು ಹೀಗೆಯೇ ನೋಡು – ತಮ್ಮ ಬಾಲ್ಯದಲ್ಲಿದ್ದಂಥ ಜೀವನಲಾಸ್ಯ ಈಗ ಇಲ್ಲ. ತಮ್ಮ ಹಿತೋಕ್ತಿ ಆಲಿಸುವ ವಿನಯ ಕಿರಿಯಲ್ಲಿರಲಿಲ್ಲ. ತಮ್ಮ ತರುವಾಯ ಮಹಾಪ್ರಳಯ ಶತಸ್ಸಿದ್ಧ ಎಂದು ಮುಂತಾಗಿ. ನಿನಗೆ ಕಣ್ಣುಬುದ್ಧಿ ಎರಡೂ ಮಂಜಾಗಿ ಈ ಭಾವನೆ ಬರುತ್ತಿದೆಯೇ ವಿನಾ ವಾಸ್ತವ ಸ್ಥಿತಿಯ ಪರಿಣಾಮವಾಗಿ ಅಲ್ಲ... ನಿಜ, ಮನುಕುಲ ಎಂದೂ ವಿವೇಕದ ನೆಲವೆನೆ ಆಗಿರಲಿಲ್ಲ. ಆದರೆ ಎಂದೂ ಅದು ಅತಿರೇಕದ ಕಸಾಯಿಖಾನೆಯೂ ಆಗಿರಲಿಲ್ಲ. ತನ್ನ ಉಳಿವನ್ನು ಕಾಪಾಡುವ ಎಚ್ಚರ ಮಾನವನಿಗಿದೆ.

ಇಪ್ಪತ್ತನೆಯ ಶತಮಾನ: ಮಿತ್ರ ಕಾಲಪುರುಷ! ನಿನ್ನ ಆಶಾಭಾವನೆಗೆ ಸಮರ್ಥನೆ ಏನೇ ಇದ್ದರೂ ನಾನು ಮಾತ್ರ ನಿನ್ನೊಂದಿಗೆ ಸಹಮತನಾಗಲಾರೆ. ಕಾರಣ ಕೇಳು. 1900ರಲ್ಲಿ ನಾನು ರಂಗಪ್ರವೇಶಿಸಿದಾಗ ಭೂಮಿಯಲ್ಲಿದ್ದ ಜನಸಂಖ್ಯೆ ಎಷ್ಟು ಗೊತ್ತೇ? ಸುಮಾರು 170 ಕೋಟಿ. ಈಗ ಅದು 500 ಕೋಟಿ ದಾಟಿ ಜಿಗಿದಿದ್ದು, ನನ್ನ ತಮ್ಮ ಇಪ್ಪತ್ತೊಂದನೆಯ ಶತಮಾನ ಕಾಲಿಡುವ ವೇಳೆಗೆ 600 ಕೋಟಿಗೆ ಏರಿರುತ್ತದೆ.

ಕಾಲಪುರುಷ: ಅನುಕೂಲವೇ ಆಯಿತಲ್ಲ! ಕೆಲಸಮಾಡಲು ಅಧಿಕ ಜನ.

ಇಪ್ಪತ್ತನೆಯ ಶತಮಾನ: ಹಾಗೆಯೇ ತಿನ್ನಲು, ತಿರುಪೆ ಎತ್ತಲು, ಕಿಚ್ಚು ಹಚ್ಚಲು ಮತ್ತು ಹೊಲಸು ಮಾಡಲು ಕೂಡ! ಆಧುನಿಕ ನಾಗರಿಕತೆಯ ವಿಸ್ತರಣೆಯಲ್ಲಿ ತೊಡಗಿದ್ದ ಅಮೆರಿಕದ ಅಧ್ಯಕ್ಷನಿಗೆ ಮುಗ್ಧ ರೆಡ್ ಇಂಡಿಯನ್ ನಾಯಕನೊಬ್ಬ 1855ರಷ್ಟು ಹಿಂದೆಯೇ ಏನು ಎಚ್ಚರಿಕೆ ನೀಡಿದ್ದ ಗೊತ್ತೇ?

ರೆಡ್ ಇಂಡಿಯನ್ ನಾಯಕ: ನಿಮ್ಮ ಹಾಸಿಗೆಯನ್ನು ಹೊಲಸುಗೊಳಿಸುವುದನ್ನು ಹೀಗೆಯೇ ಮುಂದುವರಿಸುತ್ತಿರಿ – ಒಂದು ರಾತ್ರಿ ಆ ರೊಚ್ಚೆಯಲ್ಲಿ ನಿಮ್ಮ ಉಸಿರೇ ಕಟ್ಟಿಹೋಗುತ್ತದೆ. ಕಾಡೆಮ್ಮೆಗಳೆಲ್ಲವನ್ನೂ ಕಡಿದೊಗೆದ ಬಳಿಕ, ಕಾಡುಕುದುರೆಗಳೆಲ್ಲವನ್ನೂ ಪಳಗಿಸಿ ಮುಗಿದ ತರುವಾಯ, ವನಾಂತರಗಳ ಪ್ರಶಾಂತ ಏಕಾಂತಗಳೆಲ್ಲವೂ ನರಗಬ್ಬಿನಿಂದ ನಾರುತ್ತಿರುವಾಗ ಮತ್ತು ಫಲಸಮೃದ್ಧ ಗಿರಿದೃಶ್ಯಗಳು ಚೆಲ್ಲಗಾತಿಯರ ಬೋಳುಹರಟೆಯಲ್ಲಿ ಮುಳುಗಿಹೋದಾಗ ಹೊದರೆಲ್ಲಿ ಉಳಿದಿರುವುದು? ಸಾವಿನ ಮೊನೆ ತಿವಿಯುವಂದೇ ಬದುಕಿನ ಕೊನೆ.

ಕಾಲಪುರುಷ: ಮಿತ್ರ ಇಪ್ಪತ್ತನೆಯ ಶತಮಾನ! ರೆಡ್ ಇಂಡಿಯನ್ ನಾಯಕನ ಮಾತು ಒಂದು ಅರ್ಥದಲ್ಲಿ ನಿಜ. ಏಕೆಂದರೆ ಕ್ರಿಸ್ತಶಕದ ಆರಂಭದಲ್ಲಿದ್ದ ಜನಸಂಖ್ಯೆ ಕೇವಲ 30 ಕೋಟಿ. ಈಗ 500 ಕೋಟಿ. ನೆಲದ ವಿಸ್ತಾರವೇನೂ ಹಿಗ್ಗಿರುವುದಿಲ್ಲ – ಆಗಲೂ ಈಗಲೂ ಒಂದೇ.

ಇಪ್ಪತ್ತನೆಯ ಶತಮಾನ: ಅದೇ ಇಂದಿನ ಮಾನವನ ಬವಣೆಯ ಕಾರಣ.

ಕಾಲಪುರುಷ: ಬವಣೆ? ಏಕೆ?

ಇಪ್ಪತ್ತನೆಯ ಶತಮಾನ: ಗಂಗಳ ಅದೇ ಇದ್ದು ಕಬಳಿಸುವ ಕೈಗಳು ಜಾಸ್ತಿ ಆದಾಗ ನೆಮ್ಮದಿ ಹೇಗೆ ತಾನೇ ಉಳಿದೀತು?

ಕಾಲಪುರುಷ: ನಿನ್ನ ತರ್ಕ ಸರಿಯಲ್ಲ ಇಪ್ಪತ್ತನೆಯ ಶತಮಾನ! ವಿಜ್ಞಾನ ಮತ್ತು ತಂತ್ರವಿದ್ಯೆಗಳಲ್ಲಿ ಹಿಂದಿನ ಎಲ್ಲ ಪೀಳಿಗೆಗಳಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿರುವ ಇಂದಿನ ಪೀಳಿಗೆ ಅದೇ ನೆಲದಿಂದ ಅಧಿಕ ಸಂಪತ್ತು ಕೊಯ್ಲು ಮಾಡಿ

ಸಮೃದ್ಧ ಜೀವನ ನಡೆಸುತ್ತಿರುವುದನ್ನು ಕಣ್ಣಾರೆ ನೋಡುತ್ತಿದ್ದೇನೆ. ಜನಸಂಖ್ಯೆಯ ವೃದ್ಧಿಯೊಡನೆ ಗಳಿಕೆ ಸಂಪತ್ತಿನ ಮೊತ್ತವೂ ಜಾಸ್ತಿ ಆಗಬೇಕಷ್ಟೆ?

ಇಪ್ಪತ್ತನೆಯ ಶತಮಾನ: ಕಾಲಪುರುಷ! ನೀನು ವರ್ತಮಾನದಲ್ಲಿ ಬಾಳುತ್ತಿಲ್ಲ. ಯಾವುದೋ ಆದರ್ಶದ ಗುಂಗಿನಲ್ಲಿ ತೇಲುತ್ತಿರುವೆ. ನನ್ನ ವಿವರಣೆ ಆಲಿಸು. ಇಂದಿನ ಪ್ರಪಂಚ ಅನುಭೋಗಾತಿರೇಕತ್ವ ಎಂಬ ಭೀಕರ ಮಾರಕಜ್ವರದಿಂದ ತಹತಹಿಸುತ್ತಿದೆ.

ಕಾಲಪುರುಷ: ಅನುಭೋಗಾತಿರೇಕತ್ವ ಎಂದರೇನು?

ಇಪ್ಪತ್ತನೆಯ ಶತಮಾನ: ಋಣಂ ಕೃತ್ವಾ ಘೃತಂ ಪಿಬೇತ್ – ಸಾಲ ಮಾಡಿ ತುಪ್ಪ ತಿನ್ನು – ಈ ಅನುಕೂಲ ಮಂತ್ರದ ಉಗ್ರಮುಖವೇ ಅನುಭೋಗಾತಿರೇಕತ್ವ. ಅಗತ್ಯವಿರಲಿ ಇಲ್ಲದಿರಲಿ ಸರಕು ಸೇವೆಗಳನ್ನು ಶಕ್ತಿ ಮೀರಿ ಕೊಳ್ಳೆ ಹೊಡೆದು ಅನುಭೋಗಿಸುವುದೇ ಪ್ರಗತಿಯ ಮಾನಕ ಎಂಬ ಭ್ರಮಾಧೀನನಾಗಿದ್ದಾನೆ ಮಾನವ. ಸ್ವಂತ ನಿರ್ಮಾಣಗಳಾದ ಯಂತ್ರವಾಹನಗಳ ಮತ್ತು ತಂತ್ರಸಾಧನಗಳ ದಾಸಾನುದಾಸನಾಗಿದ್ದಾನೆ. (ಹಿನ್ನೆಲೆಯಲ್ಲಿ ಯಂತ್ರ ವಾಹನಗಳ ಗಲಭೆ) ತನ್ನ ಮಿದುಳ ಶಿಶುವಾದ ತಂತ್ರವಿದ್ಯೆಯನ್ನು ನಿಯಂತ್ರಿಸುವುದರಲ್ಲಿ ಮಾನವ ವಿಫಲನಾಗಿದ್ದಾನೆ. ಇದು ಅವನ ಸೇವಕ ಆಗಿರಬೇಕಾಗಿತ್ತು. ಆದರೆ ಈಗ ತದ್ವಿಪರೀತವಾಗಿ ಇವನೇ ಅದರ ಸೇವಕ ಆಗಿದ್ದಾನೆ. ತಂತ್ರವಿದ್ಯೆಯ ನೀರಸ ಶಿಸ್ತು ಮತ್ತು ಹಿಂಗದ ದಾಹ ಇವುಗಳಿಗೆ ತನ್ನ ಬದುಕನ್ನೇ ಪಣವಾಗಿ ಒಡ್ಡಿದ್ದಾನೆ. ಹೀಗಾಗಿ ಮೌಲ್ಯರಹಿತ ರಭಸಜೀವನ ಅವನ ಭವ್ಯ ಆದರ್ಶವಾಗಿದೆ. ಪರಿಣಾಮ? ಪ್ರಕೃತಿ ಸೂರೆ, ಸ್ವಾಸ್ಥ್ಯ ಹನನ, ಸರ್ವನಾಶ, ಡಿವಿಜಿಯವರ ಮಾತಿನಲ್ಲಿ

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ
ವಿಕೃತಿಗೊಳಿಸುವನವನುಮಾಕೆಯಂಗಗಳ
ಭೂಕೃಷಿಕ ರಸತಂತ್ರಿ ಶಿಲ್ಪಿವಾಹನ ಯಂತ್ರಿ
ವ್ಯಾಕೃತಿಸರೇನವಳ? **ಮಂಕುತಿಮ್ಮ**

ಕಾಲಪುರುಷ: ತಾಳು ತಾಳು ಇಪ್ಪತ್ತನೆಯ ಶತಮಾನ! ಅಷ್ಟೊಂದು ಉದ್ವೇಗ ಬೇಡ, ಹತಾಶೆಯೂ ಬೇಡ. ನಿನ್ನ ಜೀವಿತಾವಧಿಯಲ್ಲಿ ನೀನು ಗಳಿಸಿದ ಕಹಿ ಅನುಭವ ನಿನ್ನಲ್ಲಿ ಈ ನಿರಾಶಾದಾಯಕ ಚಿತ್ರ ಮೂಡಿಸಿದೆ ಎನ್ನುವುದು ನನಗೆ ಅರ್ಥವಾಗುತ್ತದೆ. ಇದು ತಾತ್ಕಾಲಿಕವಾದದ್ದು, ಸಾರ್ವಕಾಲಿಕವಾದದ್ದಲ್ಲ. ಅನಾದಿ ಪುರುಷನಾದ ನಾನು ಮಂಗಮಾನವ ನರಮಾನವನಾದ ದಿನದಿಂದಲೂ ಮನುಕುಲದ ವಿಕಾಸ ನೋಡುತ್ತ ಬಂದಿದ್ದೇನೆ. ತ್ಯಾಗ– ಭೋಗ, ವಿವೇಕ–ಅತಿರೇಕ, ಪ್ರೀತಿ–ದ್ವೇಷ ಮುಂತಾದ ವಿರುದ್ಧ ಗುಣಗಳ ಘರ್ಷಣೆ ಮಾನವೇತಿಹಾಸವನ್ನು ಉದ್ದಕ್ಕೂ ರೂಪಿಸಿಕೊಂಡು ಬಂದಿದೆ. ದುಷ್ಟ ಗುಣಗಳು ಉಲ್ಬಣಿಸಿ ಆತ ವಿನಾಶದ ಅಂಚಿಗೆ ಹೋದಾಗಲೆಲ್ಲ ಸದ್ಗುಣಗಳು ಪ್ರಾಬಲ್ಯಕ್ಕೆ ಬಂದು ಲಗಾಮು ಜಗ್ಗಿ ಆತನ ಬಾಳಬಂಡಿಯನ್ನು ಹಳಿಹತ್ತಿಸಿವೆ. ನನ್ನ ಮಾತು ನಂಬು: ಇಂದಿನ ಸರಾಸರಿ ವ್ಯಕ್ತಿ ಹಿಂದಿನ ಪ್ರತಿಯೊಂದು ಶತಮಾನದ ಸರಾಸರಿ ವ್ಯಕ್ತಿಗಿಂತ ಹೆಚ್ಚು ಸುಶಿಕ್ಷಿತನಾಗಿದ್ದಾನೆ. ಈತನ ಆಯುರ್ನಿರೀಕ್ಷೆ ಹೆಚ್ಚು. ಆದ್ದರಿಂದ ನಿನ್ನ ತಮ್ಮ ಇಪ್ಪತ್ತೊಂದನೆಯ ಶತಮಾನ ರಂಗಪ್ರವೇಶಿಸುವ ವೇಳೆಗೆ ಮಾನವನ ಜೀವನದ ಗುಣಮಟ್ಟ ಗಮನಾರ್ಹವಾಗಿ ಸುಧಾರಿಸಿರುತ್ತದೆ.

ಇಪ್ಪತ್ತನೆಯ ಶತಮಾನ: ಕಾಲಪುರುಷ! ನಿನ್ನ ಈ ಆಶಾವಾದ ತಾತ್ತ್ವಿಕ ನೆಲೆಯಲ್ಲಿ ನಿಜವಿರಬಹುದು. ಆದರೆ ವಾಸ್ತವ ನೆಲೆಯಲ್ಲಿ ಸಂಗತವಾಗದೆಂದು ನನ್ನ ಅನುಭವ ನುಡಿಯುತ್ತದೆ. ನಾನು ಕೊಡುವ ಕಾರಣಗಳು ಮುಖ್ಯವಾಗಿ ಐದು. ಒಂದನೆಯದಾಗಿ ಆಹಾರ ಪದಾರ್ಥಗಳ ತೀವ್ರ ಅಭಾವ. ಪ್ರಪಂಚದಲ್ಲಿಂದು ಒಂದು ಕೋಟಿ ಮಕ್ಕಳು ನ್ಯೂನಪೋಷಣೆಯಿಂದ ಪೀಡಿತರಾಗಿ ಇವರ ಬೆಳೆವಣಿಗೆ ಕುಂಠಿತವಾಗಿದೆ. ಇವರು ಯಾವ ಉತ್ಸಾಹದಿಂದ ಇಪ್ಪತ್ತೊಂದನೆಯ ಶತಮಾನವನ್ನು ಸ್ವಾಗತಿಸಿಯಾರು? 40 ಕೋಟಿಜನ ಉಪವಾಸದ ಅಂಚಿನಲ್ಲಿ ನವೆಯುತ್ತಿದ್ದಾರೆ. 100 ಕೋಟಿ ಜನ ಹಸಿವು ಮತ್ತು ನ್ಯೂನ ಪೋಷಣೆಯಿಂದ ಬಾಧಿತರಾಗಿದ್ದಾರೆ. ಪ್ರತಿದಿನ 12,000 ಮಂದಿ ಆಹಾರಾಭಾವದಿಂದ ಮಡಿಯುತ್ತಿದ್ದಾರೆ. ಅಂದರೆ ಪ್ರತಿ 25ರಲ್ಲಿ 7 ಮಂದಿ ಹೊಟ್ಟೆಗೆ ಹಿಟ್ಟಿಲ್ಲದೆ ಕಂಗಾಲಾಗಿದ್ದಾರೆ, ಇಲ್ಲವೇ ಸಾಯುತ್ತಿದ್ದಾರೆ. ಈ ಸಂಖ್ಯೆಗಳು ತೇಜಿಯಲ್ಲಿವೆಯೇ ಹೊರತು ಮಂದದಲ್ಲಿಲ್ಲ. (ಹಿನ್ನೆಲೆಯಲ್ಲಿ ಹಸಿವಿನ ಮೊರೆ, ಅನ್ನದ ಕೂಗು).

ಎರಡನೆಯದಾಗಿ ಈ ಅಸಂತೃಪ್ತ ಮತ್ತು ಅನಾರೋಗ್ಯ ಮಂದಿ ಬಹುತೇಕ ಅಭಿವೃದ್ಧಿಶೀಲ ಮತ್ತು ಆನಭಿವರ್ಧಿತ ರಾಷ್ಟ್ರಗಳ ಮಹಾನಗರಗಳಲ್ಲಿ ದಟ್ಟವಾಗಿ ಹೆಣೆದುಕೊಂಡಿದ್ದಾರೆ. ಆಯಾ ರಾಷ್ಟ್ರಗಳ ವ್ಯಾಪಾರ ಮತ್ತು ಆಡಳಿತ ಕೇಂದ್ರಗಳಾದ ಈ ನಗರಗಳು ಕೊಳಚೆಗುಂಡಿಗಳಾಗಿ ರೋಗರುಜಿನಗಳ ಜವುಗು ನೆಲಗಳಾಗಿವೆ. ಕೊಲೆ ದರೋಡೆಗಳ ಬೀಡುಗಳಾಗಿವೆ. ಏಡಿಗಂತಿಯಂತೆ ಹಬ್ಬುತ್ತಿರುವ ಪಿಡುಗಿನಿಂದ ನಾಗರಿಕತೆ ಪಾರಾಗುವುದು ನನ್ನ ಶೇಷಾಯುಷ್ಯದಲ್ಲಂತೂ ಅತ್ಯಂತ ಅಸಂಭವ. (ಹಿನ್ನೆಲೆಯಲ್ಲಿ ಕೊಳೆಗೇರಿಯ ಗಲಭೆ ಗುಲ್ಲು ಗೊಂದಲ)

ಮೂರನೆಯದಾಗಿ ವ್ಯಕ್ತಿಯ ಪ್ರಾಥಮಿಕ ಆವಶ್ಯಕತೆಗಳಾದ ಅಶನ ವಸನ ವಸತಿ ಪೂರೈಸುವ ಏಕೈಕ ಅಕ್ಷಯ ಪಾತ್ರೆ ಈ ವಸುಂಧರೆ. ಆದರೆ ವರ್ತಮಾನ ದಿನಗಳಲ್ಲಿ ಇದು ಬರಿ ದೂಳಬಟ್ಟಲಾಗುತ್ತಿರುವಂತೆ ತೋರುತ್ತದೆ. ಹಸುರು ಕಾಡುಗಳು ಪರಿಮಳಿಸುತ್ತಿದ್ದಲ್ಲಿ ಕಾಂಕ್ರಿಟ್ ಪೆಡಂಭೂತಗಳು ರಣಗುಟ್ಟುತ್ತಿವೆ. ವನ್ಯಮೃಗಗಳು ಮುಕ್ತವಾಗಿ ವಿಹರಿಸುತ್ತಿದ್ದಲ್ಲಿ ಸ್ವಯಂಚಲಿಗಳು ಯಾಂತ್ರಿಕವಾಗಿ ಧಾವಿಸುತ್ತಿವೆ. ಜಲಗೋಳ ಮತ್ತು ವಾಯುಮಂಡಲ ಕೂಡ ಈ ಅವ್ಯಾಹತ ಸೂರೆಯಿಂದ ವಿನಾಯತೆ ಪಡೆದಿಲ್ಲ. ತನ್ನ ಕೊರಳ ಸುತ್ತಿನ ಉರುಳನ್ನು ತಾನೇ ಬಿಗಿಗೊಳಿಸುತ್ತಿರುವ ಮಾನವ ಮುಂದಿನ ಶತಮಾನ ಕಾಣುವುದುಂಟೇ? ಸ್ವಾಗತಿಸುವುದುಂಟೇ? (ಹಿನ್ನೆಲೆಯಲ್ಲಿ ಗೂಗೆಗಳ ಘೂಕಾರ, ಲಾರಿ ರೈಲು ವಿಮಾನಗಳ ಚೀತ್ಕಾರ.)

ನಾಲ್ಕನೆಯದಾಗಿ ಮಾನವಕೃತಾಪರಾಧವಾದ ಪರಿಸರ ಮಾಲಿನ್ಯದಿಂದ ಇಂದು ಇಡೀ ಭೂಮಿ ಕಲುಷಿತವಾಗಿದೆ. ಆತ ಉಸಿರಾಡುವ ವಾಯು, ಉಣ್ಣುವ ಅನ್ನ, ಕುಡಿಯುವ ನೀರು ಮತ್ತು ತೊಡುವ ಬಟ್ಟೆ ಎಲ್ಲವೂ ಕಲಬೆರಕೆಗಳೇ. ಇಂಥ ಶ್ವಾಸಬಂಧಕ ಕೃತಕ ಪರಿಸರದಲ್ಲಿ ಮಾನವನ ಅಭ್ಯುದಯ ಹೇಗೆ ತಾನೇ ಸಾಧ್ಯವಾದೀತು? ಎಸ್.ವಿ. ಪರಮೇಶ್ವರ ಭಟ್ಟರ ಮಾತಿನಲ್ಲಿ:

> ನಿಧಿಯ ಶಂಕೆಯಿನಿಳೆಯನಗೆದೆನು ಗಿರಿಯ ಧಾತುವನೂದಿ ಕರಗಿಸಿದೆ
> ಕಡಲನುತ್ತರಿಸಿದೆನು ನೃಪರನು ಯತ್ನದಿಂದಾಮೋದಗೊಳಿಸುತೆ ನಲಿಸಿದೆ
> ಬಗೆಯ ಮಂತ್ರಾರ್ಚನೆಯೊಳಿರಿಸುತಲಿರುಳನೆನಿತನೊ ಮಸಣದೊಳು ನಾ ಕಳೆದೆನು
> ದೊರೆಯದಾಯಿತು ಕುರುಡು ಕವಡೆಯುಮೆನಗೆ ತೃಷ್ಣೆಯೆ ಸಾಕು ಬಿಡು ಬಿಡು ನನ್ನನು

ಕಾಲಪುರುಷ: ಸ್ವಲ್ಪ ತಡೆ ಇಪ್ಪತ್ತನೆಯ ಶತಮಾನ! ಕೊಂಚ ಕೇಳು ನನ್ನ ಮಾತು. ಕುಂದು ಮಾತ್ರ ಕಾಣುತ್ತೇನೆಂಬ ಕಾಮಾಲೆ ನೋಟ ತಳೆಯುವುದರಿಂದ ಪ್ರಯೋಜನವಾಗದು. ನಿನಗಿಂತ ಹಿಂದೆ ಬಂದು ಸಂದು ಹೋದ ಶತಮಾನ ಪುರುಷರೆಲ್ಲರೂ ಅವರವರ ಕೊನೆಯ ದಿನಗಳಲ್ಲಿ ಆಡಿದ ಮಾತಿನ ಧಾಟಿ ಹೀಗೆಯೇ ಇತ್ತು. ಆದರೆ ನಾನು ಕಣ್ಣಾರೆ ಕಂಡಿದ್ದೇನೆ: ಮಾನವನ ಜೀವನದಲ್ಲಿ ಶತಮಾನದಿಂದ ಶತಮಾನಕ್ಕೆ ಪ್ರಗತಿ ಆಗಿದೆ, ಈಗಲೂ ಅದು ಪುರೋಗಾಮಿಯಾಗಿಯೇ ಇದೆ.

ಇಪ್ಪತ್ತನೆಯ ಶತಮಾನ: ಕಾಲಪುರುಷ! ಹಿಂದಿನವರ ಅನುಭವ ಏನೆಂಬುದು ನನಗೆ ತಿಳಿಯದು. ಹತ್ತೊಂಬತ್ತನೆಯ ಶತಮಾನ ನನಗೇನೂ ಒಳ್ಳೆಯ ಬಳುವಳಿ ಬಿಡಲಿಲ್ಲ. ಪ್ರಕೃತಿಯನ್ನು ಥಳಿಸಿ ತೊತ್ತಾಗಿ ದುಡಿಸಿಕೊಳ್ಳಬೇಕೆಂಬ ಅತಿ ಸ್ವಾರ್ಥ ದುರಾಶೆಯಿಂದ ಕೂಡಿದ್ದ ಜನಾಂಗವನ್ನು ಅವನು ನನಗೆ ಒಪ್ಪಿಸಿ ಹೋದ. ಫಲಿತಾಂಶ? ನೀನೇ ನೋಡಿರುವೆ: ಎರಡು ಮಹಾಯುದ್ಧಗಳು. ಹಿಂದಿನ ಎಲ್ಲ ಯುದ್ಧಗಳ ಕ್ರೌರ್ಯ ಮೀರಿಸುವ ಪಾಶವೀಯತೆ ಈ ಯುದ್ಧಗಳಲ್ಲಿ ಪ್ರಕಟವಾಯಿತು. ಪ್ರಪಂಚ ಈಗ ಮೂರನೆಯ ಮಹಾಯುದ್ಧದ ಅಂಚಿನಲ್ಲಿ ನಿಂತಿದೆ. ಇದೇನಾದಾದರೂ ಸಿಡಿಯಿತೋ ಆಗ ಪರಮಾಣುಬಾಂಬುಗಳ ತಾಂಡವ ನೃತ್ಯದಿಂದ ಮನು ಕುಲವೇ ನಿರ್ನಾಮಗಾಗಿ ಹೋದೀತು.

> ಪರಮಾಲ್ಪ ಗಾತ್ರದಾ ಪರಮಾಣುಭೇದನೆ
> ಮಾನವಜನಾಂಗದಾ ತೀವ್ರ ಪ್ರಲೋಭನೆ
> ಪರಮಾಣುಮನದಿ ಸ್ಪಂದಿಸಿದೆ ಸಂವೇದನೆ
> ಮರಳಿಸಲು ಬಂದಿಹುದು ನೋಡು ಗುರುವಂದನೆ!

ಒಂದು ಪಕ್ಷ ಮೂರನೆಯ ಮಹಾಯುದ್ಧ ಸಂಭವಿಸದಿದ್ದರೂ ಈಗಾಗಲೇ ತಲೆದೋರಿರುವ ಶಕ್ತಿ ಬಿಕ್ಕಟ್ಟು ಪ್ರಕೋಪಕ್ಕೆ ಹೋಗಿ ಬದುಕು ದುಸ್ಸಹನೀಯವಾಗುವುದು ಕಂಡಂತೆಯೇ ಇದೆ.

ಕಾಲಪುರುಷ: ಶಕ್ತಿಬಿಕ್ಕಟ್ಟು ಎಂದರೇನು?

ಇಪ್ಪತ್ತನೆಯ ಶತಮಾನ: ವಿವರಿಸುತ್ತೇನೆ ಕೇಳು. ವಿದ್ಯುಚ್ಛಕ್ತಿ, ಡೀಸೆಲ್ ಶಕ್ತಿ, ಬೈಜಿಕ ಮುಂತಾದ ಕೃತಕ ಶಕ್ತಿ ಪ್ರಕಾರಗಳು ಮಾನವ ಪ್ರಯತ್ನದಿಂದ ದೊರೆತಿರುವುದು ಸರಿಯಷ್ಟೆ. ಇವು ಇಂದಿನ ಜೀವನದ ತಳಹದಿಗಳಾಗಿವೆ. ಶಕ್ತಿರಹಿತ ಜೀವನ ಇಂದು ಊಹೆಗೂ ನಿಲುಕದು. ಈ ಶಕ್ತಿ ಎಲ್ಲಿಂದ ಒದಗುತ್ತದೆ?

ಕಾಲಪುರುಷ: ಅಂತಿಮವಾಗಿ ನಿಸರ್ಗದಿಂದ?

ಇಪ್ಪತ್ತನೆಯ ಶತಮಾನ: ಸರಿಯಾದ ಮಾತು. ನಿಸರ್ಗದಿಂದ ಕಚ್ಚಾ ಸಾಮಗ್ರಿ ಸಂಗ್ರಹಿಸಲು, ಅದನ್ನು ಕಾರ್ಖಾನೆಗೆ ಸಾಗಿಸಲು, ಅಲ್ಲಿ ಉಪಯುಕ್ತ ವಸ್ತು ತಯಾರಿಸಲು, ಜನ ಈ ವಸ್ತುಗಳಿಂದ ಸೇವೆ ಪಡೆಯಲು ಮತ್ತು ಕೊನೆಯದಾಗಿ ಉಪಯೋಗಾನಂತರ ಉಳಿಯುವ ವಸ್ತುವಿನ ವಿಲೇವಾರಿ ಮಾಡಲು ಶಕ್ತಿಬೇಕು. ಈ ಶಕ್ತಿಯ ಅತ್ಯಧಿಕ ಭಾಗ ಪೂರೈಕೆ ಆಗುತ್ತಿರುವುದು ಫಾಸಿಲ್ ಇಂಧನಗಳಿಂದ – ಅಂದರೆ ಕಲ್ಲಿದ್ದಲು, ಪೆಟ್ರೋಲಿಯಮ್ ಮುಂತಾದ ಭೂಸಂಪನ್ಮೂಲಗಳಿಂದ. ಇವುಗಳ ವಿನಿಯೋಗ ಇಸವಿ 1900ರಲ್ಲಿ 625 ಮಿಲಿಯನ್ ಮೆಟ್ರಿಕ್ ಟನ್ ಕಲ್ಲಿದ್ದಲಿನ ದಹನಕ್ಕೆ ಸಮಾನವಾಗಿತ್ತು. 1950ರಲ್ಲಿ ಅದು 3150 ಮಿಲಿಯನ್ನಿಗೂ 1980ರಲ್ಲಿ 10,000 ಮಿಲಿಯನ್ನಿಗೂ ಏರಿತು. ಇಸವಿ 2000ದಲ್ಲಿ 22500 ಮಿಲಿಯನ್ನಿಗೆ ಜಿಗಿಯುವ ನಿರೀಕ್ಷೆ ಇದೆ. ಇದರ ಅರ್ಥ ಸ್ಪಷ್ಟ: ಪ್ರಸಕ್ತ ಶತಮಾನದ ಮೊದಲ ಐವತ್ತು ವರ್ಷಗಳಲ್ಲಿ ಸರಾಸರಿ ವೃದ್ಧಿದರ ಶೇಕಡಾ 9 ಇದ್ದದ್ದು ಮುಂದಿನ ಮೂವತ್ತು ವರ್ಷಗಳಲ್ಲಿ ಶೇಕಡಾ 10ಕ್ಕೆ ಏರಿತು, ಕೊನೆಯ ಇಪ್ಪತ್ತು ವರ್ಷಗಳಲ್ಲಿ ಶೇಕಡಾ 11.25ಕ್ಕೆ ಜಿಗಿಯಲಿದೆ.

ಕಾಲಪುರುಷ: ಆಗಲಿ, ತೊಂದರೆ ಏನು?

ಇಪ್ಪತ್ತನೆಯ ಶತಮಾನ: ಎಲ್ಲ ರೀತಿಯಲ್ಲಿಯೂ ತೊಂದರೆ ಉಂಟು. ಫಾಸಿಲ್ ಇಂಧನ ಹೆಚ್ಚೆಂದರೆ ಇನ್ನು ಒಂದು ಶತಮಾನಪರ್ಯಂತ ದೊರೆಯಬಹುದು – ಅದೂ ಅತಿ ಪ್ರಯಾಸದಿಂದ. ಹೀಗಾಗಿ ಮಾನವ ಈಗ ಎರಡು ವಿರುದ್ಧ ಬಲಗಳ ಎಳೆತದಿಂದ ಕಂಗಾಲಾಗಿದ್ದಾನೆ: ತಂತ್ರವಿದ್ಯೆಯ ಎಂದೂ ಹಿಂಗದ, ಬದಲು, ಸದಾ ಉಲ್ಬಣಿಸುತ್ತಿರುವ ಶಕ್ತಿದಾಹ, ಫಾಸಿಲ್ ಇಂಧನದ ಶಾಶ್ವತವಲ್ಲದ, ಬದಲು, ದಿನದಿನ ನಶಿಸುತ್ತಿರುವ ರಿಕ್ತ ಮೂಲ. ಇವೆರಡರ ನಡುವಿನ ಕೊರತೆಯೇ ಶಕ್ತಿ ಬಿಕ್ಕಟ್ಟು. ಇಪ್ಪತ್ತೊಂದನೆಯ ಶತಮಾನ ಹೊಸ್ತಿಲು ಒಳ ದಾಟುವ ವೇಳೆಗೆ ಇದು ಅಡ್ಡ ಹಾಯಲಾಗದ ಒಂದಿಗೇ ಮುಚ್ಚಲೂ ಆಗದ ಅಗಲ ಆಳ ಕಮರಿಯಾಗಿ ಮಾನವ ಜೀವನ ಅಸ್ತವ್ಯಸ್ತವಾಗಿ ಹೋಗುವುದು ನನಗಂತೂ ನಿಚ್ಚಳವಾಗಿ ಎದ್ದು ಕಾಣುತ್ತಿದೆ. ಶಕ್ತಿ ಬಿಕ್ಕಟ್ಟು ಐದನೆಯ ಮುಖ್ಯ ಕಾರಣ.

ಕಾಲಪುರುಷ: ಏರು ಕಡಿದಾದಷ್ಟೂ ಹುಮ್ಮಸ್ಸು ಹಿಗ್ಗುವುದು ಮಾನವ ಸ್ವಭಾವ. ನೀನು ನೀಡಿರುವ ಐದು ನಿಷೇಧಾತ್ಮಕ ಕಾರಣಗಳನ್ನೂ ಮೀರಿ ನಿಲ್ಲಬಲ್ಲ ಧೃತಿ ಮಾನವನಿಗಿದೆ. ಈಗ ಅವನ್ನು ಒಂದೊಂದಾಗಿ ಪರಿಶೀಲಿಸುತ್ತೇನೆ. ಮೊದಲನೆಯದು?

ಇಪ್ಪತ್ತನೆಯ ಶತಮಾನ: ಜನಸಂಖ್ಯೆಯ ಅತಿವೃದ್ಧಿ ಮತ್ತು ಆಹಾರ ಪದಾರ್ಥಗಳ ಅಲಭ್ಯತೆ.

ಕಾಲಪುರುಷ: ಹೌದು. ಈಗ, ಜನಸಂಖ್ಯಾವೃದ್ಧಿಯ ಕಾರಣ ಜನನದಲ್ಲಿಯ ಹೆಚ್ಚಳ ಅಲ್ಲ, ಬದಲು ಮರಣದಲ್ಲಿಯ ಇಳಿತ. ವಾಸ್ತವವಾಗಿ ಪ್ರಪಂಚದ ಸರಾಸರಿ ಜನನ ದರ ಇಳಿದಿದ್ದು ಮುಂಬರುವ ವರ್ಷಗಳಲ್ಲಿ ಜನಸಂಖ್ಯೆ ಆಗಿನ ಮಟ್ಟದಲ್ಲಿ ಸ್ಥಿರಗೊಳ್ಳಲಿದೆ, ಅಥವಾ ಅಭಿವರ್ಧಿತ ರಾಷ್ಟ್ರಗಳ ಮಾದರಿಯಲ್ಲಿ ಇತರೆಡೆಗಳಲ್ಲಿ ಕೂಡ ಇನ್ನಷ್ಟು ಇಳಿದು ಜನಸಂಖ್ಯೆ ಕಡಿಮೆಯಾಗಲಿದೆ. ಇನ್ನು ಆಹಾರಪದಾರ್ಥಗಳ ವಿಚಾರ. ಇವುಗಳ ಉತ್ಪಾದನೆ ಸಮೃದ್ಧವಾಗಿದ್ದರೂ ವಿತರಣೆಯಲ್ಲಿ ಸಾಕಷ್ಟು ಕೃತಕ ಪ್ರತಿಬಂಧಕಗಳು ಅಡ್ಡಬಂದು ಜನರಲ್ಲಿ, ಅಂತೆಯೇ ರಾಷ್ಟ್ರಗಳಲ್ಲಿ ಕೂಡ, ಅತಿ

ಸಮೃದ್ಧವರ್ಗ ಮತ್ತು ಅತಿ ದರಿದ್ರ ವರ್ಗ ಎಂಬ ಎರಡು ವರ್ಗಗಳು ತಲೆದೋರಿವೆ. ಇಂದಿನ ವಿಚಾರಶೀಲ ಮಾನವ ಈ ಆತಂಕಗಳನ್ನು ನಿವಾರಿಸಿ ಆಹಾರವಿತರಣೆಯಲ್ಲಿ ಸಮತೋಲ ಸಾಧಿಸಿಕೊಳ್ಳಬಲ್ಲವನಾಗಿದ್ದಾನೆ.

ಇಪ್ಪತ್ತನೆಯ ಶತಮಾನ: ಆಗಲಿ ಎರಡನೆಯ ಕಾರಣಕ್ಕೆ ಸಜಾಯಿಷಿ ಕೊಡು ನೋಡೋಣ.

ಕಾಲಪುರುಷ: ನೀನು ವಿಶದೀಕರಿಸಿರುವ ಎರಡನೆಯ ಕಾರಣ ನಗರಗಳ ಅತಿಲಂಬನೆ ಮತ್ತು ತತ್ಪರಿಣಾಮವಾದ ಸಮಸ್ಯೆಗಳು, ಅಲ್ಲವೇ ಇಪ್ಪತ್ತನೇ ಶತಮಾನ?

ಇಪ್ಪತ್ತನೆಯ ಶತಮಾನ: ಹೌದು ಕಾಲಪುರುಷ!

ಕಾಲಪುರುಷ: ಮಾನವೇತಿಹಾಸದಲ್ಲಿ ಮೂರನೆಯ ಕ್ರಾಂತಿ ತಲೆದೋರಿದಾಗ ನಗರಗಳ ಅಸಹಜ ಬೆಳೆವಣಿಗೆ ಆರಂಭವಾಯಿತೆಂಬ ಸಂಗತಿ ನಿನಗೆ ತಿಳಿದಿದೆಯಷ್ಟೆ?

ಇಪ್ಪತ್ತನೆಯ ಶತಮಾನ: ಇಲ್ಲ, ಅದೇನೆಂದು ಹೇಳು.

ಕಾಲಪುರುಷ: ಮಾನವ ತನ್ನ ಭಾವನೆಗಳಿಗೆ ಮಾತಿನ ಒಡಲು ಕೊಡಲು ಕಲಿತಾಗ ಮೊದಲನೆಯ ಕ್ರಾಂತಿ ಸಂಭವಿಸಿತು. ಉದಾಹರಣೆಗೆ ವೇದ ಮಂತ್ರಗಳು:

ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಸ್ತು ಪಾರೇ
ಸರ್ವಾಣಿ ರೂಪಾಣಿ ವಿಚಿತ್ಯ ಧೀರ:
ನಾಮಾನಿ ಕೃತ್ವಾ(ಅ)ಭಿವದನ್ಯದಾಸ್ತೇ

ಮುಂದೆ ಈ ಮಾತನ್ನು – ಅಂದರೆ ಕಿವಿಗೆ ಮಾತ್ರ ಗ್ರಾಹ್ಯವಾಗುವ ಶಬ್ದರೂಪಿಯನ್ನು – ಲಿಪಿಲೋಕದಲ್ಲಿ ಘನೀಕರಿಸಲು ಕಲಿತಾಗ ಎರಡನೆಯ ಕ್ರಾಂತಿ ಸಂಭವಿಸಿತು. ಇದು ಲಿಪಿಕ್ರಾಂತಿ. ಉದಾಹರಣೆಗೆ ಹಲ್ಮಿಡಿ ಶಾಸನದಲ್ಲಿ ಕೆತ್ತಿರುವ ಮಾತು:

ಜಯತಿ ಶ್ರೀ ಪರಿಷ್ವಙ್ಗಶ್ಯಾರ್ಙ್ಗವ್ಯಾನತಿರಚ್ಯುತಃ
ದಾನವಾಷ್ಣೋ ಯುಗಾನ್ತಾಗ್ನಿಃ ಶಿಷ್ಟಾನಾನ್ತು ಸುದರ್ಶನಃ
ನಮಃ ಶ್ರೀಮತ್ಕದಂಬಪನ್ತ್ಯಾಗ ಸಂಪನ್ನನ್ಕಲಾಭೋರನಾ ಅರಿಕ
ಕುಸ್ಥ ಭಟ್ಟೋರನಾಳೆನರಿದಾವಿಳೆ ನಾಡುಳ್–

ಮುಂದೆ ಈ ಲಿಪಿಯನ್ನು – ಅಂದರೆ ಕಣ್ಣಿಗೆ ಮಾತ್ರ ಗ್ರಾಹ್ಯವಾಗುವ ಚಿತ್ರರೂಪಿಯನ್ನು ಮುದ್ರಿತ – ಗ್ರಂಥಗಳಾಗಿ ಪ್ರಕಟಿಸಲು ಕಲಿತಾಗ ಮೂರನೆಯ ಕ್ರಾಂತಿ ಸಂಭವಿಸಿತು (ಹಿನ್ನೆಲೆಯಲ್ಲಿ ಮುದ್ರಣ ಯಂತ್ರಗಳ ಕಾರ್ಯವೈಖರಿ ಶಬ್ದ).

ಹದಿನೈದನೆಯ ಶತಮಾನದಲ್ಲಿ ಪ್ರಾರಂಭವಾದ ಕೈಗಾರಿಕೋನ್ಮೇಷಕ್ಕೆ ನಡೆಹಾಸಿ ಸೇಸೆ ತಳೆದದ್ದೇ ಈ ಮುದ್ರಣಕ್ರಾಂತಿ. ಜ್ಞಾನದಾಹಿಗಳಿಗೆ ಅವರು ಇಚ್ಛಿಸಿದಲ್ಲಿ ಜ್ಞಾನ ಆಕರ್ಷಕ ರೂಪದಲ್ಲಿ ಸುಲಭ ಬೆಲೆಗೆ ಲಭಿಸಿ ಜ್ಞಾನಪ್ರಸಾರ ಸರ್ವವ್ಯಾಪಿ ಆಯಿತು. ಆಗ ದೃಶ್ಯ ಯಂತ್ರಸ್ಥಾವರಗಳು, ಮಹಾ ವಿಶ್ವವಿದ್ಯಾಲಯಗಳು, ನೂತನಾನ್ವೇಷಣೆಗಳು, ಸಮರ್ಥ ಆರ್ಥಿಕ ವ್ಯವಹಾರಗಳು, ಸುಭದ್ರ ಸರ್ಕಾರಗಳು ಎಲ್ಲವೂ ಒಂದೆಡೆ ಕೇಂದ್ರೀಕೃತವಾಗಿ ಅಭಿವರ್ಧಿಸಿದುವು. ಈ ನೆಲೆಗಳೇ ನಗರಗಳು.

ಇಪ್ಪತ್ತನೆಯ ಶತಮಾನ: ಕೊಡು–ಕೊಳು ವಿನಿಮಯ ಕಾರ್ಯ ಕ್ಷಿಪ್ರವಾಗಿಯೂ ಸುಲಭವಾಗಿಯೂ ಜರಗುವ ಕೇಂದ್ರವೇ ನಗರವೆಂದು ಅರ್ಥವಾಗುತ್ತದೆ. (ಹಿನ್ನೆಲೆಯಲ್ಲಿ ನಗರ ಪ್ರಾತಿನಿಧಿಕ ಸನ್ನಿವೇಶಗಳ ಬಿಂಬನ)

ಕಾಲಪುರುಷ: ನಿಜ, ನಾಗರಿಕತೆಯ ನರಕೇಂದ್ರವೇ ನಗರ. ಅಂದು ಹೀಗಾಗಬೇಕಾದದ್ದು ಸರಿ. ವರ್ತಮಾನ ಕಾಲದ ಅತಿಕೇಂದ್ರೀಕರಣ ಇದರ ಪರಿಣಾಮ. ಮಾನವ ಇದರ ದುಷ್ಫಲಗಳನ್ನು ಅನುಭವಿಸುತ್ತಿರುವಾಗಲೇ ನಾಲ್ಕನೆಯ ಕ್ರಾಂತಿಯಿಂದಲೂ ಪರಿವೇಷ್ಟಿತನಾಗಿದ್ದಾನೆ.

ಇಪ್ಪತ್ತನೆಯ ಶತಮಾನ: ಏನದು?

ಕಾಲಪುರುಷ: ಅದರ ಹೆಸರು ಎಲೆಕ್ಟ್ರಾನಿಕ್ ಕ್ರಾಂತಿ. ಗಣಕ ಅದರ ಮಿದುಳು, ಅಂದರೆ ನರಕೇಂದ್ರ. ಸ್ವಯಂಚಾಲಿತ ಯಂತ್ರ ಸಾಧನಗಳು ದೇಹ, ಅಂದರೆ ಕಾರ್ಯ ನಿರ್ವಾಹಕ ಸಲಕರಣೆ. ರೇಡಿಯೊ, ದೂರದರ್ಶನ, ದೂರವಾಣಿ ಮುಂತಾದವು ಅವಯವಗಳು, ಅಂದರೆ ಸಂಪರ್ಕೋಪಕರಣಗಳು.

ಇಪ್ಪತ್ತನೆಯ ಶತಮಾನ: ಹಾಗಾದರೆ ಉಸಿರು?

ಕಾಲಪುರುಷ: ಶಕ್ತಿ – ವಿದ್ಯುಚ್ಛಕ್ತಿ.

ಇಪ್ಪತ್ತನೆಯ ಶತಮಾನ: ಈ ಕ್ರಾಂತಿಯ ಪರಿಣಾಮವಾಗಿ ಬದುಕಿನಲ್ಲಿ ಏನು ಬದಲಾವಣೆ ಕಂಡುಬಂದಿದೆ?

ಕಾಲಪುರುಷ: ಈಗ್ಗೆ ಕೇವಲ ಮೂವತ್ತು ವರ್ಷಗಳ ಹಿಂದೆ ಊಹಿಸಲೂ ಸಾಧ್ಯವಿರದಿದ್ದ ರೀತಿಯಲ್ಲಿ ಇಂದು ಸಾರಿಗೆ ಸಂಪರ್ಕ ಅಭಿವರ್ಧಿಸಿ ದೂರಗಳು ಕುಸಿದಿವೆ. ಗಗನಕುಸುಮವಾಗಿದ್ದ ಚಂದ್ರ ನೆರೆಮನೆ ಆಗಿದೆ. ಗ್ರಹಗಳು ಮಾನವನ ಭೌತಾನ್ವೇಷಣೆಯ ಪರಿಧಿಯೊಳಗೆ ಅಡಕವಾಗಿವೆ. ಒಟ್ಟಾರೆ ಬದುಕಿಗೆ ಹೊಸ ಆಯಾಮ ಒದಗಿದೆ. ಎಂದೇ ಇಂದು ನಗರಗಳಲ್ಲಿ ಮಾತ್ರ ಲಭ್ಯವಿರುವ ಸೌಕರ್ಯಗಳು ಮುಂಬರಲಿರುವ ದಿನಗಳಲ್ಲಿ ಎಲ್ಲಿ ಬೇಕೆಂದರಲ್ಲಿ ದೊರೆಯಲಿವೆ. (ಹಿನ್ನೆಲೆಯಲ್ಲಿ ಎಲೆಕ್ಟ್ರಾನಿಕ್ ಬೀಪ್ ಬೀಪ್ ಮುಂತಾದ ಧ್ವನಿಸೂಚಕಗಳು)

ಇಪ್ಪತ್ತನೆಯ ಶತಮಾನ: ನೀನು ಹೇಳುತ್ತಿರುವುದು, ಕಾಲಪುರುಷ, ತಾತ್ತ್ವಿಕವಾಗಿ ಸರಿಯಾಗಿರಬಹುದು. ಈಗ ನಾನೊಂದು ನಿರ್ದಿಷ್ಟ ನಿದರ್ಶನ ಕೊಡುತ್ತೇನೆ. ನಗರಜೀವನದ ಕೃತಕತೆಯಿಂದ ರೋಸಿಹೋದ ಚಂದ್ರಶೇಖರ್ ಹಳ್ಳಿಯ ನಿರ್ಮಲ ಪರಿಸರಕ್ಕೆ ಹೋಗಿ ನೆಲಸುತ್ತಾನೆ. ಅವನ ಬಯಕೆಗಳೇನು? ದೈನಂದಿನ ಜೀವನಕ್ಕೆ ಹಲವು ಬಗೆಯ ಸರಕು ಸೇವೆಗಳು, ಮಕ್ಕಳಿಗೆ ಉನ್ನತ ಶಿಕ್ಷಣ, ಕುಟುಂಬಕ್ಕೆ ವೈದ್ಯಕೀಯ ನೆರವು ಮತ್ತು ಬಾಹ್ಯ ಜಗತ್ತಿನೊಡನೆ ಸಂಪರ್ಕ – ಇವಿಷ್ಟು ಪ್ರಮುಖ ಬೇಕುಗಳು. ಜೊತೆಯಲ್ಲೇ ಅವನ ಉತ್ಪಾದನೆಗೆ ಮಾರುಕಟ್ಟೆಯೂ ಬೇಕು. ಇವೆಲ್ಲವೂ ಹಳ್ಳಿಯಲ್ಲಿ ಹೇಗೆ ಲಭಿಸುತ್ತವೆ?

ಕಾಲಪುರುಷ: ಉತ್ಪಾದಕ–ಗ್ರಾಹಕ ಇಬ್ಬರ ನಡುವೆ ಕ್ಷಿಪ್ರ ಆರ್ಥಿಕ ಸಂಪರ್ಕ ಏರ್ಪಡಿಸಿದಾಗ ಈ ಎಲ್ಲ ಸಮಸ್ಯೆಗಳು ತಂತಾವೇ ಪರಿಹಾರವಾಗುತ್ತವೆ. ಇಲ್ಲಿ ಉತ್ಪಾದಕ ಎಂದರೆ ಸರಕು ಮತ್ತು ಸೇವೆ ಒದಗಿಸಬಲ್ಲವ, ಗ್ರಾಹಕ ಎಂದರೆ ಇವನ್ನು ಬಯಸುವವ. ಗಣಕ ಮಾಡುವುದು ಈ ಕೆಲಸವನ್ನೇ. ಅಂಗಡಿಯಲ್ಲಿರುವ ಸಾಮಗ್ರಿಗಳು, ಗ್ರಂಥಾಲಯದಲ್ಲಿರುವ ಪುಸ್ತಕಗಳು ತಜ್ಞರಲ್ಲಿ ಲಭ್ಯವಿರುವ ಸೇವೆಗಳು ಎಲ್ಲವೂ ಗಣಕದ ನೆನಪಿನಲ್ಲಿ ಲಿಖಿತವಾಗಿರುತ್ತವೆ. ಚಂದ್ರಶೇಖರ ಇಂಥ ಒಂದು ಗಣಕಕ್ಕೆ ಪ್ರಶ್ನೆ ಹಾಕಿ, ಉತ್ತರಪಡೆದು, ಹುಕುಂ ಕೊಟ್ಟರೆ ಮುಂದಿನ ನಿರ್ವಹಣೆ ಸ್ವಯಂಚಾಲಿತವಾಗಿ ನಡೆದಿರುತ್ತದೆ.

ಇಪ್ಪತ್ತನೆಯ ಶತಮಾನ: ಒಂದು ಉದಾಹರಣೆ ಹೇಳು.

ಕಾಲಪುರುಷ: ಪುತಿ ನರಸಿಂಹಾಚಾರ್ ಬರೆದಿರುವ 'ಎಚ್ಚರಚ್ಯುತ' ಕೀರ್ತನೆ ಓದಬೇಕು, ಕೇಳಲೂ ಬೇಕು ಎಂಬುದು ಚಂದ್ರಶೇಖರನ ಬಯಕೆ ಎಂದು ಭಾವಿಸೋಣ. ಗಣಕಕ್ಕೆ ಈ ಆದೇಶವಿತ್ತೊಡನೆ ಆತನ ಅಧ್ಯಯನ ಕೊಠಡಿಯಲ್ಲಿ ದೂರದರ್ಶನ ತೆರೆಯ ಮೇಲೆ ಆ ಕೀರ್ತನೆಯ ಸಾಲುಗಳು ಪಡಿಮೂಡುತ್ತವೆ. ಹಿನ್ನೆಲೆಯಲ್ಲಿ ಹಾಡೂ ಕೇಳಿಬರುತ್ತದೆ:

(ರಾಗ ಸಾವೇರಿ, ತಾಳ ರೂಪಕ)

ಎಚ್ಚರಚ್ಯುತ
ತಿರೆಯಳಲನು ಪರಿಹರಿಸಲು ।ಪಲ್ಲವಿ।
ಎಚ್ಚರೈವಿಭೋ ನೀ
ನೆಚ್ಚದಿರೆ ನೆಚ್ಚಿದವರ
ಬೆಚ್ಚಳಿವುದೇ? ।ಅಪ।
ವೇದಂಗಳು ಹೋದ ಸಮಯದಿ
ಆದಿ ಮತ್ಸ್ಯನಾದುದ ನೆನೆದು
ಪಾದಗತರ ಖೇದವಳಿಸುವಾ
ಮೋದದಿ ಮನವನಿರಿಸಿ ।ಎಚ್ಚರಚ್ಯುತ।

ಬೇಕಾದರೆ ಈ ದೃಶ್ಯಗಳನ್ನು ಸಿನಿಮಾದಲ್ಲಿಯಂತೆ ಬಿತ್ತರಿಸುವುದು ಕೂಡ ಸಾಧ್ಯವಿದೆ.

ಇಪ್ಪತ್ತನೆಯ ಶತಮಾನ: ಸರಿ, ಚಂದ್ರಶೇಖರನಲ್ಲಿ ವಿಕ್ರಯಿಸಲು ಸಾಮಗ್ರಿಗಳಿದ್ದರೆ?

ಕಾಲಪುರುಷ: ಅವುಗಳ ವಿವರಗಳನ್ನು ಗಣಕಕ್ಕೆ ಊಡಿ ತನ್ನ ಷರತ್ತುಗಳನ್ನು ವಿಧಿಸಿದರೆ ಅದು ಸಾಧ್ಯ ಗಿರಾಕಿಗಳ ಒಂದು ತಪಶೀಲನ್ನು ತೆರೆಯ ಮೇಲೆ ಬಿಂಬಿಸಿ ತೋರಿಸುತ್ತದೆ. ಆವಶ್ಯವಿದ್ದರೆ ಅವರ ಜೊತೆ ಕುಳಿತಲ್ಲಿಂದಲೇ ಮುಖನೋಡಿ ಸಂಭಾಶಿಸಬಹುದು ಕೂಡ.

ಇಪ್ಪತ್ತನೆಯ ಶತಮನಾ: ಪರಿಸ್ಥಿತಿ ಇಷ್ಟೊಂದು ಸುಲಭವಾದ ಪಕ್ಷ ನಗರಗಳ ಕಿಷ್ಕಿಂಧಾಪ್ರದೇಶಗಳಲ್ಲಿ ಯಾರಾದರೂ ಏಕೆ ತಾನೇ ತೊಳಲುತ್ತಾರೆ?

ಕಾಲಪುರುಷ: ಅದೆ ನನ್ನ ವಾದ. ನಗರಗಳ ವಿಕೇಂದ್ರೀಕರಣ ಈಗಾಗಲೇ ಆರಂಭವಾಗಿದೆ. ಸಮೀಪದ ಭವಿಷ್ಯದಲ್ಲಿ ಗ್ರಾಮೀಣ ಜೀವನವೇ ಸಾರ್ವತ್ರಿಕವಾಗಲಿದೆ. ಈಗ ನೀನು ಹೇಳಿದ ಮೂರನೆಯ ಕಾರಣ ಪರಿಶೀಲಿಸೋಣ. ಅದೇನೇಂದು ಕೊಂಚ ನೆನಪು ಮಾಡುವೆಯಾ ಇಪ್ಪತ್ತನೆಯ ಶತಮಾನ?

ಇಪ್ಪತ್ತನೆಯ ಶತಮಾನ: ಭೂಮಿಗೆ ಹಸಿರುಡೆ ತೊಡಿಸಿದಂತಿರುವ ಕಾಡುಗಳ ಹನನ ಮತ್ತು ಅವುಗಳ ಸ್ಥಾನದಲ್ಲಿ ವಿಕಾರರೂಪದ ಸಿಮೆಂಟ್ ಪೆಡಂಭೂತಗಳ ನಿರ್ಮಾಣ. ಈ ಮೊದಲು ನಾನು ಪ್ರಸ್ತಾವಿಸಿದ ರೆಡ್ ಇಂಡಿಯನ್ ನಾಯಕ ಈ ಬಗ್ಗೆ 1855ರಷ್ಟು ಹಿಂದೆಯೇ ಏನು ಹೇಳಿದ್ದ ಗೊತ್ತೇ?

ರೆಡ್ ಇಂಡಿಯನ್ ನಾಯಕ: ಬಿಳಿ ಮನುಷ್ಯನ ಪಟ್ಟಣಗಳಲ್ಲಿ ಎಲ್ಲಿಯೂ ಶಾಂತಪ್ರದೇಶವೇ ಇಲ್ಲ. ವಸಂತ ಮಾರುತದಿಂದ ತೊನೆಯುವ ಎಲೆಗಳ ನಿನದ ಅಲ್ಲಿಲ್ಲ. ಜೀರುಂಡೆಗಳ ರೆಕ್ಕೆ ಅದಿರಿಕೆಯ ಸೊಲ್ಲು ಅಲ್ಲಿಲ್ಲ. ಆದರೆ ನಾನೊಬ್ಬ ಅನಾಗರಿಕ. ನನಗೆ ತಿಳಿಯಲಾರದೋ ಏನೋ. ನಗರದ ಹರಟೆ ನನ್ನ ಕಿವಿಗಳನ್ನು ಇರಿಯುತ್ತದೆ. ಕೋಗಿಲೆಯ ಕುಹು ಕುಹೂರವವನ್ನಾಗಲಿ ಇರುಳ ವೇಳೆ ಕೊಳದ ಸುತ್ತ ನೆರೆದು ಅಖಂಡ ಸಂವಾದದಲ್ಲಿ ಲೀನವಾಗಿರುವ ಮಂಡೂಕಗಳ ಟ್ರೊಯ್ ಟ್ರೊಯ್ ನಾದವನ್ನಾಗಲಿ ಆಲಿಸಲಾಗದಿದ್ದರೆ ಬದುಕಿನಲ್ಲಿ ಉಳಿದುದೇನು?

ಕಾಲಪುರುಷ: ಇಪ್ಪತ್ತನೆಯ ಶತಮಾನ! ನೀನು ಇನ್ನೂ ಎರಡು ಕಾರಣ ಹೇಳಿರುವೆಯಲ್ಲವೇ?

ಇಪ್ಪತ್ತನೆಯ ಶತಮಾನ: ಹೌದು – ಪರಿಸರ ಮಾಲಿನ್ಯ ಮತ್ತು ಶಕ್ತಿಬಿಕ್ಕಟ್ಟು.

ಕಾಲಪುರುಷ: ಅರಣ್ಯ ನಾಶ, ಪರಿಸರ ಮಾಲಿನ್ಯ, ಶಕ್ತಿಬಿಕ್ಕಟ್ಟು ಇವು ಪರಸ್ಪರ ಸಂಬಂಧಿಗಳಾಗಿದ್ದು ಮಾನವನನ್ನು ಒಂದು ವಿಷವರ್ತುಲದೊಳಗೆ ಬಂಧಿಸಿಟ್ಟಿವೆ. ಇಲ್ಲಿ ಶಕ್ತಿಬಿಕ್ಕಟ್ಟು ಪ್ರಧಾನ ಸಮಸ್ಯೆ. ಏಕೆಂದರೆ ಏರುತ್ತಿರುವ ಜೀವನಮಟ್ಟ

ಎತ್ತಿ ಹಿಡಿಯಲು ತಂತ್ರವಿದ್ಯೆ ಹೊಸ ಹಾದಿ ಅರಸುತ್ತಲೇ ಇರಬೇಕಾಗುತ್ತದೆ. ತಂತ್ರವಿದ್ಯೆಯ ಅಭಿವರ್ಧನ ಎಂದರೆ ಕಚ್ಚಾ ಸಾಮಗ್ರಿಗಳ ಪೂರೈಕೆ ಮತ್ತು ಅಧಿಕ ಶಕ್ತಿಯ ಬೇಡಿಕೆ. ಇವನ್ನು ತೃಪ್ತಿಪಡಿಸಲು ಕಾಡು ಕಡಿಯದೆ ವಿಧಿ ಇಲ್ಲ. ಜಲವಿದ್ಯುದ್ಯೋಜನೆಗಳೂ ಸಾಕಷ್ಟು ಅರಣ್ಯ ನಾಶಕ್ಕೆ ಕಾರಣವಾಗಿವೆ. ಪರಿಸರಮಾಲಿನ್ಯ ಈ ಕುಕೃತ್ಯಗಳ ಸಹಜ ವಿಷಫಲ, ಮಾನವಕೃತ ಹಾಲಾಹಲ.

ಇಪ್ಪತ್ತನೆಯ ಶತಮಾನ: ಹಾಗೆ ಬಾ ಕಾಲಪುರುಷ! ನಾನು ಹೇಳುತ್ತಿರುವುದೂ ಇದನ್ನೇ. ಈ ವಿಷಚಕ್ರವ್ಯೂಹದಿಂದ ಮಾನವ ಹೊರಗೆ ಬರಲಾರ.

ಕಾಲಪುರುಷ: ಇಲ್ಲ, ಇಲ್ಲ. ಶಕ್ತಿಮೂಲಗಳನ್ನು ಅನ್ವೇಷಿಸುವ ದಿಶೆಯಲ್ಲಿ ಮಾನವ ನಡೆದು ಬಂದ ಹಾದಿ ನೋಡಿದರೆ ಹೀಗಾಗಬೇಕಿಲ್ಲ ಅನ್ನಿಸುತ್ತದೆ. ಆರಂಭದಲ್ಲಿ ಸ್ವಂತ ಸ್ನಾಯುಬಲ ಮಾತ್ರ ಅವನಿಗೆ ಲಭ್ಯವಿತ್ತು. ಇದಕ್ಕೆ ಸಾಕುಪ್ರಾಣಿಗಳ ಸೇರ್ಪಡೆ ಅಧಿಕ ತ್ರಾಣ ಒದಗಿಸಿತು. ಮುಂದೆ ಬೆಂಕಿ ಹೊತ್ತಿಸಲು ಕಲಿತಾಗ ತಂತ್ರವಿದ್ಯೆ ಅಂಬೆಗಾಲಿಟ್ಟಿತು. ಅದಕ್ಕೆ ಉರುವಲು ಮರ, ಕ್ರಮೇಣ ಕಲ್ಲಿದ್ದಲು, ಡಾಂಬರು ಮತ್ತು ಪೆಟ್ರೋಲಿಯಂ ಉತ್ಪನ್ನಗಳು ಉರುವಲುಗಳಾಗಿ ಒದಗಿದಂತೆ ತಂತ್ರವಿದ್ಯೆ ಹಿರಿ ಹೆಜ್ಜೆ ಇಟ್ಟು ಮುನ್ನೆಗೆಯಿತು.

ಇಪ್ಪತ್ತನೆಯ ಶತಮಾನ: ನಿಜ, ಇಂದು ಪೆಟ್ರೋಲಿಯಮ್ ನಾಗರಿಕಜೀವನದ ಅವಿಭಾಜ್ಯ ಅಂಗವಾಗಿದೆ.

ಕಾಲಪುರುಷ: ಆದರೆ ಮಾನವ ಭೂಗರ್ಭದಿಂದ ಬಸಿಯುತ್ತಿರುವ ಮತ್ತು ಪುನರುಪಯುಕ್ತಶೀಲವಲ್ಲದ ಈ ಫಾಸಿಲ್ ಇಂಧನ ಬೇಗನೇ ಬತ್ತಿ ಹೋಗಲಿದೆ.

ಇಪ್ಪತ್ತನೆಯ ಶತಮಾನ: ಶಕ್ತಿಬಿಕ್ಕಟ್ಟಿನ ಮೂಲವೇ ಇದು.

ಕಾಲಪುರುಷ: ಇದರ ಅರ್ಥ ಮಾನವ ಈಗ ನವಶಕ್ತಿಮೂಲಗಳತ್ತ ದೃಷ್ಟಿ ಹಾಯಿಸಬೇಕು ಎಂದು. ಹಾಗೆ ಮಾಡುವ ಸಾಮರ್ಥ್ಯ ಅವನಿಗಿದೆ. ಪರಿಸ್ಥಿತಿಯೂ ಇದನ್ನು ಒತ್ತಾಯಿಸುತ್ತಿದೆ.

ಇಪ್ಪತ್ತನೆಯ ಶತಮಾಮ: ಆ ದಿಶೆಯಲ್ಲಿ ಏನು ನಡೆದಿದೆ?

ಕಾಲಪುರುಷ: ಬೈಜಿಕ ಶಕ್ತಿಯನ್ನು 1945ರಲ್ಲಿ, ನಾಶಕಾರ್ಯಕ್ಕೆ ಆದರೂ, ಪ್ರಯೋಗಿಸಿದಾಗ ಶಕ್ತಿಯ ಹೊಸ ನೆಲೆಯೊಂದು ಮಾನವನ ವಶವಾದಂತಾಯಿತು.

ಇಪ್ಪತ್ತನೆಯ ಶತಮಾನ: ಆದರೆ ಬೈಜಿಕ ಶಕ್ತಿಯ ಉಪಯೋಗ ರೋಗಕ್ಕಿಂತ ಔಷಧಿಯೇ ಅಧಿಕ ಅಪಾಯಕಾರಿ ಎಂಬಂತಾಗಿದೆಯಲ್ಲ?

ಕಾಲಪುರುಷ: ಸದ್ಯಕ್ಕೆ ಇದು ನಿಜ. ಈ ಔಷಧಿ ಬಲು ದುಬಾರಿ ವೆಚ್ಚದ್ದು ಮಾತ್ರವೇ ಅಲ್ಲ, ತೀವ್ರ ಪರಿಸರಮಾಲಿನ್ಯಕ್ಕೆ ಕಾರಣವೂ ಆಗಿದೆ. ಇದರ ತಂತ್ರವಿದ್ಯೆಯಲ್ಲಿ ಸುಧಾರಣೆ ಆದಂತೆ ಅಗ್ಗದರದಲ್ಲಿ ಅಕಲುಷಿತ ಬೈಜಿಕ ಶಕ್ತಿಯ ಉತ್ಪಾದನೆ ಮಾನವನಿಗೆ ಸಿದ್ಧಿಸುತ್ತದೆ. ಸಂಲಯನ ಜ್ವಾಲೆ ಎಂಬ ಹೆಸರು ಕೇಳಿರುವೆಯಷ್ಟೆ?

ಇಪ್ಪತ್ತನೆಯ ಶತಮಾನ: ಹೌದು ಪರಮಾಣುಗಳನ್ನು ಬೆಸೆಯಲು ಬಳಸುವ ತೀವ್ರ ಮತ್ತು ತೀಕ್ಷ್ಣ ಉಷ್ಣತೆಯ ಜ್ಯೋತಿಕೂರ್ಚ.

ಕಾಲಪುರುಷ: ಸರಿಯಾದ ವಿವರಣೆ. ಈ ಜ್ವಾಲೆಗೆ ಉರುವಲಾಗಿ ಮರಳ ಹರಳುಗಳನ್ನು ಒಡ್ಡಿದಾಗ ಅವು ಬೆಸೆದುಕೊಂಡು ಸಂಯುಕ್ತ ಮೈದಳೆಯುತ್ತದೆ. ಅದೇ ವೇಳೆ ಅಲ್ಪ ವಸ್ತು ನಷ್ಟವಾಗಿರುತ್ತದೆ. ಇದು ಅಗಾಧ ಶಕ್ತಿಯಾಗಿ ಪ್ರವಹಿಸಿ ಮಾನವೋಪಯೋಗಕ್ಕೆ ಲಭ್ಯವಾಗುತ್ತದೆ.

ಇಪ್ಪತ್ತನೆಯ ಶತಮಾನ: ಹೈಡ್ರೋಜನ್ ಬಾಂಬಿನ ತತ್ತ್ವ ಇದೇ ಅಲ್ಲವೇ?

ಕಾಲಪುರುಷ: ಹೌದು. ಅಲ್ಲಿ ಹೈಡ್ರೋಜನ್ ಉರುವಲು, ಇಲ್ಲಿ ಮರಳು ಉರುವಲು.

ಇಪ್ಪತ್ತನೆಯ ಶತಮಾನ: ಮರಳು ಹಿಂಡಿ ಶಕ್ತಿ ಬಸಿವ ತಂತ್ರವಿದು. ಇದಲ್ಲದೇ ಬೇರೆ ಯಾವ ಮೂಲದಿಂದ ಶಕ್ತಿ ಒದಗೀತು?

ಕಾಲಪುರುಷ: ಕಡಲ ಅಲೆಗಳಲ್ಲಿ ಪ್ರಕಟವಾಗುವ ಚಲನಶಕ್ತಿ, ಭೂಗರ್ಭದಲ್ಲಿ ಸಂಚಿತವಾಗಿರುವ ಶಾಖಶಕ್ತಿ, ಮತ್ತು ಮಾರುತ ಒಳಗೊಂಡಿರುವ ಚಲನಶಕ್ತಿ. ಆದರೆ ಇವೆಲ್ಲ ಮೂಲಗಳಿಗಿಂತ ತೀವ್ರ, ಸುಲಭ ಮತ್ತು ಸತತವಾದದ್ದು ಸೌರಶಕ್ತಿ.

ಇಪ್ಪತ್ತನೆಯ ಶತಮಾನ: ಏನಂದೆ ಕಾಲಪುರುಷ? ಸಾಕ್ಷಾತ್ ನೇಸರಿಗೇ ಲಗ್ಗೆ ಹಾಕುವುದೇ?

ಕಾಲಪುರುಷ: ಚೆನ್ನಾಗಿ ಊಹಿಸಿದೆ ಮಿತ್ರ! ಭೂಮಿಯಲ್ಲಿಯ ಎಲ್ಲ ಶಕ್ತಿಗಳ ಮೂಲವೂ ಸೂರ್ಯನೇ. ಏಕೆಂದರೆ ಪೆಟ್ರೋಲಿಯಮ್ ಉತ್ಪನ್ನಗಳು, ಗಿಡ, ಮರ ಎಲ್ಲವೂ ಘನೀಭವಿತ ಸೌರಶಕ್ತಿ, ಸುಡುವ ಬಿಸಿಲು, ಬೀಸುವ ಗಾಳಿ, ಹರಿಯುವ ಹೊಳೆ, ಸುರಿಯುವ ಮಳೆ ಕೂಡ ಸೌರಶಕ್ತಿಯ ವಿವಿಧ ರೂಪಗಳು. ಹಲವು ಲಕ್ಷ ವರ್ಷಗಳಿಂದ ಸೂರ್ಯ ಏಕಪ್ರಕಾರವಾಗಿ, ಸತತವಾಗಿ ಮತ್ತು ವಿಪುಳವಾಗಿ ಈ ಶಕ್ತಿಯನ್ನು ಭೂಮಿಯ ಮೇಲೆ ಸುರಿಯುತ್ತಲೇ ಇದೆ. ಸೂರ್ಯಸ್ತುತಿಯನ್ನು ಮುತ್ತುಸ್ವಾಮಿ ದೀಕ್ಷಿತರು ಮಾಡಿರುವ ಪರಿ ಕೇಳು:

ರಾಗ ಸೌರಾಷ್ಟ್ರ, ತಾಳ ಚತುರಶ್ರ ಜಾತಿ ಧ್ರುವ

ಸೂರ್ಯಮೂರ್ತೇ ನಮೋಸ್ತುತೇ ಸುಂದರಚ್ಛಾಯಾಧಿಪತೇ ।ಪ।
ಕಾರ್ಯಕಾರಣಾತ್ಮಕ ಜಗತ್ಪ್ರಕಾಶ ಸಿಂಹಾರಾಶ್ಯಾಧಿಪತೇ
ಆರ್ಯವಿನುತ ತೇಜಸ್ಫೂರ್ತೇ ಆರೋಗ್ಯಾದಿ ಫಲದಕೀರ್ತೇ ।ಅಪ।
ಸಾರಸಮಿತ್ರ ಮಿತ್ರಭಾನೋ ಸಹಸ್ರಕಿರಣ ಕರ್ಣಸೂನೋ
ಕ್ರೂರ ಪಾಪಹರ ಕೃಶಾನೋ ಗುರುಗುಹಮೋದಿತ ಸ್ವಭಾನೋ
ಸೂರಿಜನೇಡಿತ ಸುದಿನಮಣೀ ಸೋಮಾದಿಗ್ರಹ ಶಿಖಾಮಣೀ
ಧೀರಾರ್ಚಿತ ಕರ್ಮಸಾಕ್ಷಿಣೀ ದಿವ್ಯತರ ಸಪ್ತಾಶ್ವ ರಥಿನೇ
ಸೌರಾಷ್ಟ್ರಾರ್ಣ ಮಂತ್ರಾತ್ಮನೇ ಸೌವರ್ಣಸ್ವರೂಪಾತ್ಮನೇ
ಭಾರತೀಶಹರಿಹರಾತ್ಮನೇ ಭಕ್ತಿಮುಕ್ತಿ ವಿತರಣಾತ್ಮನೇ

ಇಪ್ಪತ್ತನೆಯ ಶತಮಾನ: ನಿಜಕ್ಕೂ ಸೌರಶಕ್ತಿಯ ಕಡಲಿನಲ್ಲಿ ತೇಲುತ್ತಿರುವ ಬೆಂಡು ಈ ಭೂಮಿ ಅಲ್ಲವೇ?

ಕಾಲಪುರುಷ: ಹಾಗೆನ್ನಬಹುದು. ಸೌರಶಕ್ತಿ ಹುಚ್ಚು ಹೊಳೆಯಂತೆ – ಅಪಾರಶಕ್ತಿಯ ಅಖಂಡ ಹರಿವು. ತುಂಬು ಹೊನಲಿಗೆ ಕಟ್ಟೆ ಕಟ್ಟಿ ಜಲಾಶಯ ನಿರ್ಮಿಸಿ ಅಲ್ಲಿ ಸಂಚಯವಾಗುವ ವಿಭವಶಕ್ತಿ ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸಿ ನಾಗರಿಕತೆಯ ಗಾಲಿಗಳನ್ನು ಉರುಳಿಸುತ್ತಿರುವುದು ಸರಿಯಷ್ಟೆ. ಅದೇ ಪ್ರಕಾರ ಸೌರಶಕ್ತಿಗೆ ಕಟ್ಟೆಹಾಕಿ ಉದ್ದಿಷ್ಟ ಕಾರ್ಯದತ್ತ ಹರಿಸುವ ಇಂದಿನ ಪ್ರಯತ್ನ ಶೀಘ್ರವಾಗಿ ಫಲಿಸಿ ಮುಂದಿನ ಶತಮಾನದಲ್ಲಿ ಚಾಲ್ತಿಗೆ ಬರಲಿದೆ.

ಇಪ್ಪತ್ತನೆಯ ಶತಮಾನ: ಹೇಗೆ?

ಕಾಲಪುರುಷ: ವಾಯುಮಂಡಲದ ಆಚೆಗಿನ ನಿರ್ದ್ರವ್ಯ ಆಕಾಶದಲ್ಲಿ ಭೂಮಿಯನ್ನು ಸತತವಾಗಿ ಪರಿಭ್ರಮಿಸುತ್ತಿರುವಂತೆ ಕೃತಕ ಉಪಗ್ರಹಗಳ ಸರಣಿ ನಿಯೋಜಿತವಾಗಿರುವುದು. ಸೌರಶಕ್ತಿ ಸಮುದ್ರದಲ್ಲಿ ವಿಹರಿಸುವ ಪ್ರಯೋಗ ನೌಕೆಗಳಿವು. ಸದಾ ಸೂರ್ಯನೆಡೆಗೆ ತೆರೆದುಕೊಂಡಿರುವ ಶಕ್ತಿಸಂಗ್ರಾಹಕ ಫಲಕಗಳನ್ನು ಇವುಗಳಲ್ಲಿ ಅಳವಡಿಸಲಾಗುವುದು.

ಇಪ್ಪತ್ತನೆಯ ಶತಮಾನ: ಆ ಪ್ರವಾಹದಿಂದ ಶಕ್ತಿ ಗೋಚುವುದು ಇವುಗಳ ಹೊಣೆ?

ಕಾಲಪುರುಷ: ಹೌದು. ಬಟ್ಟಲಿನಾಕಾರದ ಇವು ನಿಜಕ್ಕೂ ಗೋಚುವ ಕೆಲಸವನ್ನೇ ಮಾಡುವುದಾಗಿದೆ. ಹೀಗೆ ಸಂಗ್ರಹಿಸಿದ ಶಕ್ತಿಯನ್ನು ಅಲ್ಲಿಯೇ ಸೂಕ್ಷ್ಮತರಂಗಗಳಾಗಿ ಪರಿವರ್ತಿಸಲಾಗುವುದು – ಬಿಸಿಲನ್ನು ವಿದ್ಯುತ್ತಾಗಿ ಅಥವಾ ವಿದ್ಯುತ್ತನ್ನು ಶಾಖವಾಗಿ ಮಾರ್ಪಡಿಸುವುದಿಲ್ಲವೇ, ಹಾಗೆ. ಸೂಕ್ಷ್ಮ ತರಂಗಗಳ ಅತಿಶಕ್ತಿಯುತ ದೂಲಗಳನ್ನು ಭೂಮಿಯಲ್ಲಿಯ ನಿಯೋಜಿತ ಗ್ರಾಹಕ ಠಾಣೆಗಳಿಗೆ ಬೀರಲಾಗುವುದು – ಬಿಸಿಲಿಗೆ ಕನ್ನಡಿ ಒಡ್ಡಿ ಪ್ರತಿಫಲಿತ ಕಂಬಿಯನ್ನು ಕೋಣೆಯೊಳಕ್ಕೆ ತೂರುವಂತೆ.

ಇಪ್ಪತ್ತನೆಯ ಶತಮಾನ: ಈ ಠಾಣೆಗಳು ದೂಲಗಳನ್ನು ಸ್ವೀಕರಿಸುತ್ತವೆ. ಬಳಿಕ?

ಕಾಲಪುರುಷ: ಒಡನೆ ಅವನ್ನು ವಿದ್ಯುತ್ತಾಗಿ ಪರಿವರ್ತಿಸಿ ಸಾರ್ವಜನಿಕ ವಿದ್ಯುಜ್ಜಾಲಕ್ಕೆ ಊಡುತ್ತವೆ.

ಇಪ್ಪತ್ತನೆಯ ಶತಮಾನ: ಅಲ್ಲಿಗೆ ಮಾಲಿನ್ಯ ಶೂನ್ಯ ಶಕ್ತಿಯ ಸಂತತ ಪ್ರವಾಹ ಒದಗುವುದೆಂದಾಯಿತು. ಇನ್ನೂ ಬೇರೆ ಶಕ್ತಿ ಮೂಲಗಳಿವೆಯೇ?

ಕಾಲಪುರುಷ: ಧಾರಾಳವಾಗಿ. ಉದಾಹರಣೆಗೆ ಕ್ಷುದ್ರಗ್ರಹಗಳ ಹೊನಲಿನಿಂದ ಶಕ್ತಿ ಬಸಿಯಬಹುದು. ಇಡೀ ವಿಶ್ವವನ್ನು ನೇಯ್ದು ಆಕಾಶಕಾಯಗಳ ಕಕ್ಷೆಯನ್ನು ನಿರ್ಧರಿಸುವ ಗುರುತ್ವಬಲವನ್ನು ಪಳಗಿಸಬಹುದು. ದ್ರವ್ಯ ಮತ್ತು ಪ್ರತಿದ್ರವ್ಯ ಸಂಘಟ್ಟಣೆಯಿಂದ ಅಗಾಧ ಶಕ್ತಿಯನ್ನು ಉತ್ಪಾದಿಸಬಹುದು. ಆದರೆ ಇವೆಲ್ಲ ಅತಿ ದೂರದ ಭವಿಷ್ಯದಲ್ಲಿ ಸಾಧ್ಯವಾಗಬಹುದಾದ ಸಾಹಸಗಳು. ಅದಿರಲಿ ಸದ್ಯೋಭವಿಷ್ಯದಲ್ಲಿ ಶಕ್ತಿ ಬಿಕ್ಕಟ್ಟು ಸೌರಶಕ್ತಿಯ ಬಸಿತದಿಂದ ಪರಿಹಾರವಾಗುವುದು ದಿಟ.

ಇಪ್ಪತ್ತನೆಯ ಶತಮಾನ: ಉಳಿದ ಸಮಸ್ಯೆಗಳೆಲ್ಲವೂ ಆಗ ತಾವಾಗಿಯೇ ಮಾಯವಾಗುತ್ತವೆ ಎಂಬುದು ತಾನೇ ನಿನ್ನ ವಾದ?

ಕಾಲಪುರುಷ: ಅದೇ.

ಇಪ್ಪತ್ತನೆಯ ಶತಮಾನ: ಹಾಗಾದರೆ ಬರಲಿರುವ ದಿನಗಳಲ್ಲಿ ಬದುಕು ಹೇಗಿರಬಹುದು?

ಕಾಲಪುರುಷ: ತಾಳು ಅಂಬಿಕಾತನಯದತ್ತರ ಕವನ ಹಾಡಿ ನಿನ್ನ ತಮ್ಮ ಇಪ್ಪತ್ತೊಂದನೆಯ ಶತಮಾನವನ್ನು ಕಾಲ್ಪನಿಕವಾಗಿ ಆವಾಹಿಸುತ್ತೇನೆ. ಅವನೇ ಹೇಳಲಿ:

ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ
ಮಸೆದ ಗಾಳಿ ಪಕ್ಕ ಪಡೆಯುತ್ತಿತ್ತು ಸಹಜ ಪ್ರಾಸಾ
ಮಿಂಚಿ ಮಾಯವಾಗುತ್ತಿತ್ತು ಒಂದು ಮಂದಹಾಸಾ । ಭೃಂಗದ ।
ಗಾಳಿಯೊಡನೆ ತಿಳ್ಳಿಯಾಡುತಾಡುತದರ ಓಟಾ
ದಿಕ್ತಟಗಳ ಹಾಯುತ್ತಿತ್ತು ಅದರ ಬಿದಿಗೆ ನೋಟಾ
ನಕ್ಕು ನಗುವ ಚಿಕ್ಕೆಯೊಡನೆ ಬೆಳೆಸುತ್ತಿತ್ತು ಕೂಟಾ ।ಭೃಂಗದ।

ಇಪ್ಪತ್ತೊಂದನೆಯ ಶತಮಾನ: ನಾನು ಇಪ್ಪತ್ತೊಂದನೆಯ ಶತಮಾನ, ಕಾಲಪುರುಷ! ನನ್ನ ಕಾಲಕ್ಕೆ ಮೊದಲೇ ನನ್ನನ್ನೇಕೆ ರಂಗ ಪ್ರವೇಶಿಸುವಂತೆ ಮಾಡಿದೆ?

ಕಾಲಪುರುಷ: ಮಿತ್ರ! ನಿನ್ನ ಜೀವಿತಾವಧಿಯಲ್ಲಿ ಮಾನವಜೀವನ ಹೇಗಿರುತ್ತದೆ? ಕೊಂಚ ವಿವರಿಸುವೆಯಾ?

ಇಪ್ಪತ್ತೊಂದನೆಯ ಶತಮಾನ: ವರ್ತಮಾನ ಕಾಲದಲ್ಲಿ ಮಾನವನ ಎದುರು ಎರಡು ಸ್ಪಷ್ಟ ಮಾರ್ಗಗಳು ತೆರೆದುಕೊಂಡಿವೆ. ನಾಳಿನ ಪೀಳಿಗೆಯ ಬಗ್ಗೆ ಒಂದಿಷ್ಟೂ ಚಿಂತಿಸದೆ ಅನುಭೋಗಾತಿರೇಕತ್ವದ ದಾಸನಾಗಿ ವಿನಾಶಮಾರ್ಗಗಾಮಿ ಆಗುವುದು ಒಂದು ಮಾರ್ಗ. ಜನಸಂಖ್ಯೆಯಲ್ಲಿ ಅತಿ ವೃದ್ಧಿ, ಪರಿಸರಮಾಲಿನ್ಯ, ಪರಮಾಣುಯುದ್ಧ ಮುಂತಾದ ಪಿಡುಗುಗಳತ್ತ ಅತಿ ವೇಗದಿಂದ ಧಾವಿಸುವ ಈ ಹಾದಿಯಲ್ಲಿ ಆತ ಹೋದದ್ದಾದರೆ ನನ್ನ ದಿನಗಳಲ್ಲಿ ಮಾನವ ಸಂತತಿ ನಶಿಸಿಹೋಗುವ ಅಪಾಯವಿದೆ.

ಕಾಲಪುರುಷ: ಎರಡನೆಯ ಮಾರ್ಗ ಯಾವುದು?

ಇಪ್ಪತ್ತೊಂದನೆಯ ಶತಮಾನ: ಈಗ ಲಭ್ಯವಿರುವ ಜ್ಞಾನವನ್ನು ಜನಹಿತಕ್ಕೋಸ್ಕರ ಬಳಸುವ ವಿವೇಕಮಾರ್ಗಗಾಮಿ ಆಗುವುದು.

ಕಾಲಪುರುಷ: ಇದು ಹೇಗೆ ಸಾಧ್ಯವಾದೀತು?

ಇಪ್ಪತ್ತೊಂದನೆಯ ಶತಮಾನ: ಮಾನವ ನಾಲ್ಕು ಅಪಾಯಗಳ ಎದುರು ವಿಶೇಷ ಎಚ್ಚರಿಕೆ ವಹಿಸುವುದರಿಂದ ಸಾಧ್ಯವಾದೀತು. ಒಂದನೆಯದು ಜನಸಂಖ್ಯೆ ಇನ್ನು ಮುಂದೆ ಏರದಂತೆ ಅದಕ್ಕೆ ತಡೆ ಹಾಕಲೇಬೇಕು. ಎರಡನೆಯದು ನಗರಗಳ ವಿಕೇಂದ್ರೀಕರಣ ಜರೂರಾಗಿ ಸಾಧಿಸಬೇಕು. ಮೂರನೆಯದು ಶಕ್ತಿ ಪಡೆಯಲು ಸೌರಶಕ್ತಿಯಂಥ ಬಾಹ್ಯ ಹಾಗೂ ನಿರ್ಮಲ ಮೂಲಗಳನ್ನು ಅವಲಂಬಿಸಬೇಕು. ನಾಲ್ಕನೆಯದು ಪ್ರಾದೇಶಿಕ ಅಸಮತೆಗಳನ್ನು ನಿರ್ಮೂಲಿಸಲೇಬೇಕು.

ಕಾಲಪುರುಷ: ಅಂದರೆ ಭೂಮಿ ಒಂದು ಸೀಮಿತ ಕುಟುಂಬ. ಇದರಲ್ಲಿಯ ಯಾವುದೇ ಪ್ರದೇಶ ಅನಾರೋಗ್ಯಪೀಡಿತವಾಗಿದ್ದರೆ ಅದರ ಸೋಂಕು ಇಡೀ ಗ್ರಹಕ್ಕೆ ತಾಗದಿರದು ಎಂಬ ಅರಿವು ಮೂಡಿ ತದನುಗುಣವಾಗಿ ಮಾನವ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ತಾನೇ ನಿನ್ನ ಆಶಯ?

ಇಪ್ಪತ್ತೊಂದನೆಯ ಶತಮಾನ: ಹೌದು ಅದೇ!

ಕಾಲಪುರುಷ: ಈ ಹಾದಿಯನ್ನು ಆತ ಹಿಡಿಯುವನೆಂದು ನನಗೆ ಭರವಸೆ ಉಂಟು. ಆಗ ಅಂದಿನ ಪ್ರಪಂಚ ಹೇಗಿರುವುದು?

ಇಪ್ಪತ್ತೊಂದನೆಯ ಶತಮಾನ: ಮನುಷ್ಯರು ಭೂಮಿಯ ಮೇಲಿನ ವಾಸಯೋಗ್ಯ ಪ್ರದೇಶಗಳಲ್ಲೆಲ್ಲ ವಿರಳವಾಗಿ ಹರಡಿ ಹೋಗಿರುತ್ತಾರೆ. ಕೆಲವೇ ಎಡೆಗಳಲ್ಲಿ ದಟ್ಟೈಸಿಕೊಂಡಿರುವುದಿಲ್ಲ. ಅವರ ಸಂಪರ್ಕ ಸಮಸ್ಯೆಗಳೆಲ್ಲವನ್ನೂ ಎಲೆಕ್ಟ್ರಾನಿಕ್ ಉಪಕರಣಗಳು ಪರಿಹರಿಸಿರುತ್ತವೆ.

ಕಾಲಪುರುಷ: ಹೇಗೆ?

ಇಪ್ಪತ್ತೊಂದನೆಯ ಶತಮಾನ: ಉದಾಹರಣೆಗೆ ಮಡಿಕೇರಿ ನಿವಾಸಿ ರಾಘವೇಂದ್ರ ನ್ಯೂಯಾರ್ಕ್ ನಾಗರಿಕ ಆನಂದವರ್ಧನನ ಜೊತೆ ನೇರ ದೂರವಾಣಿ ಮೂಲಕ ಆಗಲೇ ಮಾತಾಡಬಹುದು. ಜಪಾನಿನಲ್ಲಿರುವ ಮಿತ್ರ ವೆಂಕಟರಮಣನ ಮನೆಯಲ್ಲಿ ಜರಗುವ ಸಮಾರಂಭವನ್ನು ದೂರದರ್ಶನ ತೆರೆಯ ಮೇಲೆ ನೋಡಿ ಮತ್ತು ಕೇಳಿ ಆನಂದಿಸಬಹುದು. ತನ್ನ ಪ್ರತಿಕ್ರಿಯೆಯನ್ನು ಒಡನೆ ಆತನಿಗೆ ತಿಳಿಸಬಹುದು ಕೂಡ. ವೈದ್ಯಕೀಯ ಸೇವೆ, ಶೈಕ್ಷಣಿಕ ಸಲಹೆ, ಮಾರುಕಟ್ಟೆ ವ್ಯವಹಾರ ಮುಂತಾದ ದೈನಂದಿನ ಚಟುವಟಿಕೆಗಳನ್ನು ಸ್ವಯಂಚಲಿಗಳ ಬಳಕೆಯಿಂದ ಆಗಿಂದಾಗಲೇ ನಿರ್ವಹಿಸಬಹುದು.

ಕಾಲಪುರುಷ: ಇವೆಲ್ಲ ಕುಳಿತಲ್ಲೇ ಆಗುವಂಥವು. ಇರಲಿ, ಸಾರಿಗೆ ವ್ಯವಸ್ಥೆ ಹೇಗಿರುತ್ತದೆ?

ಇಪ್ಪತ್ತೊಂದನೆಯ ಶತಮಾನ: ಇಂದು ಬಸ್, ರೈಲು, ವಿಮಾನ, ಹಡಗು ಎಂಬ ನಾಲ್ಕು ಪ್ರಮುಖ ಸಾರ್ವಜನಿಕ ಸಾರಿಗೆ ಸಾಧನಗಳಿರುವುದು ಸರಿಯಷ್ಟೆ. ನಿಗದಿಯಾದ ವೇಳಾಪಟ್ಟಿಗೆ ಅನುಗುಣವಾಗಿ ಇವು ಗೊತ್ತಾದ ಹಾದಿಗಳಲ್ಲಿ ಸಂಚರಿಸುತ್ತವೆ. ಬಿಡಿ ವ್ಯಕ್ತಿ ತದನಸಾರವಾಗಿ ತನ್ನ ಪ್ರಯಾಣ ವಿವರಗಳನ್ನು ಹೊಂದಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಈ ಗಳಿಗೆ ಶ್ರೀರಂಗಪಟ್ಟಣದಿಂದ ಹೊರಟು ಧರ್ಮಸ್ಥಳಕ್ಕೆ ಯಾತ್ರೆ ಹೋಗಬೇಕೆಂದು ಬಯಸಿದರೆ ಆತನ ವಿಶಿಷ್ಟ ಅಪೇಕ್ಷೆ ಪೂರೈಸುವ ಸಾರ್ವಜನಿಕ ಏರ್ಪಾಡು ಇರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಆತ ಮೋಟಾರ್ ಕಾರನ್ನು ಆಶ್ರಯಿಸುವುದು ವಾಡಿಕೆ. ಕಾರ್ ಒಂದು ವೈಯಕ್ತಿಕ ಸಲಕರಣೆ. ಇದರ ಓಟಕ್ಕೆ ಯೋಗ್ಯ ಮಾರ್ಗ ಬೇಕು, ಸೇತುವೆಗಳಿರಬೇಕು. ಇಲ್ಲಿಯೂ ಹಾದಿ ನಡುವೆ ನೂರೆಂಟು ವಿಘ್ನಗಳು. ನನ್ನ ಕಾಲದ ಮಾನವ ನೆಲದ ಮೇಲಿನ ಈ ನಿಧಾನ ಪ್ರಯಾಣಕ್ಕೆ ಪೂರ್ಣ ವಿದಾಯ ಹೇಳಿರುತ್ತಾನೆ.

ಕಾಲಪುರುಷ: ಆತ ವಿಮಾನದಲ್ಲಿ ಹಾರಿ ಹೋಗಿ ಇಳಿಯುತ್ತಾನೆ ಎಂಬುದು ನಿನ್ನ ಇಂಗಿತವಾಗಿದ್ದರೆ ಅಲ್ಲಿ ನೂರೆಂಟು ಅಲ್ಲ ಸಾವಿರಾರು ಅಡ್ಡಿ ಅಡಚಣೆಗಳು ಎದುರಾಗುವುದು ಖಂಡಿತ.

ಇಪ್ಪತ್ತೊಂದನೆಯ ಶತಮಾನ: ಅವು ಯಾವುವೂ ಇಲ್ಲದಿರುವುದೇ ಇಲ್ಲಿಯ ಸ್ವಾರಸ್ಯ. ಇಂದಿನವನಿಗೆ ಕಾರ್ ಹೇಗೋ ಅಂದಿನವನಿಗೆ ಕುಪ್ಪಳಿ ವಿಮಾನ ಹಾಗೆ. ಇದೊಂದು ಕೌಟುಂಬಿಕ ಅಥವಾ ಖಾಸಾ ವೈಯಕ್ತಿಕ ಸಾರಿಗೆ ಸಾಧನ.

ಕಾಲಪುರುಷ: ಕುಪ್ಪಳಿ ವಿಮಾನವೆಂದರೇನು? ಇಪ್ಪತ್ತೊಂದನೆಯ ಶತಮಾನ: ಅದು ನಿಂತಲ್ಲಿಂದ ನೇರ ಮೇಲಕ್ಕೆ ನೆಗೆಯುತ್ತದೆ. ಅದರಲ್ಲಿ ಬಳಕೆ ಆಗುವುದು ರಾಕೆಟ್ ತಂತ್ರ. ಮುಕ್ತ ವಾಯುಮಂಡಲದಲ್ಲಿ ಅದರ ಸಂಚಾರ. ಪಥ ನಿಯಂತ್ರಣವನ್ನು ಗಣಕ ನಿರ್ವಹಿಸುತ್ತದೆ. ವೈಮಾನಿಕ ಇಚ್ಛಿಸುವಲ್ಲಿ ಅದು ನೇರ ಇಳಿಯುತ್ತದೆ.

ಕಾಲಪುರುಷ: ಅಂದಮೇಲೆ ವಿಮಾನ ನಿಲ್ದಾಣ, ಓಡುದಾರಿ ಮುಂತಾದ ಭಾರೀ ಏರ್ಪಾಡುಗಳು...

ಇಪ್ಪತ್ತೊಂದನೆಯ ಶತಮಾನ: ಎಲ್ಲವೂ ಗತಶತಮಾನದ ಭವ್ಯಸ್ಮಾರಕಗಳು. ಇನ್ನೂ ಸುಧಾರಿಸಿದ ಮತ್ತು ಬಲಿಷ್ಠವಾದ ಕುಪ್ಪಳಿವಿಮಾನ ಏರಿ, ವಾಯುಮಂಡಲಾತೀತ ಆಕಾಶದಲ್ಲಿ ನಿತ್ಯ ಸಂಚಾರಿಗಳಾಗಿರುವ ಕೃತಕೋಪಗ್ರಹಗಳ ಮೇಲೆ ಇಳಿಯಬಹುದು. ಇವು ಅಂತರಿಕ್ಷ ವೇದಿಕೆಗಳು. ಬೇರೆ ಬೇರೆ ಎತ್ತರಗಳಿರುವ ಇಂಥ ಹಲವಾರು ವೇದಿಕೆಗಳನ್ನು ಸರದಿಯಲ್ಲಿ ಜಿಗಿಹಲಗೆಗಳಾಗಿ ಬಳಸಿಕೊಂಡು ಚಂದ್ರಲೋಕಕ್ಕೆ ಹೋಗಿ ಮರಳುವುದು ನನ್ನ ಕಾಲದಲ್ಲಿ ಕೈಗೂಡುತ್ತದೆ. ವಾಸ್ತವಾಗಿ ಆಗ ಚಂದ್ರಲೋಕ ಮಾನವನ ನೆರೆ ವಸಾಹತಾಗಿ ನಳನಳಿಸಿರುತ್ತದೆ. ಆತ ಮುಂದೆ ಕೈಗೊಳ್ಳಲಿರುವ ವಿಶ್ವ ಪರ್ಯಟನೆಯಲ್ಲಿ ಇದು ಮೊದಲ ತಾಂಡೆ.

ಇಪ್ಪತ್ತನೆಯ ಶತಮಾನ: ಆಗ ಜೀವನ ಹೇಗಿರುವುದೋ!

ಇಪ್ಪತ್ತೊಂದನೆಯ ಶತಮಾನ: ಅಣ್ಣಾ! ನಿನ್ನ ಇಂಗಿತ ನನಗೆ ತಿಳಿಯಿತು. ಆದರೆ ನಿನ್ನ ಕಾಲದಲ್ಲಿಯ ಸಮಸ್ಯೆಗಳ ಮುಖ್ಯ ಕಾರಣ ಏನು ಗೊತ್ತೇ? ಅಮಿತ ಮುಸುಡುಗಳು ಮಿತ ಕವಳವನ್ನು ಮುಕ್ಕಲು ನಡೆಸುವ ಹೋರಾಟ. ನನ್ನ ಕಾಲದಲ್ಲಿ ಈ ಸನ್ನಿವೇಶ ಪೂರ್ತಿ ಮಾಯವಾಗಿರುತ್ತದೆ. ತಳಿ ವಿಜ್ಞಾನದಲ್ಲಿ ಆಗಿರುವ ಮತ್ತು ಆಗಲಿರುವ ಮಹತ್ತ್ವದ ಶೋಧಗಳ ಪರಿಣಾಮವಾಗಿ ಭೂಮಿಯೊಂದು ಅಮರಾವತಿ ಆಗಿರುತ್ತದೆ. ಇಲ್ಲಿಯ ಮಿತಜನ ಅಮಿತ ಅವಕಾಶಗಳನ್ನು ಬಳಸಿಕೊಳ್ಳುವ ಸಾಹಸಕ್ರೀಡೆಯಲ್ಲಿ ಅಥವಾ ಉಲ್ಲಾಸ ಕ್ರೀಡೆಯಲ್ಲಿ ಉದ್ಯುಕ್ತರಾಗಿರುತ್ತಾರೆ. ವಿಶ್ವಮಾನವರಾಗುವತ್ತ ದೈತ್ಯದಾಪು ಇಟ್ಟಿರುತ್ತಾರೆ.

ಓ ನನ್ನ ಚೇತನ
ಆಗು ನೀ ಅನಿಕೇತನ! ।ಓ ನನ್ನ।
ಎಲ್ಲಿಯೂ ನಿಲ್ಲದಿರು
ಮನೆಯನೆಂದೂ ಕಟ್ಟದಿರು
ಕೊನೆಯನೆಂದೂ ಮುಟ್ಟದಿರು
ಓ ಅನಂತವಾಗಿರು ।ಓ ನನ್ನ।
ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗು
ಆಗು ಆಗು ಆಗು ಆಗು ।ಓ ನನ್ನ।

–ಕುವೆಂಪು

ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿಹಾರುತಿದೆ ನೋಡಿದಿರಾ?

ಮುಟ್ಟದೆ ದಿಙ್ಮಂಡಲಗಳ ಅಂಚ
ಆಚೆಗೆ ಚಾಚಿದ ತನ್ನಯ ಚುಂಚ
ಬ್ರಹ್ಮಾಂಡಗಳ ಒಡೆಯಲು ಎಂದೋ
ಬಲ್ಲರು ಯಾರು ಹಾಕಿದ ಹೊಂಚ
ಹಕ್ಕಿ ಹಾರುತಿದೆ ನೋಡಿದಿರಾ!

– ಅಂಬಿಕಾತನಯದತ್ತ!

ವ್ಯಕ್ತಿ – ಪರಿಸರ ಸಂಬಂಧ ವ್ಯಷ್ಟಿ – ಸಮಷ್ಟಿ ಸಂಬಂಧದಂತೆ ಅವಿಭಾಜ್ಯ. ಆದರೆ ಒಂದು ವ್ಯತ್ಯಾಸ ವ್ಯಕ್ತಿರಹಿತ ಪರಿಸರವಿರಬಹುದು, ಪರಿಸರರಹಿತ ವ್ಯಕ್ತಿ ಇರಲಾರದು. ಜನ್ಮತಃ ವಿವೇಚನ ಸಾಮರ್ಥ್ಯಯುತನಾದ ವ್ಯಕ್ತಿ ತನ್ನ ಪ್ರತಿಯೊಂದು ಚಟುವಟಿಕೆಯೂ ಪರಿಸರ ಪೋಷಕವಾಗುವಂತೆ, ಎಂದೂ ಪರಿಸರ ಶೋಷಕವಾಗದಂತೆ, ಎಚ್ಚರಿಕೆ ವಹಿಸುವುದು ಅಗತ್ಯ. ಏಕೆಂದರೆ ಆ ಕ್ಷಣದಲ್ಲಿ ಅಥವಾ ಆ ಸ್ಥಳದಲ್ಲಿ ವ್ಯಕ್ತಿ ಹಠಾತ್ತನೆ ಎಸಗುವ ಒಂದು ಕ್ರಿಯೆ ಆತನಿಗೆ ತಾತ್ಕ್ಷಣಿಕ ಯಶಸ್ಸು ತರಬಹುದಾದರೂ, ಅದು ಪರಿಸರಕ್ಕೆ ಘಾತಕವಾಗುವುದಾದರೆ, ಅಂತಿಮವಾಗಿ ಸ್ವತಃ ಆತನಿಗೇ ಘಾತಕವಾಗುವುದು ನಿಸರ್ಗ ನಿಯಮ: ಬಿತ್ತಿದಂತೆ ಬೆಳೆ. ಆದ್ದರಿಂದ ಸಮಷ್ಟಿಯ ಹಿತಕ್ಕೆ ಮಾರಕವಾಗಬಲ್ಲ ಯಾವ ಕ್ರಿಯೆಯನ್ನೂ ವ್ಯಷ್ಟಿ ಮಾಡತಕ್ಕದ್ದಲ್ಲ, ಮಾಡಿದ್ದುಣ್ಣೋ ಮಹಾರಾಯ!

– ಮುಗಿಯಿತು –

ಲೇಖಕ ಜಿ.ಟಿ. ನಾರಾಯಣ ರಾವ್
1993 ಅತ್ರಿ ಬುಕ್ ಸೆಂಟರ್ ಪ್ರಕಟಣೆ, ಮೊದಲ ಮುದ್ರಣ 1981. ಪುಟ ಸುಮಾರು 90 ಬೆಲೆ ರೂ 12]
ವಿ–ಪ್ರತಿಯ ಕೊನೆಯ ಕಂತು ಪ್ರಕಟವಾಗಿ ಮುಗಿದ ದಿನ 22–1–2013

ಲೇಖಕರ ಪರಿಚಯ



ಮಡಿಕೇರಿಯ ಜಿಟಿ ನಾರಾಯಣರಾವ್ (1926 – 2008) ಮದ್ರಾಸು ವಿಶ್ವವಿದ್ಯಾನಿಲಯದಿಂದ ಗಣಿತ ಎಂಎ ಪದವಿ (1947), ಕಾಲೇಜ್ ಉಪನ್ಯಾಸಕ (1947–69), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕ (1969–86) ಆಗಿದ್ದರು. ನಡುವೆ 1952–69ರ ಅವಧಿಯಲ್ಲಿ ಎನ್.ಸಿ.ಸಿ ಅಧಿಕಾರಿಯಾಗಿಯೂ 1954–63 ಕಾಲೇಜಿನ ಸಹಕಾರಿ ಸಂಘದ ಕಾರ್ಯದರ್ಶಿಯಾಗಿಯೂ ಸಾರ್ಥಕ್ಯವನ್ನು ಕಂಡಿದ್ದರು. ತಾಪೇದಾರಿಯಿಂದ ನಿವೃತ್ತರಾದ ಮೇಲೆ ಪೂರ್ಣಕಾಲಿಕ ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚನೆ, ಸಾಹಿತ್ಯ ಕಲಾಪೋಷಣೆಗಳಲ್ಲಿ ತೊಡಗಿಸಿಕೊಂಡಿದ್ದರು. ಜೀವಿತಕಾಲದಲ್ಲಿ ಅವರು ರೂಢಿಸಿಕೊಂಡಿದ್ದ ಮತ್ತು ಪ್ರಚುರಿಸುತ್ತಿದ್ದ ವೈಜ್ಞಾನಿಕ ಮನೋಧರ್ಮಾನುಸಾರವಾಗಿ ಮತ್ತು ಅವರದೇ ಸ್ಪಷ್ಟ ನಿರ್ದೇಶನದಂತೆ ಮರಣೋತ್ತರವಾಗಿ ಅವರ ದೇಹವನ್ನು ಜೆ.ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯಕ್ಕೆ ದಾನ ಕೊಡಲಾಗಿದೆ. ಹೆಸರಿಸಬಹುದಾದ ಕೆಲವು ಕೃತಿಗಳಲ್ಲಿ ವಿಜ್ಞಾನ – ಸುಬ್ರಹ್ಮಣ್ಯನ್ ಚಂದ್ರಶೇಖರ್, ಆಲ್ಬರ್ಟ್ ಐನ್ಸ್ಟೈನ್ ಬಾಳಿದರಿಲ್ಲಿ, ರಾಮಾನುಜನ್ ಬಾಳಿದರಿಲ್ಲಿ, ಕೊಪರ್ನಿಕಸ್ ಕ್ರಾಂತಿ, ಕೃಷ್ಣವಿವರಗಳು, ಫರ್ಮಾ ಯಕ್ಷಪ್ರಶ್ನೆ, ವಿಜ್ಞಾನ ಸಪ್ತರ್ಷಿ, ವೈಜ್ಞಾನಿಕ ಮನೋಧರ್ಮ ಇತ್ಯಾದಿ. ಎನ್ಸಿಸಿ ದಿನಗಳು, ಮುಗಿಯದ ಪಯಣ ಆತ್ಮಕಥಾನಕಗಳು. ಸವಾಲನ್ನು ಎದುರಿಸುವ ಛಲ, ಸಪ್ತಸಾಗರದಾಚೆಯೆಲ್ಲೋ ಪ್ರವಾಸ ಕಥನಗಳು. ಸಂಪಾದಿತ ಕೃತಿಗಳಲ್ಲಿ ಮುಖ್ಯವಾದವು ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶದ ಸಂಪುಟಗಳು, ನವಕರ್ನಾಟಕ ವಿಜ್ಞಾನ ಪದವಿವರಣ ಕೋಶ. ಇಂಗ್ಲಿಷ್ - Scientific Temper, With the great minds, Crossing the dateline.